೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ
೨೦, ೨೧ ಮತ್ತು ೨೨ ಡಿಸೆಂಬರ್ ೨೦೨೪

ಕನ್ನಡವೇ ಸತ್ಯ
ಕನ್ನಡವೇ ನಿತ್ಯ



ಬೇಂದ್ರೆ ಕಂಡ ಬೆಳಗು




ಲೇಖಕರು:
ನಾಡೋಜ ಡಾ. [illegible]. ಕೃಷ್ಣಪ್ಪ

ಸ್ಥಾಪನೆ: ೧೯೧೫

೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ

ಬೇಂದ್ರೆ ಕಂಡ ಬೆಳಗು



ಲೇಖಕರು

ನಾಡೋಜ ಡಾ. ಜಿ. ಕೃಷ್ಣಪ್ಪ

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು-೫೬೦ ೦೧೮

BENDRE KANDA BELAGU Written by **Nadoja Dr. G. Krishnappa,** Published by : **Nadoja Dr. Mahesh Joshi,** President, on behalf of **Kannada Sahitya Parishattu,** Pampa Mahakavi Road, Chamarajapete, Bengaluru - 560 018. Karnataka. INDIA

Pages	:	**64**
Print	:	**2024**
Copies	:	**500**
Price	:	**Rs. 75 /-**
ಪುಟಗಳು	:	೬೪
ಮುದ್ರಣದ ವರ್ಷ	:	೨೦೨೪
ಪ್ರತಿಗಳು	:	೫೦೦
ಬೆಲೆ	:	ಎಪ್ಪತ್ತೈದು ರೂಪಾಯಿಗಳು

ಪ್ರಕಟಣಾ ವಿಭಾಗದ ಸಹ ಸಂಚಾಲಕರು : ಎನ್.ಎಸ್. ಶ್ರೀಧರಮೂರ್ತಿ
ಮುಖಪುಟ ಮತ್ತು ಒಳಪುಟ ವಿನ್ಯಾಸ : ಉದಯ ಕುಮಾರ ಹೆಚ್.

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ,
ಕನ್ನಡ ಸಾಹಿತ್ಯ ಪರಿಷತ್ತು ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಅಧ್ಯಕ್ಷರ ನುಡಿ



ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖ ಕಾರ್ಯ ಚಟುವಟಿಕೆಗಳಲ್ಲಿ ಪುಸ್ತಕ ಪ್ರಕಟಣೆ ಬಹಳ ಮುಖ್ಯವಾದದ್ದು. ಇದುವರೆಗೂ ೧,೮೦೦ಕ್ಕೂ ಹೆಚ್ಚು ಪುಸ್ತಕಗಳನ್ನು ಪರಿಷತ್ತು ಪ್ರಕಟಿಸಿದ್ದು ಅದು ಒಂದು ರೀತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನೇ ಬಿಂಬಿಸುತ್ತದೆ ಎಂದರೆ ತಪ್ಪಾಗಲಾರದು. ಪರಿಷತ್ತು ಪ್ರಕಟಿಸುವ ಪುಸ್ತಕಗಳು ಎಂದರೆ ಹೂರಣ ಮತ್ತು ಮುದ್ರಣಗಳೆರಡರಲ್ಲಿಯೂ ಶ್ರೇಷ್ಠ ಗುಣಮಟ್ಟವನ್ನು ಹೊಂದಿರುತ್ತದೆ ಎಂದು ಕನ್ನಡಿಗರು ನಂಬಿ ಪ್ರೋತ್ಸಾಹಿಸಿಕೊಂಡು ಬಂದಿದ್ದಾರೆ. ಈ ನಂಬಿಕೆಯನ್ನು ಉಳಿಸಿಕೊಳ್ಳಲು ಕನ್ನಡ ಸಾಹಿತ್ಯ ಪರಿಷತ್ತು ನಿರಂತರವಾಗಿ ಪ್ರಯತ್ನಿಸುತ್ತಾ ಬಂದಿದೆ. ಪರಿಷತ್ತಿನ ಪ್ರಕಟಣೆಗಳಲ್ಲಿ ಬಹಳ ವಿಶೇಷವಾದದ್ದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಗುವ ಪ್ರಕಟಣೆಗಳು. ಎಷ್ಟನೆಯ ಸಮ್ಮೇಳನ ನಡೆಯುತ್ತದೆಯೋ ಅಷ್ಟು ಸಂಖ್ಯೆಯ ಪುಸ್ತಕಗಳನ್ನು ಪ್ರಕಟಿಸುವ ಉನ್ನತ ಪರಂಪರೆಯೊಂದು ಪರಿಷತ್ತಿನಲ್ಲಿತ್ತು. ಕಾರಣಾಂತರಗಳಿಂದ ಅದು ನಿರಂತರವಾಗಿರಲಿಲ್ಲ. ನನ್ನ ಅವಧಿಯಲ್ಲಿ ಅದನ್ನು ಮುಂದುವರಿಸಲು ಸಂಕಲ್ಪಿಸಿದ್ದೇನೆ. ಹಾವೇರಿಯಲ್ಲಿ ನಡೆದ ೮೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೮೬ ಪುಸ್ತಕಗಳು ಪ್ರಕಟವಾಗಿ ನಾಡಿನ ಸಾಹಿತ್ಯಾಸಕ್ತರ ಮೆಚ್ಚುಗೆಯನ್ನು ಪಡೆದಿದ್ದವು. ಪ್ರಸ್ತುತ ಮಂಡ್ಯದಲ್ಲಿ ಆಯೋಜಿತವಾಗಿರುವ ೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೮೭ ಪುಸ್ತಕಗಳು ಪ್ರಕಟವಾಗುತ್ತಿವೆ. ಇಲ್ಲಿ ಸಂಖ್ಯೆಗೆ ಮಾತ್ರವಲ್ಲದೆ ಗುಣಮಟ್ಟಕ್ಕೂ ಕೂಡ ಮಹತ್ವವನ್ನು ನೀಡುತ್ತಿದ್ದು ಪ್ರಾದೇಶಿಕ, ಸಾಮಾಜಿಕ, ಪ್ರತಿಭಾ ನ್ಯಾಯಗಳನ್ನೂ ಗಮನದಲ್ಲಿರಿಸಿಕೊಳ್ಳಲಾಗಿದೆ. ವಸ್ತು ವೈವಿಧ್ಯಕ್ಕೂ ಗಮನ ನೀಡಿದ್ದು ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಬೆಳವಣಿಗೆಗಳವರೆಗೂ ಪುಸ್ತಕಗಳು ಈ ಮಾಲಿಕೆಯಲ್ಲಿವೆ. ಇದು ಕನ್ನಡ ಸಾಹಿತ್ಯ ಪರಿಷತ್ತು ಮೌಲಿಕತೆ ಮತ್ತು ಸಮತೋಲನಕ್ಕೆ ನೀಡುವ ಮಹತ್ವಕ್ಕೂ ಸಾಕ್ಷಿಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳಲ್ಲಿ ಬಹಳ ಮುಖ್ಯವಾದದ್ದು ಪ್ರಾಚೀನ ಸಾಹಿತ್ಯದ ಪರಿಶೋಧಿತ ವಿದ್ವಾಂಸರಿಂದ ಮನ್ನಣೆ ಪಡೆದ ಕೃತಿಗಳನ್ನು ಗದ್ಯಾನುವಾದದ ಜೊತೆಗೆ ಪ್ರಕಟಿಸುವುದು. ಈ ಕೃತಿಗಳು ವಿದ್ವಾಂಸರಿಂದ ಹಿಡಿದು ಅಭ್ಯಾಸಿಗಳವರೆಗೆ

ಎಲ್ಲರಿಗೂ ಉಪಯುಕ್ತವಾಗುವಂತಿವೆ. ಈ ಮಾಲಿಕೆಯಲ್ಲಿ ಇಂತಹ ಕೃತಿಗಳೂ ಇವೆ. ಪರಿಷತ್ತು ತನ್ನ ಆರಂಭಿಕ ದಿನಗಳಲ್ಲಿಯೇ ಪಠ್ಯಪುಸ್ತಕಗಳನ್ನು ಪ್ರಕಟಿಸಿತ್ತು. ಈ ಮಾದರಿಯಲ್ಲಿ ಪಠ್ಯಕ್ಕೆ ಪೂರಕವಾದ ಪುಸ್ತಕಗಳೂ ಇಲ್ಲಿವೆ. ಇವತ್ತು ಜ್ಞಾನ ಬಹಳ ವಿಸ್ತಾರವನ್ನು ಪಡೆಯುತ್ತಿದೆ. ಹಲವು ಕ್ಷೇತ್ರಗಳಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುತ್ತಿವೆ. ಈ ಕುರಿತು ಕನ್ನಡದಲ್ಲಿ ತಲಸ್ಪರ್ಶಿ ಪುಸ್ತಕಗಳಿಲ್ಲ. ಈ ಹಿನ್ನೆಲೆಯಲ್ಲಿ ಅಯಾ ಕ್ಷೇತ್ರದ ಪರಿಣತರಿಂದ ಅಧಿಕೃತ ಎನ್ನಿಸಬಲ್ಲ ಕೃತಿಗಳನ್ನೂ ರೂಪಿಸಿ ಈ ಮಾಲಿಕೆಯಲ್ಲಿ ಸೇರಿಸಲಾಗಿದೆ.

ಕನ್ನಡ ಸಾಹಿತ್ಯ ಕಂಡ ದೈತ್ಯ ಪ್ರತಿಭೆಗಳಲ್ಲಿ ದ.ರಾ.ಬೇಂದ್ರೆ (ಅಂಬಿಕಾತನಯದತ್ತ) ದೈತ್ಯ ಪ್ರತಿಭೆ. ಡಾ. ಜಿ.ಎಸ್. ಅಮೂರರು ಕರೆದಂತೆ 'ಭುವನದ ಭಾಗ್ಯ'. ಈ ಕೃತಿಯನ್ನು ರಚಿಸಿರುವ ನಾಡೋಜ ಡಾ.ಕೆ.ಕೃಷ್ಣಪ್ಪನವರು 'ಬೇಂದ್ರೆ ಕೃಷ್ಣಪ್ಪ'ನವರೆಂದೇ ಹೆಸರಾದವರು. ಬೇಂದ್ರೆ ಕಾವ್ಯದ ಸೂಕ್ಷ್ಮ ನೆಲೆಗಳನ್ನೂ ಗುರುತಿಸಿದವರು. ಅವರ ಈ ಕೃತಿ ಮಹತ್ವದ ತಾತ್ವಿಕ ನೆಲೆಯ ಅಧ್ಯಯನವಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ಹೆಮ್ಮೆಯಿಂದ ಪ್ರಕಟಿಸುತ್ತಿದೆ.

ಬೇಂದ್ರೆಯವರ ಕಾವ್ಯ ತನ್ನ ಮೂಲ ನೆಲೆಯಲ್ಲಿಯೇ ಬೆಳಕು ಮತ್ತು ಅರಿವಿನ ಶೋಧವಾಗಿದೆ. ಅದು ಅವರ ಕಾವ್ಯದ ಸ್ಥಾಯಿ ಭಾವ. ತಮ್ಮ ವಿವಿಧ ಕವಿತೆಗಳಲ್ಲಿ ಬೇಂದ್ರೆ 'ಬೆಳಕಿ'ನ ಬೇರೆ ಬೇರೆ ನೆಲೆಗಳನ್ನು ಅಧ್ಯಯನ ಪೂರ್ಣವಾಗಿ ಬಿಂಬಿಸಿದ್ದಾರೆ. ಈ ಕವಿತೆಗಳಲ್ಲಿ ವಿವಿಧ ಛಂದಸ್ಸುಗಳನ್ನು ಬಳಸಿರುವುದು ಅವರ ಪ್ರಯೋಗಶೀಲತೆಗೆ ಸಾಕ್ಷಿ ಎನ್ನಿಸುವಂತಿದೆ. ಅವರು ಕಾಣುವ ಪ್ರತಿ ಬೆಳಗೂ ಹೊಸದು, ಹೊಸ ಸಾಧ್ಯತೆಯದು. ಇಂತಹ ಅಧ್ಯಯನ ಬೇಂದ್ರೆ ಕಾವ್ಯದ ಕುರಿತು ಹೊಸ ನೆಲೆಗಳನ್ನು ನೀಡಬಲ್ಲದು. ಜ್ಞಾನ ಪ್ರಕಾಶದ ಬೆಳಕಿಗೆ ಕಣ್ಣನ್ನು ತೆರೆದು ತನ್ನೊಳಗಿನ ಬೆಳಕನ್ನು ಕಂಡುಕೊಳ್ಳಬೇಕು ಎಂಬ ಬೇಂದ್ರೆಯವರ ಮಾತಿಗೆ ಈ ಕೃತಿ ಪೂರಕವಾಗಿರುವುದು ವಿಶೇಷ. ಇದನ್ನು ಕನ್ನಡಿಗರು ಪ್ರೀತಿಯಿಂದ ಸ್ವೀಕರಿಸುತ್ತಾರೆ ಎಂಬ ಭರವಸೆ ನನ್ನದು.

ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಪ್ರಕಟಣಾ ಸಮಿತಿಯ ಇಲ್ಲಾ ಸದಸ್ಯರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
ಕಾರ್ಯಕಾರಿ ಸಮಿತಿ

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು

ಶ್ರೀ ನೇ.ಭ. ರಾಮಲಿಂಗಶೆಟ್ಟಿ	ಡಾ. ಪದ್ಮಿನಿ ನಾಗರಾಜು	ಶ್ರೀ ಬಿ. ಎಂ. ಪಟೇಲ್‌ಪಾಂಡು
ಗೌರವ ಕಾರ್ಯದರ್ಶಿಗಳು	ಗೌರವ ಕಾರ್ಯದರ್ಶಿಗಳು	ಗೌರವ ಕೋಶಾಧ್ಯಕ್ಷರು

ಸದಸ್ಯರು

ಶ್ರೀ ಬಿ.ಎನ್. ಕೃಷ್ಣಪ್ಪ, ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಬಿ. ಗೋಪಾಲಗೌಡ, ಕೋಲಾರ
ಡಾ. ಕೋಡಿರಂಗಪ್ಪ, ಚಿಕ್ಕಬಳ್ಳಾಪುರ
ಶ್ರೀ ಬಿ.ಟಿ. ನಾಗೇಶ್, ರಾಮನಗರ
ಶ್ರೀ ಕೆ.ಎಸ್. ಸಿದ್ದಲಿಂಗಪ್ಪ, ತುಮಕೂರು
ಶ್ರೀ ಕೆ.ಎಂ. ಶಿವಸ್ವಾಮಿ, ಚಿತ್ರದುರ್ಗ
ಶ್ರೀ ಬಿ. ವಾಮದೇವಪ್ಪ, ದಾವಣಗೆರೆ
ಶ್ರೀ ಡಿ. ಮಂಜುನಾಥ್, ಶಿವಮೊಗ್ಗ
ಶ್ರೀ ಮಡ್ಡೀಕೆರೆ ಗೋಪಾಲ್, ಮೈಸೂರು
ಶ್ರೀ ಎಂ. ಶೈಲಕುಮಾರ್, ಚಾಮರಾಜನಗರ
ಡಾ. ಎಚ್.ಎಲ್. ಮಲ್ಲೇಶಗೌಡ, ಹಾಸನ
ಶ್ರೀ ಸೂರಿ ಶ್ರೀನಿವಾಸ್, ಚಿಕ್ಕಮಗಳೂರು
ಶ್ರೀ ಎಂ.ಪಿ. ಕೇಶವ ಕಾಮತ್, ಕೊಡಗು
ಡಾ. ಎಂ.ಪಿ. ಶ್ರೀನಾಥ್, ದಕ್ಷಿಣ ಕನ್ನಡ
ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ
ಶ್ರೀಮತಿ ಮಂಗಲಾ ಮೆಟಗುಡ್ಡ, ಬೆಳಗಾವಿ
ಶ್ರೀ ಬಿ.ಎನ್. ವಾಸರೆ, ಉತ್ತರ ಕನ್ನಡ
ಶ್ರೀ ವಿವೇಕಾನಂದಗೌಡ ಪಾಟೀಲ್, ಗದಗ
ಡಾ. ಲಿಂಗರಾಜ ಅಂಗಡಿ, ಧಾರವಾಡ
ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ
ಶ್ರೀ ಹಾಸಿಂಪೀರ ವಾಲೀಕಾರ, ವಿಜಯಪುರ
ಶ್ರೀ ಶಿವಾನಂದ ಶೆಲ್ಲಿಕೇರಿ, ಬಾಗಲಕೋಟೆ
ಶ್ರೀ ವಿಜಯಕುಮಾರ್ ಪಾಟೀಲ ತೇಗಲತಿಪ್ಪಿ, ಕಲಬುರಗಿ
ಶ್ರೀ ಸಿದ್ದಪ್ಪ ಹೊಟ್ಟಿ, ಯಾದಗಿರಿ
ಶ್ರೀ ರಂಗಣ್ಣ ಪಾಟೀಲ್ ಅಳ್ಳುಂಡಿ, ರಾಯಚೂರು
ಶ್ರೀ ಶರಣೇಗೌಡ ಪೊಲೀಸ್ ಪಾಟೀಲ, ಕೊಪ್ಪಳ
ಡಾ. ನಿಷ್ಠಿ ರುದ್ರಪ್ಪ, ಬಳ್ಳಾರಿ
ಶ್ರೀ ಸುರೇಶ ಚನಶೆಟ್ಟಿ, ಬೀದರ್
ಶ್ರೀ ಎಂ. ಪ್ರಕಾಶಮೂರ್ತಿ, ಬೆಂಗಳೂರು ನಗರ
ಶ್ರೀ ಅಂಜನ್ ಕುಮಾರ್, ಆಂಧ್ರ ಪ್ರದೇಶ ಘಟಕ
ಡಾ. ಟಿ.ಕೆ. ಜಯಪ್ರಕಾಶ ನಾರಾಯಣ, ಕೇರಳ ಘಟಕ
ಡಾ. ತಮಿಳ್ ಸೆಲ್ವಿ, ತಮಿಳುನಾಡು ಘಟಕ
ಶ್ರೀ ಸೋಮಶೇಖರ ಜಮಶೆಟ್ಟಿ, ಮಹಾರಾಷ್ಟ್ರ ಘಟಕ
ಶ್ರೀ ಸಿದ್ದಪ್ಪ ಸಂಗಪ್ಪ ಮೇಟಿ, ಗೋವಾ ಘಟಕ
ಡಾ. ಗುಡಗಂಟಿ ವಿಠ್ಠಲ್, ತೆಲಂಗಾಣ ಘಟಕ
ನಾಡೋಜ ಡಾ. ಮನು ಬಳಿಗಾರ್, ನಿಕಟಪೂರ್ವ ಅಧ್ಯಕ್ಷರು
ಡಾ. ದೊಡ್ಡರಂಗೇಗೌಡ, ನಿಕಟಪೂರ್ವ ಸಮ್ಮೇಳನಾಧ್ಯಕ್ಷರು
ವಿಶ್ವವಿದ್ಯಾಲಯದ ಪ್ರತಿನಿಧಿಗಳು
ಡಾ. ಮಾಧವ ಎಂ.ಕೆ., ಮಂಗಳೂರು ವಿ.ವಿ.
ಡಾ. ಅಮರೇಶ ಯತಗಲ್, ಕನ್ನಡ ವಿ.ವಿ. ಹಂಪಿ
ಪ್ರೊ. ಮಲ್ಲಮ್ಮ ಆರ್. ಪಾಟೀಲ ಭಾಲ್ಕಿ, ಮಹಿಳಾ ಪ್ರತಿನಿಧಿ
ಶ್ರೀರಂಜಿನಿ ದತ್ತಾತ್ರಿ, ಶಿವಮೊಗ್ಗ, ಮಹಿಳಾ ಪ್ರತಿನಿಧಿ
ಶ್ರೀ ಎಲ್. ಕೃಷ್ಣಮೂರ್ತಿ, ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ. ಗೋವಿಂದರಾಯ ಎಂ., ಪರಿಶಿಷ್ಟ ಜಾತಿ ಪ್ರತಿನಿಧಿ
ಶ್ರೀ ಜಿ.ಕೆ. ತಳವಾರ, ಪರಿಶಿಷ್ಟ ಪಂಗಡ ಪ್ರತಿನಿಧಿ
ಶ್ರೀ ಸುನಿಲ್ ಹೆಳವರ, ಹಿಂದುಳಿದ ವರ್ಗಗಳ ಪ್ರತಿನಿಧಿ
ಶ್ರೀ ಸರ್ದಾರ್ ಬಲ್ಜಿತ್‌ಸಿಂಗ್, ಅಲ್ಪಸಂಖ್ಯಾತರ ಪ್ರತಿನಿಧಿ
ಶ್ರೀ ಡ್ಯಾನಿ ಪಿರೇರಾ, ಅಲ್ಪಸಂಖ್ಯಾತರ ಪ್ರತಿನಿಧಿ
ಶ್ರೀ ನಬಿಸಾಬ ಕುಷ್ಟಗಿ, ಸಂಘ-ಸಂಸ್ಥೆಗಳ ಪ್ರತಿನಿಧಿ
ಶ್ರೀ ಬಿ.ಎಚ್. ಸತೀಶ್‌ಗೌಡ, ಸಂಘ-ಸಂಸ್ಥೆಗಳ ಪ್ರತಿನಿಧಿ
ಡಾ. ಎಚ್.ಎಸ್. ಮುದ್ದೇಗೌಡ, ಸಂಘ-ಸಂಸ್ಥೆಗಳ ಪ್ರತಿನಿಧಿ
ಶ್ರೀ ಜಿ. ರುದ್ರಯ್ಯ, ಸಂಘ-ಸಂಸ್ಥೆಗಳ ಪ್ರತಿನಿಧಿ
ಡಾ. ಮೀರಾ ಶಿವಲಿಂಗಯ್ಯ, ಸಂಚಾಲಕರು, ಮಂಡ್ಯ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ಕಾರದ ಪ್ರತಿನಿಧಿ (ಪದನಿಮಿತ್ತ)
ಸಂಘ ಸಂಸ್ಥೆಗಳ ಉಪನಿಬಂಧಕರು, ಸರ್ಕಾರದ ಪ್ರತಿನಿಧಿ (ಪದನಿಮಿತ್ತ)
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (ಪದನಿಮಿತ್ತ)

ಲೇಖಕರ ಮಾತು

ಕನ್ನಡ ಕಾವ್ಯ ಪರಂಪರೆಯಲ್ಲಿ ಸೂರ್ಯೋದಯವನ್ನು ನವನವೀನ ರೂಪಕಗಳಲ್ಲಿ ಬಣ್ಣಿಸಿ 'ಬೆಳಗು' ವನ್ನು ಜನಮನದ ಬೆಡಗಾಗಿಸಿದವರು ಬೇಂದ್ರೆ. ಅದು ಕನ್ನಡ ನವೋದಯ ಸಾಹಿತ್ಯವನ್ನು ಸಾಂಕೇತಿಕವಾಗಿ ಪ್ರಕಟಪಡಿಸಿದ ಕವನ. ಆ 'ಮೂಡಲ ಮನೆಯ ಮುತ್ತಿನ ನೀರಿನ' ಬೆಳಗಿನ ವರ್ಣನೆಯಷ್ಟೇ ಕನ್ನಡ ಸಹೃದಯರಲ್ಲಿ ಮನೆ ಮಾಡಿದೆ. ಅದರ ಜೊತೆ ಬೇಂದ್ರೆಯವರು ಉಷಃ ಕಾಲವನ್ನು, ನಸುಕನ್ನು, ದಿಕ್ಕರಳಿ ಬೆಳಗಾದ ಪ್ರಕೃತಿ ಲೀಲೆಯನ್ನು ಇಪ್ಪತ್ನಾಲ್ಕು ಕವನಗಳಲ್ಲಿ ವೈವಿಧ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಅದರಲ್ಲಿ 'ಸುಪ್ರಭಾತೇ'ಎಂಬ ಸಂಸ್ಕೃತ ಕವನವಿದೆ.

ಮಕ್ಕಳ ಮನಸ್ಸನ್ನು ಸೆಳೆದಾಡಿ ಅವರಲ್ಲಿ ಕುತೂಹಲವನ್ನು ಉಂಟುಮಾಡುವ ಸೂರ್ಯೋದಯವನ್ನು ಮಿಳುಕ್ ಐತಿ: ಬೆಳಕು ಇದೆ' ಎಂಬ ಕವನದಲ್ಲಿ ನುಡಿ ಮಾಂತ್ರಿಕತೆಯಿಂದ ಬೆರಗನ್ನುಂಟು ಮಾಡಿದ್ದಾರೆ. ಹೀಗೆ ನಾನಾ ಪ್ರಕಾರವಾಗಿ ಬೇಂದ್ರಯವರು ಚಿತ್ರಿಸಿರುವ 'ಬೆಳಗು'ವನ್ನು ಸಹೃದಯರಿಗೆ ಮನನವಾಗಿಸುವ ಪ್ರಯತ್ನ ಇದಾಗಿದೆ.

ಬೇಂದ್ರೆಯವರ ಅರುಣೋದಯದ ಕವನಗಳ ಆಂತರ್ಯದ ನಾಡಿ ಮಿಡಿದು ರಚಿಸಿದ ವಿಮರ್ಶಾ ಲೇಖನಗಳ ಗುಚ್ಛ 'ಬೇಂದ್ರೆ ಕಂಡ ಬೆಳಗು'. ಈ ಕೃತಿಯನ್ನು ಬೇಂದ್ರೆ ಕಾವ್ಯಾಭಿಮಾನಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರಿಗೆ ಅರ್ಪಿಸಿದ್ದೇನೆ, ಇದನ್ನವರು ಪ್ರೀತಿಯಿಂದ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇದನ್ನು ಆಸಕ್ತಿಯಿಂದ ಪ್ರಕಾಶಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ ನನ್ನ ಮನಃಪೂರ್ವಕ ನಮನಗಳು.

ನಾನು ಈ ಮೊದಲು ರಚಿಸಿರುವ ಕೃತಿಗಳನ್ನು ಓದಿ ಸವಿದ ಕನ್ನಡ ಸಾಹಿತ್ಯಾಸಕ್ತರು ಮತ್ತು ವಿದ್ವನ್ಮಣಿಗಳು ಈ ಕೃತಿಯನ್ನು ಪ್ರೀತಿಯಿಂದ ಸ್ವೀಕರಿಸಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು
೧೮-೧೦-೨೦೨೪


ಡಾ. ಜಿ. ಕೃಷ್ಣಪ್ಪ

ಅರ್ಪಣೆ

ಯೋಗಿ ಗೋವಿಂದ ಭಟ್ಟರ ಮರಿ ಮೊಮ್ಮಗ,
ಬೇಂದ್ರೆ ಕಾವ್ಯಾಭಿಮಾನಿ,
ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ
ನಾಡೋಜ ಡಾ. ಮಹೇಶ ಜೋಶಿ
ಅವರಿಗೆ

ಪರಿವಿಡಿ

* * *



೧

ಬೆಳಗು

ದ.ರಾ. ಬೇಂದ್ರೆಯವರು ರಚಿಸಿದ 'ಬೆಳಗು' ಕವನ ೧೯೧೯ರ 'ಸ್ವಧರ್ಮ' ಪತ್ರಿಕೆಯಲ್ಲಿ ಬೆಳಕು ಕಂಡಿತು. ಅದು ನವನವೀನ ಕಲ್ಪನೆ, ನೂತನ ಛಂಧಃ ಪ್ರಯೋಗದಿಂದ ಪಂಚೇಂದ್ರಿಯಗಳ ಜಾಗೃತಿ, ಶಾಂತಿಯ ಅನುಭವವನ್ನು ಕಾವ್ಯವಾಗಿ ಕಡೆದಿಟ್ಟಿತು. ಅದು ನವೋದಯ ಕಾವ್ಯದ ಉದಯವನ್ನು ಸಾಂಕೇತಿಕ ವಾಗಿ ಪ್ರಕಟಪಡಿಸಿದ ಕವನವಾಗಿತ್ತು. .

ಆ ಹೊಸತು ಜನಕ್ಕೆ ಮೆಚ್ಚುಗೆ ಆಗುವುದೇ ಇಲ್ಲವೋ ಎಂದು ಅವರು ಅದನ್ನು 'ಸದಾನಂದ ಜಂಗಮ' ಎಂಬ ಕಾವ್ಯನಾಮದಲ್ಲಿ ಪ್ರಕಟಿಸಿದ್ದರು. ಅವರು ೧೯೧೮ರ 'ಪ್ರಭಾತ' ಪತ್ರಿಕೆಯಲ್ಲಿ 'ತುತೂರಿ' ಮತ್ತು 'ಸರಸ್ವತಿ' ಕವನಗಳನ್ನು 'ಅಂಬಿಕಾತನಯದತ್ತ' ಕಾವ್ಯನಾಮದಿಂದ ಬರೆದಿದ್ದರು. ಅವು ಅವರ ಮೊದಲ ಪ್ರಕಟಿತ ಕವನಗಳಾಗಿದ್ದವು. ಅದೇ ಕಾವ್ಯನಾಮವನ್ನು ಅವರು ಅನಂತರ ಉಳಿಸಿ ಕೊಂಡರು. 'ತುತೂರಿ' ಯಲ್ಲಿ ಕಾವ್ಯ ಮೊಳಗಿಸುವ ಧ್ವನಿ, ನಾಡುನುಡಿಯ ಅಭಿಮಾನ, ನಾಡಿಗರನ್ನು ಎಚ್ಚರಿಸುವ ನುಡಿಗಳಿವೆ. ಅದು ಕನ್ನಡಿಗರ ಮಂಗಲ ನಾದ ವಾಗಿ ಹೊಮ್ಮಿದೆ.

ಸಂಸ್ಕೃತ, ಪ್ರಾಕೃತ, ಪ್ರಾಚೀನ ಕನ್ನಡ, ಜನಪದ ಗೀತ, ಪಾಶ್ಚಾತ್ಯ ಛಂದಸ್ಸುಗಳ ಅಧ್ಯಯನ ನಡೆಸಿದ ಬೇಂದ್ರೆಯವರು ಭಾವಲಹರಿಗೆ ತಕ್ಕಂತೆ ವಿವಿಧ ನವನವೀನ ಛಂದಸ್ಸುಗಳನ್ನು ತಮ್ಮ ಕವನಗಳಲ್ಲಿ ಪ್ರಯೋಗಿಸಿದ್ದಾರೆ. ಮಂದಾಲನಿಲ ರಗಳೆ ಮಧುರತಿಯ ಛಂದೋಬಂಧ. ನಾಲ್ಕು ನಾಲ್ಕು ಮಾತ್ರೆಗಳ ನಾಲ್ಕು ನಾಲ್ಕು ಚರಣಗಳ ನಿಯತ ರೂಪ (ಹರಿಹರನ 'ಕುಂಬಾರ ಗುಂಡಯ್ಯ'). ಅದನ್ನು ಬೇಂದ್ರೆಯವರು 'ಬೆಳಗು' ಕವನದಲ್ಲಿ ತಮ್ಮ ಭಾವಗಾತ್ರಕ್ಕೆ ತಕ್ಕಂತೆ ಒಡೆದು ಕಟ್ಟಿದ್ದಾರೆ. ಅದರ ಛಂದೋಬಂದವನ್ನು ಬೆಳಗಿನ ಮೆಲುಗಾಳಿಯ ಆನಂದ, ಉತ್ಸಾಹ, ನಾಟ್ಯಾಭಿವ್ಯಕ್ತಿಗೆ

ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಆ 'ಬೆಳಗು' ಅವರು ಧಾರವಾಡದ ಅತ್ತಿಕೊಳ್ಳದಲ್ಲಿ ಕಂಡ ಬೆಡಗು!

ಬೇಂದ್ರೆಯವರು "ಭಾವಗೀತೆಗಳಲ್ಲಿ ನಾನು ಗತಾನುಗತಿಕ ಷಟ್ಪದಿಗಳನ್ನು ಬಳಸಿದೆ. ಸಂಗಡವೇ ಹೊಸ ಛಂದಸ್ಸುಗಳ ಪ್ರಯೋಗವನ್ನು ಮಾಡಿದೆ. ಮುಂದೆ ಮಾಸ್ತಿಯವರಿಗೂ ನನಗೂ ಗಹನ ಸ್ನೇಹಕ್ಕೆ ದಾರಿಮಾಡಿಕೊಟ್ಟ, ಮೊದಲು 'ಸ್ವಧರ್ಮ'ದಲ್ಲಿ ಬೆಳಕು ಕಂಡ ಮತ್ತು 'ಗರಿ'ಯಲ್ಲಿ ಪ್ರಥಮ ಪದ್ಯವಾಗಿ ಮುದ್ರಿತವಾದ 'ಬೆಳಗು' (ಮೂಡಲ ಮನೆಯ ಮುತ್ತಿನ ನೀರಿನ) ಕವಿತೆಯೇ ಬಹುಶಃ ನನ್ನ ಮೊದಲ ನೂತನ ಛಂದಃ ಪ್ರಯೋಗ (೧೯೧೯). ಇದು ಹೊಸ ಛಂದಸ್ಸು... ಬಹುಶಃ ಇಕ್ಕಾಟ್ಟಾದ ಮಾತ್ರಾ ಮಿತಿಗಳುಳ್ಳ ಷಟ್ಪದಿಗಳು ನನ್ನ ಸ್ವಾಭಾವಿಕ ಸ್ವಾತಂತ್ರ್ಯ ಪ್ರಿಯ ಆತ್ಮಕ್ಕೆ ಹಿಡಿಸಿರಲಿಕ್ಕಿಲ್ಲ. ಧಾರವಾಡದಲ್ಲಿ ಯಾವಾಗಲೂ ಕಿವಿದೆರೆದು ಓಡಾಡುವ ನನಗೆ ದಾಸರ ಪದದಿಂದ ಹೊಲ್ಲರ ಹಾಡಿನವರೆಗೆ ಎಲ್ಲವನ್ನೂ ಕೇಳಿ, ಕೇಳಿ, ಒಂದು ಸಂಸ್ಕಾರ ಬಂದಿರಬೇಕು. ಸಾಂಗತ್ಯ ಮತ್ತು ಲೋಕಗೀತೆಗಳ ಅಂಶಗಣಗಳು ಕೊಡುವ ಸ್ವಾತಂತ್ರ್ಯ. ಮಾಧುರ್ಯಗಳು ರಕ್ತಗತವಾಗಿರಬೇಕು. ಇದೆಲ್ಲ ಸೇರಿ ಛಂದಸ್ಸುಗಳಲ್ಲಿ ನವನವೋನ್ಮೇಷಣೆ ನನಗೆ ಸಾಧ್ಯವಾಗಿರಬೇಕು" ಎಂದು ಹೇಳಿದ್ದಾರೆ. (ಸಾಹಿತ್ಯ ಮತ್ತು ಸಾರ್ಥಕತೆ)

ಚತುರ್ಮುಖ ಸೌಂದರ್ಯ

೧೯೧೭ರ ಮೇ ತಿಂಗಳ ಆರ್ಯ ಪತ್ರಿಕೆಯಲ್ಲಿ ಶ್ರೀ ಅರವಿಂದರು ಕೀಟ್ಸ್ ಕವಿಯ ಕಾವ್ಯ ವಿಮರ್ಶೆ ಮಾಡುತ್ತ ಸೌಂದರ್ಯದ ನಾಲ್ಕು ನೆಲೆಗಳನ್ನು ಮುಟ್ಟಿದರೆ ಪೂರ್ಣತೆ ಬರುತ್ತದೆ ಎಂದು ತಿಳಿಸಿದ್ದರು. ಪ್ರತಿಯೊಂದು ನುಡಿಯಲ್ಲಿ ಒಂದೊಂದು ನೆಲೆ. ನಾಲ್ಕು ನುಡಿಯಲ್ಲಿ ನಾಲ್ಕು ನೆಲೆ. ಅದನ್ನು ಬೇಂದ್ರೆಯವರು ನಾಲ್ಕು ಬಗೆಯ ತಿಳಿವಳಿಕೆ ಎಂದು ಅರ್ಥ ಮಾಡಿಕೊಂಡರು. ಅದನ್ನು ಚತುರ್ಮುಖ ಸೌಂದರ್ಯ ಎಂಬುದಾಗಿ ಸಿದ್ದಪಡಿಸಿದರು.

1. Sensuous Beauty – ಐಂದ್ರಯಿಕ ಸೌಂದರ್ಯ
2. Imaginative Beauty – ಕಾಲ್ಪನಿಕ ಸೌಂದರ್ಯ
3. Intellectual Beauty – ಬೌದ್ಧಿಕ ಸೌಂದರ್ಯ
4. Ideal Beauty – ಅದರ್ಶ ಸೌಂದರ್ಯ

'ಬೆಳಗು' ಕವನದ ಮೊದಲ ಮತ್ತು ಎರಡನೆಯ ನುಡಿಯು ಐಂದ್ರಯಿಕ ಸೌಂದರ್ಯವನ್ನು 'ಮೂಡಲ ಮನೆಯ ಮುತ್ತಿನ ನೀರಿನ ಎರಕ'ವಾಗಿ ಹೊಸ ಬೆಡಗಿನಲ್ಲಿ ಕಂಡಿದೆ. ಮೂರು ಮತ್ತು ನಾಲ್ಕನೆ ನುಡಿಯ ಕಾಲ್ಪನಿಕ ಸೌಂದರ್ಯದಲ್ಲಿ

ಮಿಂದು ದುಂಬಿಯಂತೆ ಮಾಯಾಲೋಕ ಸೃಷ್ಟಿಸಿದೆ. ಐದು ಮತ್ತು ಆರನೆಯ ನುಡಿಯು ಬೌದ್ಧಿಕ ಸೌಂದರ್ಯವನ್ನು 'ಗಿಡಗಂಟೆಯಾ ಕೊರಳೊಳಗಿಮದ ಹಕ್ಕಿಗಳ ಹಾಡು' ಆಗಿಸಿ ಹೊಸ ಬಗೆಯ ಕಾವ್ಯನುಭವ ನೀಡಿದೆ. ಏಳನೆಯ ನುಡಿಯು ಆದರ್ಶ ಸೌಂದರ್ಯವನ್ನು ಅನುಭಾವದ ನೆಲೆಗೆ ಕೊಂಡೊಯ್ದಿದೆ. ಈ ಲೋಕಕ್ಕೆ ಪ್ರತಿದಿನ ಸೂರ್ಯ ನೀಡುವ ಶಾಂತಿ, ಪ್ರೀತಿ ಜನಮನದಲ್ಲಿ ಒಂದಾಗಿ ಈ ನೆಲ ಗಂಧರ್ವರ ಸೀಮೆಯಾಗಲಿ ಎಂಬ ಮನುಜ ಕುಲದ ಗುರಿಯಾಗಿಸಿದೆ.

ಬೇಂದ್ರೆಯವರು ಕವಿ ರವೀಂದ್ರನಾಥ ಟ್ಯಾಗೋರ ಮತ್ತು ಯೋಗಿ ಶ್ರೀ ಅರವಿಂದರನ್ನು ತಮ್ಮ ಗುರುಗಳೆಂದು ಆರಾಧಿಸುತ್ತಿದ್ದರು. ಅದನ್ನು ಅವರು ಕಾವ್ಯದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ:

'ಅರಿವೆಂಬ ರವಿಯು ಮೂಡಲು
ಗುರುವೆಂಬಾತ್ಮರವಿಂದವರಳಿತು ನನ್ನೊಳ್.'

ಬೇಂದ್ರೆಯವರ ಕಾವ್ಯದಲ್ಲಿ ಚತುರ್ಮುಖ ಸಿದ್ಧಾಂತ ಹಾಸು ಹೊಕ್ಕಾಗಿ ಹೋಗಿದೆ. ಆ ಸಿದ್ಧಾಂತದಿಂದ ನಾಲ್ಕು ನುಡಿಗಳಲ್ಲಿ ಒಂದೊಂದು ಸೌಂದರ್ಯ ಲಕ್ಷಣಗಳನ್ನು ಸೃಷ್ಟಿಸಿ ಈ ಕವನಗಳನ್ನು ರಚಿಸಿದರು: 'ಚಂದ್ರ', 'ಗಂಡಸು ಹೆಂಗುಸಿಗೆ', 'ಚತುರ್ಮುಖ ಸೌಂದರ್ಯ', 'ಹಂಪಿ ವಿಜಯನಗರ ದರ್ಶನ',

ಗರುಡನೊಲು ಅಮೃತಕ್ಕೆ ಹಾರುತಿಹುದು

ಬೇಂದ್ರೆಯವರ ಭಾವಗೀತೆ ಎಂಬುದು ಸತ್ಯ ಸೂರ್ಯನನ್ನು ಇದಿರು ಗೊಂಡು, ಲೋಕದ ನಿಜ ಸೀತಿಯ ಎಲ್ಲ ಮುಖಗಳನ್ನು ಸಾಕ್ಷಾತ್ ಲಕ್ಷ್ಯವಹಿಸಿ (ಕಣ್ಣರಿಕೆ) ಪರಿಶೀಲಿಸುತ್ತ ಆದಶಧ ಸೌಂದರ್ಯದಲ್ಲಿ ಅಭಿವ್ಯಕ್ತಿಸಿದ ಕಾವ್ಯಸಿದ್ಧಿ. ಹಾಗಾಗಿ 'ಅಂಬಿಕಾತನಯದತ್ತ'ರ ಕಾವ್ಯ ಚೈತನ್ಯ 'ಗರುಡನೊಲು ಅಮೃತಕ್ಕೆ ಹಾರುತಿಹುದು.' ಗರುಡನು ಅಮೃತವನ್ನು ಸವಿದಂತಹ ಸವಿ ಅವರ ಕಾವ್ಯ. ಅದು ಅಮರ. ಆ ಕಾರಣವಾಗಿ ಸಹೃದಯರು ಅವರ ಕಾವ್ಯ ಅಮೃತದ ಮಾಧುರ್ಯದಲ್ಲಿ ಉತ್ತಮ ಮಾನವರಾಗಿ ಆನಂದಾನುಭವದಲ್ಲಿ ಲೀನರಾಗಿದ್ದಾರೆ! ಅಂತಹ ಕಾವ್ಯಾಮೃತಿ ಸೇವನೆಯಲ್ಲಿ ಕನ್ನಡಿಗರು ಅಮರತ್ವದ ಭಾವಾನಂದದಲ್ಲಿ ಮೀಯುತ್ತಿದ್ದಾರೆ!

'ಸತ್ಯ ಸೂರ್ಯನ ಇದಿರುಗೊಂಡು ಕಣ್ಣರಿಕೆಯಲ್ಲಿ
ಗರುಡನೊಲು ಅಮೃತಕ್ಕೆ ಹಾರುತಿಹುದು.'

(ನೆನವು : ಜೀವಲಹರಿ)

* * *

'ತೊಗಲ ನಾಲಿಗೆ ನಿಜವ ನುಡಿಯಲೆಣಿಸಿದರೆ, ತಾ–
ನಂಗೈಲಿ ಪ್ರಾಣಗಳೂ ಹಿಡಿಯಬೇಕು.

ಇಲ್ಲದಿರೆ ನೀರಿನೊಲು ತಣ್ಣಗಿದ್ದವನದನು
ಉರಿಯ ನಾಲಗೆಯಿಂದ ನುಡಿಯಬೇಕು. **(ಸತ್ಯವೀರ : ಉಯ್ಯಾಲೆ)**

ಎಂಬ 'ಸತ್ಯವೀರ' ನಂತೆ 'ಸತ್ಯಸೂರ್ಯ'ರಾಗಿ ಕಾವ್ಯರಚಿಸಿದವರು ಬೇಂದ್ರೆ. ಭಾರತಮಾತೆಯ ದಾಸಮುಕ್ತಿಗೆ ಭಾರತೀಯರು ವೀರಶ್ರೀಗಳಾಗಬೇಕು. ಭೈರವನನ್ನು ಸ್ಮರಿಸಿ, ಕಾಲಿಯನ್ನು ಆರಾಧಿಸಿ ಪ್ರಲಯವನ್ನು ಆಹ್ವಾನಿಸಿಬೇಕು. ಬ್ರಿಟಿಷರ ಬಲಗಾಲ ಬುಡದಲ್ಲಿ ಸಿಕ್ಕಿಕೊಂಡಿರುವ ಸ್ವಾತಂತ್ರ್ಯವನ್ನು ಪಡೆಯಲು ನರಬಲಿಬೇಕು ಎಂದು ಅವರು ೧೯೩೦ರಲ್ಲಿ 'ನರಬಲಿ' ಕವನ ರಚಿಸಿದರು. ಅದರಿಂದ ಬ್ರಿಟೀಷರ ಕಂಗೆಣ್ಣಿಗೆ ಗುರಿಯಾದರು. ೧೯೩೨ರಲ್ಲಿ ಬೆಳಗಾವಿಯ ಹಿಂಡಲಗಾ ಜೇಲಿನಲ್ಲಿ ಸೆರೆವಾಸ ಅನುಭವಿಸಿದರು.

ಅವರಿಗೆ ಯಾರೂ ಕೆಲಸ ಕೊಡಬಾರದೆಂದು ಬ್ರಿಟೀಷರು ಆದೇಶ ಹೊರಡಿಸಿದರು. ಆಗ ನಿರಾಶರಾಗದ ಬೇಂದ್ರೆ ಸರಳ ಬದುಕನ್ನು ತಮ್ಮ ಜೀವನ ಶೈಲಿಯನ್ನಾಗಿಸಿಕೊಂಡದ್ದರಿಂದ ವಿಭಿನ್ನವಾಗಿ ಯೋಚಿಸಿದರು. ತನಗೆ ಲಭ್ಯವಾಗಿರುವ ನೈಸರ್ಗಿಕ ಪ್ರತಿಭಾಶಕ್ತಿಯನ್ನು ಪ್ರಜ್ವಲಗೊಳಿಸಿಕೊಳ್ಳುವ ಬಗ್ಗೆ ಚಿಂತಿಸಿದರು. ತನ್ನಲ್ಲಿ ಒಂದಾಗಿರುವ ಸಹಜ ಸಾಮರ್ಥ್ಯವಾದ ವಿದ್ಯೆ, ಅಧ್ಯಯನದ ಕಡೆಗಮನ ಕೊಡಲು ನಿರ್ಧರಿಸಿದರು. ಎಂ.ಎ. ಅಧ್ಯಯನ ಮಾಡಲು ೧೯೩೩ರಲ್ಲಿ ತನ್ನ ೩೭ನೇ ವಯಸ್ಸಿನಲ್ಲಿ ಪುಣೆಗೆ ಹೋದರು. ಮಧ್ಯವಯಸ್ಸಿನ, ವಿದ್ಯಾವಂತ ಸಂಸಾರಿಯ ಒಳನೋವು, ಭಾವ ತುಮುಲವನ್ನು 'ಸಖೀಗೀತ' ಕಾವ್ಯದಲ್ಲಿ ಹೀಗೆ ವರ್ಣಿಸಿದರು :

'ನರಬಲಿ' ಕವನವು ಬಲಿ ಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು
ಮನೆಯನು ಮುರಿದಿತು ಹಾರುವಿಹಂಗಮ!
ಜಂಗಮ ದೀಕ್ಷೆಯು ನಿನಗೆಂದಿತು.

ಕತ್ತಲನು ಬೆಳಗಿಸುವ ಬೆಳಗು ಮಾತು

ಬೇಂದ್ರೆಯವರಿಗೆ ಮಾತು ಎಂದರೆ ಮಾತೆ. ಅವಳಿಂದ ಕಲಿತ ಅರಿವಿನ ಪ್ರಕಟ ರೂಪ ಮಾತು. ಅದು ಅವರಿಗೆ ಜಗಜ್ಯೋತಿ–ಜ್ಞಾನದದೇವಿಗೆ, ಬೇಂದ್ರೆಯವರ ಭಾವ ಪ್ರಪಂಚದ ಒಳ ತಿಳಿವು ಹರಿದು ಸಹೃದಯರ ಮನ ಮನೆಯನ್ನು ಬೆಳಗಿಸಿದ ನುಡಿ ಕಿರಣ ಅವರ ಮಾತು ದೇವರನೆಲೆ, ಅಮೃತ. ಅದಕ್ಕೆ ಅವರು ಹೀಗೆ ನಮನವನ್ನು ಸಲ್ಲಿಸಿದ್ದಾರೆ.

ನಮೋ ಮಾತೆಗೇ, ನಮೋ ಮಾತಿಗೇ
ನಮೋ ಜಗಜ್ಯೋತಿಗೇ
ಭಾವ ಪ್ರಪಂಚಕೆ, ದೇವನ ಮಂಚಕೆ
ನಮೋ ಸುಧಾಸ್ಫೂತಿಗೇ! (ನಮನ)

ಬೇಂದ್ರೆಯವರ ಮಾತಿನ ಮೋಡಿಗೆ ಒಳಗಾಗದವರಿರಲಿಲ್ಲ. ವಾಮನ ಬೇಂದ್ರೆ ಹೇಳಿದಂತೆ ಅವರು ಮನೆಗೆ ಬಂದ ಕಾವ್ಯ ಸಹೃದಯರೊಡನೆ ಮಾತಾಡಿ ಬೆವತು ಹೋಗುತ್ತಿದ್ದರು. ಸಹೃದಯರ ತೆರೆದ ಕಿವಿಗೆ ತಮ್ಮ ಜೀವನಾನುಭವದ ನಂಬಿಕೆಯ ಹದಗೊಂಡ ನುಡಿಯ ರಸಧಾರೆಯನ್ನುಣಿಸಿ ಅವರು ಸದಾ ನೆನೆಯುವಂತೆ ಮಾಡುವ ಮಾತಿನ ಮೋಡಿಗಾರರಾಗಿದ್ದರು. ಅವರಿಗೆ ಮಾತು ಕತ್ತಲನ್ನು ಅರ್ಥಾತ್ ಅಜ್ಞಾನವನ್ನು ತೊಲಗಿಸಿ ಬೆಳಗಿಸುವ ದಿವ್ಯ ಮಿಂಚಾಗಿತ್ತು.

ತುಂಬಿ ಆಡಿದ ಮಾತು
ನಂಬಿ ಆಡಿದ ಮಾತು
ಕತ್ತಲನು ಬೆಳಗಿಸುವ ಬೆಳಗು ಮಾತು. **(ತೂತು ಮಾತು : ನಮನ)**

ಬೆಳಕಿನ ಬಾಳಾಗಬೇಕು

ಭೂಮಿ ನಮಗೆ ತಾಯಿಯೇ ಆಗಿದ್ದಾಳೆ, ಆದ ಕಾರಣ ಬೇಂದ್ರೆ 'ಭೂಮಿ ತಾಯಿಯ ಮೈಯ ಹಿಡಿಮಣ್ಣ ಗುಡಿ ಕಟ್ಟಿ । ನಿಂತಂಥ ಮೂರ್ತಿ ನಾನು' ಎಂದು ಹೇಳಿಕೊಂಡಿದ್ದಾರೆ. ಭೂಮಿ ಸೂರ್ಯನ ಸುತ್ತ ತಿರುಗುತ್ತದೆ. ಸೂರ್ಯನ ಬೆಳಕು ಭೂ ಭಾಗದ ಯಾವ ಕಡೆಗೆ ಬಿದ್ದಿರುತ್ತದೋ ಆ ಭಾಗದಲ್ಲಿ ಹಗಲು ಉಂಟಾಗುತ್ತದೆ. ಅದನ್ನು ಕವಿಯ ಖಗೋಳ ಶಾಸ್ತ್ರದ ಆಧಾರದಿಂದ ಕಾವ್ಯ ಭಾಷೆಯಲ್ಲಿ ಮನ ಮುಟ್ಟುವಂತೆ ಹೀಗೆ ಬಣ್ಣಿಸಿದ್ದಾರೆ.

ತನ್ನ ತಾ ಸುತ್ತ್ಯಾಳೊ
ಹೊತ್ತಿನ ಬೆನ್ಹತ್ತ್ಯಾಳೊ
ತಿಂಗಳನ ಬಗಲಾಗೆತ್ತ್ಯಾಳೋ
ಗೆಣೆಯಾ ಎತ್ತ್ಯಳೋ. **(ಚಿಗರಿಗಂಗಳ ಚೆಲುವಿ : ಸಖೀಗೀತ)**

ಅವರು ಮತ್ತೆ ಕುತೂಹಲ ಕೆರಳುವಂತೆ ಚಮತ್ಕಾರ ಪೂರ್ವಕವಾಗಿ ಹೀಗೆ ಚಿತ್ರಿಸಿದ್ದಾರೆ :

ಭೂಮಿ ತಿರುಗತಾ ಇರತ್ತದ
ಬೆಳಕು ತಿರುಗದಽ ಬರತಽದ **(ಚತುರೋಕ್ತಿ ಮತ್ತು ಇತರ ಕವನಗಳು)**

ಆ ಬೆಳಕಿನಲ್ಲಿ ರಸವಿದೆ, ಸೃಜನ ಶಕ್ತಿ ಇದೆ. ಅದು ಜೀವ ಸ್ಪರ್ಶವನ್ನು ಹೊಂದಿದೆ. ಉಷೆಯ ಮುಖದಿಂದ ಅರಳಿ ಪ್ರಾಣಾತ್ಮನಾದ ಜೀವ ಹರ್ಷನಾದ ಬೆಳಕು ಬರುತ್ತಾನೆ ಎಂದು ಹೀಗೆ ಬಣ್ಣಿಸಿದ್ದಾರೆ :

ಬೆಳಕಿಸಿಹುದು ರಸ, ಬೆಳಕೆ ಅಹುದುರಸ
ಬೆಳಕೆ ಜೀವ-ಸ್ಪರ್ಷ
ಆ ಉಷಾವದನೆ ಬಿರಿದು ಬರುವ ಪ್ರಾ
ಣಾತ್ಮ ಜೀವಹರ್ಷ **(ಯಕ್ಷ-ಯಕ್ಷಿ)**

ಬೇಂದ್ರೆಯವರು 'ಕಣ್ಣು ತಿಳಿ ಆದರs ಎಲ್ಲಾ ತಿಳಿ' ಎಂಬ ಕವನದಲ್ಲಿ ಬೆಳಕನ್ನು ಅರಸುವ ಮನಸ್ಸಿನವರಾಗಬೇಕ ಎಂದು ಹೇಳುತ್ತ, ವ್ಯಕ್ತಿಗೆ ಅರಿವು ಬೆಳಕಿನಿಂದ, ಬೆಳಕಿನಿಂದ ಕಣ್ಬಿಟ್ಟು ಜಗತ್ತನ್ನು ತಿಳಿಯುವ ವ್ಯಕ್ತಿಯ ಕಣ್ಣುಗಳು ತಿಳಿಯಾಗಬೇಕು, ಶುದ್ಧವಾಗಬೇಕು. ಅವನು ತಿಳಿಗಣ್ಣನ್ನು ಅಂದರೆ ಒಳಗಣ್ಣು ತಿಳಿಯಾದವನು. ಅಂತಹವನಿಗೆ ಜಗವೆಲ್ಲವೂ ತಿಳಿಯಾದವನು. ಅಂತಹವನಿಗೆ ಜಗವೆಲ್ಲವೂ ತಿಳಿಯುತ್ತದೆ. ಅವನಲ್ಲಿ ಶಾಂತಿ ನೆಮ್ಮದಿ ನೆಲಸುತ್ತದೆ. 'ಗಂಗೆ ಹರಿದಷ್ಟೂ ತಿಳಿಯುತ್ತಾ ತಿಳಿಯುತ್ತಾ ಹೋಗುತ್ತದೆ! ತಿಳಿಯಾಗುತ್ತದೆ, ಎಷ್ಟು ತಿಳಿಯುತ್ತಾದೆ ಎಂದರೆ, ತಿಳಿಹೋಗಿಸುವಂಥ, ಕದಡು ಮಾಡುವಂಥ ಕ್ರಿಮಿಗಳು ಅದರಲ್ಲಿ ಬದುಕಲಾರವು'. (ಮಾತೆಲ್ಲ ಜ್ಯೋತಿ), 'ತಿಳಿಗೇಡಿತನದ ಕತ್ತಲೆಯು ನಮ್ಮನ್ನು ಗುಡ್ಡದಂತೆ ಅಡ್ಡಗಟ್ಟಬಹುದು; ಆದರೆ ತಿಳಿವಿನ ಬೆಳಕು ಬೆಟ್ಟಬೆಟ್ಟವಾಗಿ ತನ್ನ ಧವಲಗಿರಿ ಶೃಂಗವನ್ನೆತ್ತಿ ಅದಕ್ಕೂ ಮೇಲೆ ಬೆಳಗುವದು, ಬೆಳಗಬೇಕು ಎಂಬುದನ್ನು ನಾವು ಮರೆಯಬಾರದು' (ಸಾಹಿತ್ಯದ ವಿರಾಟ್ ಸ್ವರೂಪ) ಎಂದು ಬೇಂದ್ರೆಯವರು ನುಡಿದಿದ್ದಾರೆ. ಅಂತಹ ತಿಳಿವನ್ನು ನೀಡುವುದು ಬೆಳಕು. ಆ ಬೆಳಕನ್ನು ಸೂರ್ಯನಿಂದ ನಮಗೆ ದಯಪಾಲಿಸುವವಳು ಭೂಮಿತಾಯಿ.

> ಬೆಳಕಿಗೆ ಬೆನ್ನ ತೋರಿಸಿದರs
> ಕತ್ತಲೀ ಮಾರಿ ನೋಡಬೇಕು. **(ಶ್ರೀ ಮಾತಾ)**

ಆದಕಾರಣ ಮನುಷ್ಯನಿಗೆ ಬೇಂದ್ರೆಯವರು ಭೂಮಿ ತಾಯಿ ಸಾರುವ ಹಿರಿತತ್ವವನ್ನು ಹೀಗೆ ಮನನ ಮಾಡಿದ್ದಾರೆ :

> ಆ ಬೆಳಕಿನ್ಯಾಗ ಹೋಗಿ ಕೂಡ್ರಿ
> ಬೆಳಕಿನ ಬಾಳಾಗಬೇಕು
> ಕತ್ತಲಿ ಹಾಳಾಗಬೇಕು.

ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು

ಬೇಂದ್ರೆಯವರ ಕಾವ್ಯ ಬೆಳಕು ಮತ್ತು ಅರಿವಿನ ಶೋಧವಾಗಿದೆ. ಅವರು ಚಿಕ್ಕಂದಿನಲ್ಲಿ ಹಗಲಿನಲ್ಲಿ ಕತ್ತಲೆ ಕೋಣೆಕಂಡು ತಾಯಿಯನ್ನು ಕೇಳುತ್ತಿದ್ದ ಪ್ರಶ್ನೆ : 'ಬೆಳಕೆ ಬೆಳಕಿದ್ದು ಕತ್ತಲೆಯು ಆಯಿತು ಹೇಗೆ?' ಅವರ ಕಾವ್ಯದ ಸ್ಥಾಯಿಭಾವ ಬೆಳಕು. ಅವರಿಗೆ ತಾಯಿಯೆಂದರೆ ಬೆಳಕು ಮತ್ತು ಅರಿವು. ಅವರು ಸದಾ ಚಿಂತನೆ ನಡೆಸುತ್ತಿದ್ದುದು ತಾಯಿಯ ಬಸಿರ ಬೆಳಕಿನ ಬಗ್ಗೆ. ಆದುದರಿಂದ ಅವರು ತಾಯಿಯನ್ನು ಹೀಗೆ ಧ್ಯಾನಿಸಿದ್ದಾರೆ :

ರಾತ್ರಿಯಲ್ಲ ನಮ್ಮ ಆದಿ; ರಾತ್ರಿಯಲ್ಲ ಅಂತ್ಯವು ತಾಯ ಬಸಿರ ಬೆಳಕೆ ನಮ್ಮ ಚಿರಂತನದ ಚಿಂತ್ಯವು ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು. **(ವಚನಗಳು : ಚೈತ್ಯಾಲಯ)**

ಬೆಳಗು ಗೆಳೆತನದ ಬೆಳಕೇ!

ಬೇಂದ್ರೆಯವರ 'ಗೆಳೆಯರ ಗುಂಪು' ಕನ್ನಡ ಸಾಹಿತಿಗಳ ನೇಹದ ಸಾಂಸ್ಕೃತಿಕ ಇತಿಹಾಸ. ಅವರಿಗೆ ಗೆಳೆತನವೆಂಬುದು ಬೆಳಕಾಗಿತ್ತು. ಅದು 'ಬೆಳಕಿನಿಂದೆ ಬೆಳಕನ್ನು ಕಂಡು ಬೆಳಕಾಗಿ ನೋಡಿದಂತೆ!' (ಚಾಂಗದೇವ ಪಾಸಷ್ಟಿ). ಅವರು ತಮ್ಮ ವಿದ್ಯಾರ್ಥಿಗಳನ್ನು ಎಳೆಯ ಗೆಳೆಯರು ಎಂದು ಕರೆದು ಪ್ರೀತಿಯಿಂದ ನೋಡಿ ಕೊಳ್ಳುತ್ತಿದ್ದರು. 'ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಯಾಗಿ ಅತ್ಯುತ್ಸಾಹದಿಂದ ಸಾಹಿತ್ಯದ ಚಟುವಟಿಕೆ ಮಾಡುತ್ತಿದ್ದ ಮಲ್ಹಾರಿ ಕುಲಕರ್ಣಿ. ಈ ತರುಣನ ಆಕಸ್ಮಿಕವಾದ ಮರಣದ ಅನಂತರ ಬರೆದುದು.' ಎಂಬ ಭಾವ ಸಂದರ್ಭ ಹೊಂದಿದ ಕವನ 'ಗೆಳೆಯನ ಎಳೆಯನ ಹರಕೆ' ಅದರಲ್ಲಿ ಅವರು ಗೆಳೆತನದ ಬೆಳಕು ತನ್ನಲ್ಲಿ ಸದಾ ಬೆಳಗುತ್ತಿರಲಿ ಎಂದು ಆಶಿಸಿದ್ದಾರೆ.

'ಸಣ್ಣಾದ ಹೃದಯದೊಳ
ಗಿನ್ನು ಮುಂದಾದರೂ
ಬೆಳಗು ಗೆಳೆತನದ ಬೆಳಕೇ!

*



೨

ಸಂಸ್ಕೃತ ಕವನ : ಸುಪ್ರಭಾತೇ

ಬೇಂದ್ರೆಯವರು 'ಸುಪ್ರಭಾತೇ' ಎಂಬ ಸಂಸ್ಕೃತ ಕವನವನ್ನು ರಚಿಸಿದ್ದಾರೆ. ಅದು ಮುಂಜಾವಿನಲ್ಲಿ ಕವಿ ಬೆಳಗನ್ನು ಕುರಿತು ಧ್ಯಾನಿಸಿದುದಾಗಿದೆ.

ಅವರ್ಣನೀಯಂ ಮೌನೇಗ್ರಹ್ಯಮ್
ಭಾವೇ ಗಮ್ಯಂ ಹೃದಯೇ ಧ್ವಾನಿತಮ್
ಹತಂ ಹತಂ ಯದಿ ವಾಚ್ಯಮವಾಚ್ಯಮ್
ಸುರತಟಿನೀವ ಚ ಶಿರಸಿ ವಿಧಾರ್ಯಮ್. (ನಮನ)

ಸೂರ್ಯೋದಯವು ವರ್ಣನೆಗೆ ಸಿಗುವಂತಹದಲ್ಲ; ಮೌನದಲ್ಲಿ ಗ್ರಹಕೆಗೆ ಸಿಗುವಂತಹದು. ಅದು ಮೌನದ ಪ್ರತೀಕ. 'ಸದ್ದಿಲ್ಲ ಸುಳಿವಿಲ್ಲ; ರವಿರಾಜ ಮೂಡುವನು। ಬೆಳಗುವನು ಅಡಗುವನು' (ಗಂಗಾವತರಣ) ಅದರ ಸೊಬಗು ಇಂದ್ರಿಯಗಳನ್ನು ಹೊಕ್ಕು-ತಿಳಿದೆ ಎಂಬ ಮಾತಿಗೆ ಒಳಗಾದುದಲ್ಲ. ಅದು ಹೃದಯ ದಲ್ಲಿ ಧ್ಯಾನಸ್ಥ ಸ್ಥಿತಿಯಲ್ಲಿ ಧ್ವನಿಸುವಂತಹದು. ಅದನ್ನು ಪವಿತ್ರ ಗಂಗಾ ನದಿಯಂತೆ ತಲೆಯ ಮೇಲೆ ಇಟ್ಟುಕೊಳ್ಳಬೇಕಾದುದು.

ಪರಿಶುದ್ಧ ಬೆಳಗು ಓಂಕಾರದ ಅನಾಹತನಾದವಾಗಿದೆ; ಸಚ್ಚಿದಾನಂದ ಸ್ವರೂಪವಾಗಿದೆ. ಆ ಪುಣ್ಯಕಿರಣ ಶಾಂತವೂ, ಅತೀತವೂ ಸಮೃದ್ಧವೂ ಆದುದು. ಅದು ಧ್ಯಾನದಲ್ಲಿ ಒಳಗಣ್ಣು ತೆರೆಸುತ್ತದೆ. ಹೊರಗಡೆ ಇಡೀ ಜಗತ್ತನ್ನು ಉದ್ಧರಿಸಲು ಅವತರಿಸಿದ ಪುಣ್ಯಕರ ಜ್ಯೋತಿಯಾಗಿದೆ.

ಆ ಬೆಳಗನ್ನು ಬೇಂದ್ರೆಯವರು ತನ್ನ ಚಿಂತೆಯನ್ನು ದೂರವಾಗಿಸಿ, ಚಿಂತನ ದಲ್ಲಿ ಮುಳುಗಿಸು ಎಂದು ಕೇಳಿಕೊಳ್ಳುತ, 'ಆತ್ಮವನ್ನು ಬೆಳಗಿಸು' ಎಂದು ಪ್ರಾರ್ಥಿಸಿ ದ್ದಾರೆ. ಅವರು ಈ ಜಗದ ಜೀವರ ಎಲ್ಲ ಬಗೆಯ ಸಮಸ್ಯೆ ಪರಿಹಾರವಾಗಲು

'ವಿಜ್ಞಾನ ಸೂರ್ಯನ' ಉದಯವಾಗಬೇಕಾಗಿದೆ ಎಂದು ವೈಜ್ಞಾನಿಕವಾಗಿ ಆಲೋಚಿಸಿ ಹೀಗೆ ಧ್ಯಾನಿಸಿದ್ದಾರೆ :

ಚಿಂತೆಯುಳಿಸಿ ಚಿಂತನದಿ ಮುಳುಗಿಸು
ಅಂತು ಇಂತುಳಿಸಿ ಆತ್ಮ ಬೆಳಗಿಸು!
ಸದಯನಾಗಿ ಹೇಗುರುವೆ ಆರ್ಯನೇ!
ಉದಯವಾಗು ವಿಜ್ಞಾನ ಸೂರ್ಯನೇ!! (ಉಯ್ಯಾಲೆ)

ಸುಪ್ರಭಾತವು ಬ್ರಹ್ಮಸ್ವರೂಪದ್ದಾಗಿದೆ. ತಾಯಿಯ ಕೃಪೆಯಂತೆ ಪ್ರೀತಿ ವಾತ್ಸಲ್ಯ ಮಮತೆ ಅಂತಃಕರಣದಿಂದೊಡಗೂಡಿ ಅಕಾರಣವಾಗಿ ಮೂಡಿಬಂದು ಲೋಕದ ಜೀವರನ್ನು ಉದ್ಧರಿಸುವುದಾಗಿದೆ. ಹಾಗಾಗಿ ಅದು ಸದೇವ-ಸತ್ಯವೇ ಆಗಿ ಪರಿಪೂರ್ಣವಾದ ಅಖಂಡ ಪೋಷಕ ತತ್ವವಾಗಿದೆ. ಈ ಎಲ್ಲ ಪಾವನ ಗುಣ ಚೈತನ್ಯದ ಸೂರ್ಯನು ಬೆಳಕಾಗಿ ಕಾಣುವುದು ಅನಿವಾರ್ಯವಾಗಿದೆ.

ನಾಟಕ ದೀಪಮ್

ಓಹ್ ಈ 'ಸುಪ್ರಭಾತ'ವು ಒಂದು ನಾಟ್ಯ ಗೃಹವಾಗಿದೆ. ನಿಜವಲ್ಲವೇ? ತುಸು ನಿಧಾನವಾಗಿ ಯೋಚಿಸಿ. ಈ ಭೂ ಲೋಕದ ಜಡ ಚೇತನಗಳ ಸೃಷ್ಟಿ ಸ್ಥಿತಿಲಯ ಕಾರಕನಾದವನು ರವಿ. ಅವನ ಕಾರಣದಿಂದ ಅವನ ಸಮ್ಮುಖದಲ್ಲೇ ಈ ಲೋಕದ ಎಲ್ಲ ನಾಟಕಗಳು ನಡೆಯುತ್ತಿರುತ್ತವೆ. ಈ ಉಷಃಕಾಲವು ಭಾರತ ಅರ್ಥಾತ್ ಭಾ = ಬೆಳಕು, ರತ = ಬಯಕೆ, ಅಂದರೆ ಜ್ಞಾನಾಕಾಂಕ್ಷೆಯ ರೂಪವಾಗಿದೆ. ಪ್ರೇಕ್ಷಕರಿಗೆ ಸಾಕ್ಷಿಯಾದ ನಾಟಕದೀಪವಾಗಿದೆ. ರಂಗದ ಮೇಲೆ ಏನೇ ನಾಟಕ ನಡೆದರೂ ರಂಗದ ಮೇಲೆ ಚೆಲ್ಲಿರು ಬೆಳಕು ವಿಚಲಿತವಾಗುವುದಿಲ್ಲ. ರಂಗದ ಮೇಲೆ ಮರಣ ವಾಯಿತೆಂದು ದುಃಖಗೊಂಡು ಆರುವುದೂ ಇಲ್ಲ ಅಥವಾ ರಂಗದ ಮೇಲೆ ಜನನ ವಾಯಿತೆಂದು ಹಿಗ್ಗಿ ಹೆಚ್ಚಿನ ಬೆಳಕನ್ನು ಚೆಲ್ಲುವುದರಾ ಇಲ್ಲ. ಬೆಳಕು ಪ್ರೇಕ್ಷಕ ಸಾಕ್ಷಿಯಾಗಿರುತ್ತದೆ. ವಿದ್ಯಾರಣ್ಯರ ಪಂಚದಶಿ – ನಾಟಕ ದೀಪ ಪ್ರಕರಣ.

ನೃತ್ಯ ಶಾಲಾಸ್ಥಿತೋ ದೀಪಃ ಪ್ರಭುಂ ಸಭ್ಯಾಂಶ್ಚನರ್ತಕೀಯಮ್।
ದೀಪಯೇದ ವಿಶೇಷಣ ತದಭಾವೇಽಪಿ ದೀಪ್ಯತೇ ॥ ೧೧ ॥

ನೃತ್ಯಶಾಲೆಯಲ್ಲಿರುವ ದೀಪವು ಅಲ್ಲಿರುವ ರಾಜನನ್ನೂ ಸಭಾಸದರನ್ನು ನರ್ತಕಿಯನ್ನೂ – ತನ್ನಲ್ಲಿ ಯಾವ ಬದಲಾವಣೆಯನ್ನೂ ಹೊಂದದೆ – ಬೆಳಗುತ್ತದೆ; ಮತ್ತೆ ಅವರು ಯಾರೂ ಇಲ್ಲದಿದ್ದರೂ ಅದು ತನ್ನಷ್ಟಕ್ಕೆ ತಾನೇ ಬೆಳಗುತ್ತದೆ.

ನಿಧಾನ ನಿಧಾನವಾಗಿ ಬೆಳಕಿನಂತೆ ನಾನು ಬೆಳೆಯಬೇಕಾಗಿದೆ. ಸ್ವಾಂಗೇ – ತನ್ನ ಅಂಗದಲ್ಲಿ (ತನ್ನ ದೇಹದಲ್ಲಿ), ದೇಹವೇ ಲಿಂಗವೆಂಬ ಸಂಕೇತದಲ್ಲಿ ಧರ್ಮವನ್ನು ಧರಿಸಿಕೊಳ್ಳಬೇಕಾಗಿದೆ ಎಂದು ಕವಿ ಬೆಳಕನ್ನು ಕುರಿತು ಧ್ಯಾನಿಸಿದ್ದಾರೆ.

ಅದು ಕವಿಯು ದೇಹ ಪ್ರಾಣ ಮನಗಳನ್ನು ಒಂದಾಗಿಸಿಕೊಂಡು ಆತ್ಮಾವಲೋಕನಕ್ಕೆ ಒಳಗಾಗಿ ಧರ್ಮವನ್ನು ಧಾರ್ಯವಾಗಿಸಿಕೊಂಡ ದಿವ್ಯಾನುಭವ.

ನರನಾರಿ ದಾಂಪತ್ಯ ಗುಣಧರ್ಮದಂತೆ ಸುಪ್ರಭಾತವು ಸೃಷ್ಟಿಕಾರ್ಯದಲ್ಲಿದೆ. ಬೆಳಕು ಸೃಷ್ಟಿಯ ಮೂಲ. ನಟರಾಜನ ನಾಟ್ಯ ಕಲ್ಪನೆಯ ವಿವಿಧ ನಾಟ್ಯ ಭಂಗಿಗಳಲ್ಲಿ – ಯಾವುದನ್ನು ಹಿಂದೆ ನೋಡಿರಲಿಲ್ಲವೊ, ಆ ನಾಟ್ಯಸ್ವರೂಪ ಲಾಸ್ಯ ಪ್ರಭಾತ ದಲ್ಲಿದೆ.

ಪಂಚಭೂತಗಳ ಪ್ರೀತಿಯೆನ್ನುವುದು ಮೇಲು ಮೇಲಕ್ಕೆ ಹರಿದು ವಿಕಾಸ ಗೊಳ್ಳುತ್ತ ಮನುಜರನ್ನು ಮಾಗಿಸುತ್ತದೆ. ಜಗತ್ತು ಕರ್ಮಕ್ಷೇತ್ರ, ಅದರ ಕಾರಣ ಕ್ಷೇತ್ರವಿದ್ದು ಅದು ಸದಾ ಕರ್ಮಕ್ಷೇತ್ರವನ್ನು ಸಂತುಷ್ಟಗೊಳಿಸುತ್ತಿರುತ್ತದೆ. ಇದು ಭಗವಂತನ ಗೀತ.

ಬೆಳಕು ನಾಟ್ಯರೂಪದಲ್ಲಿ ಪರಿಣಮಿಸುತ್ತ ಸಾವಿಲ್ಲದುದಾಗಿದೆ. ಶಿವ ಶಕ್ತಿಯರು ಒಂದಾಗಿ ಕಲ್ಯಾಣ ಸೃಷ್ಟಿಕಾರ್ಯ ಸಹಜವಾಗಿ ನೇರವೇರುತ್ತಿರುತ್ತದೆ.

*



೩

ನಮೋ ನಮಃ

ಬೇಂದ್ರೆಯವರು ಸೂರ್ಯನನ್ನು ಸದಾ ಧ್ಯಾನಿಸುತ್ತಿದ್ದ ಬೆಳಕಿನ ಆರಾಧಕರಾಗಿದ್ದರು. ಅವನ ಪ್ರಾರ್ಥನೆಯ ಕವನ 'ನಮೋ ನಮಃ'. ಅದು ಅವರ ಭಕ್ತಿಯ ವಿಶಿಷ್ಟ ರೂಪಕವಾಗಿ ಸಂಬೋಧನೆಯ ಶೈಲಿಯಲ್ಲಿದೆ. ರವಿಯನ್ನು ಅವನ ನಿಸರ್ಗ ಸಹಜ ಚಲನೆ ಶೀಲತೆಯಲ್ಲಿ 'ನಿಸರ್ಗ ಮಾರ್ಗದ ನೇಸರನೇ' ಎಂದು ಕರೆದು, ಅವನು ಗಗನ ಕಮಲದ ಕುಸುರ ಪರಾಗತಂತು ಬೆಳಕಿನಗಂಧ ಕೇಸರವೆಂದು ಸ್ತುತಿಸಿದ್ದಾರೆ.

ಕವಿಯು ಆ ನೇಸರನು ಆಕಾಶದಲ್ಲಿ ಮೋಡಗಳ ಮಧ್ಯೆ ಮೂಡಿ ಸ್ಥಿರವಾಗಿದ್ದು ನಾಶವಿಲ್ಲದಿರುವವನಾಗಿದ್ದಾನೆ; ಚೋರರ ಮಾರಕನಾದ ಭಾಸ್ಕರ ನಾಗಿದ್ದು, ಈ ಲೋಕದ ಹಗಲಿರುಳಿನ ಸ್ಥಿತಿಲಯದ ಸಮತೋಲನ ಲಯಬದ್ಧ ನಡಿಗೆಯವನಾಗಿದ್ದಾನೆ ಎಂದು ವರ್ಣಿಸಿದ್ದಾರೆ.

ಸೂರ್ಯನೇ ಈ ವೃದ್ಧ ಪೃಥ್ವಿಯ ಜನರ ಸಚ್ಚಿದಾನಂದ ಕಾರಣ ಎಂಬ ಅರಿವಿನಲ್ಲಿ ಹೀಗೆ ಧ್ಯಾನಿಸಿದ್ದಾರೆ.

> ಸತ್ ಚಿತ್ ಜಗದೋದ್ಧಾರಕನೇ!
> ಬದುಕಿಗೆ ಬಾಳಿನ ಪ್ರೇರಕನೇ!
> ಮುದುಕಿಗೆ ಮುತ್ತಿನ ಹಾರಕನೇ! **(ಮರ್ಯಾದೆ)**

ಬೇಂದ್ರೆಯವರು ಲೋಕವನ್ನು ಸದಾ ರಕ್ಷಿಸುವ ತಾರಕನಾದ ಸೂರ್ಯನ ಪ್ರಭಾವಲಯ – ಪರಿವೇಶದಲ್ಲಿ ತನ್ನ ತಾಯಿ ಅಂಬಿಕೆಯನ್ನು ಕಂಡು ಧನ್ಯರಾಗಿದ್ದಾರೆ.

ಅವನು ಪ್ರತಿದಿನವು ಸಂಜೆಗೆ ಗೋಚರಿಸಿದಂತೆ ಮುಕ್ತನಾಗುವ ಬಿಂದು. ಅದರಲ್ಲಿ ಬಿಂಬಿಸುವವಳು ತಾಯಿ ಅಂಬಿಕೆ ಎಂದು ಚಿತ್ರಿಸಿದ್ದಾರೆ.

ಸೊನ್ನೆಯನ್ನೆ ಅನುಸರಿಸಿಕೊಂಡು ಬರುವುದು ವಿಸರ್ಗ. ಸೂರ್ಯನು ಶೂನ್ಯವನ್ನು ಅನುಸರಿಸುತ್ತ, ಶೂನ್ಯವೆಂಬ ಅಜ್ಞಾನದ ಕತ್ತಲೆಯನ್ನು ಕಳೆದು ಜ್ಞಾನದ ಬೆಳಕು ಹರಿಸುವವನು. ಹಾಗಾಗಿ ಅವನನ್ನು ಹೀಗೆ ಪ್ರಾರ್ಥಿಸಿದ್ದಾರೆ :

ಅಂಬಿಕೆ ಬಿಂಬಿಸೆ ತಾರಾಕನೇ!
ವಿಸರ್ಗದಾನು ಸ್ವಾರಕನೇ!

ಅವರ 'ಭಾವ' ಕವನದಲ್ಲಿ – ಗಗನದಲ್ಲಿ ಪ್ರತಿ ಹಗಲು ಗೋಚರಿಸುವ ಬೆಳಕು ದೇವರಾಗಿದೆ. ಆ ಬೆಳಕಿನ ಸೆಲೆ ಸೂರ್ಯನನ್ನು ಹೀಗೆ ಧ್ಯಾನಿಸಿದ್ದರೆ :

ಇರುವ ಸತ್ತ್ವ, ತತ್ತ್ವ
ಬೆಳಕು – ದೇವ !
ದಿವ – ಪ್ರಕಾಶ ಮಾನವಾಗಿರು **(ಶತಮಾನ)**

ನಮ್ಮನೀಹತೆ ಹರಿದು ಓಡಲಿ

ಬೇಂದ್ರೆಯವರು ನೇಸರನ ಉದಯದಿಂದ ನಮ್ಮಲ್ಲಿ ಅನೀಶತೆ ಅರ್ಥಾತ್ ಅಸಾಮರ್ಥ್ಯ ಅಶಕ್ತಿ ಪರಾಧೀನತೆ ಹರಿದು ಓಡಲಿ, ಈಶತ್ವ ಅಂದರೆ ಒಡೆತನ ಪ್ರಭುತ್ವ ಸ್ವಾಮಿತ್ವ ಮುಂತಾದ ಶ್ರೇಷ್ಠ ಗುಣಗಳು ಪ್ರಾಪ್ತವಾಗಲಿ ಎಂದು ಹೀಗೆ ಪ್ರಾರ್ಥಿಸಿದ್ದಾರೆ

ನಸುಕು ಮುಸುಕೋಸರಿಸಿ ಬಯಲಿಗೆ ಬರಲಿ ನೇಸರನು.
ನಮ್ಮನೀಶತೆ ಹರಿದು ಓಡಲಿ, ಮಾಡು ಈಶರನು.


(ಅದಿತಿ : ಹೃದಯ ಸಮುದ್ರ)

ನಸುಕಿನಲ್ಲಿ ಸುಳಿವ ತಣ್ಣನೆಯ ಹಾಳಿಯ ಮೈಸೋಂಕಿ ಒಂದು ಮಧುರ ಆಹ್ಲಾದವನ್ನುಂಟು ಮಾಡುತ್ತದೆ. ಬೇಂದ್ರೆಯವರು ಹಾಗೆ ಸ್ಪರ್ಶಿಸಿದ ಗಾಳಿಯೊಳಗಿನ ಉಲಿತಕ್ಕೆ ಕಿವಿಗೊಟ್ಟು – ಅದೇನೋ ಮಂತ್ರವನ್ನು ಉಸುರಿತ್ತಿದೆ ಎಂದು ಧ್ಯಾನಸ್ಥ ರಾದವರು. ಹಾಗೆ ಧ್ಯಾನ ಸ್ಥಿತಿಯಲ್ಲಿರುವಾಗ ಮೂಡುವ ನೇಸರನನ್ನು ಕಂಡು – ಅದು ಉಂಟುಮಾಡುವ ವಿವಿಧ ಬಣ್ಣ ಬೆಡಗು, ಜೀವ ಸಂಚಾರ, ಸಕಲ ಜೀವಿಗಳು ಹೊಮ್ಮಿಸುವ ವಿವಿಧ ಭಾವೋಜ್ವಲ ದನಿ ತರಂಗಗಳಲ್ಲಿ ಲೀನರಾದವರು. ಅವರು ಆ ಅನುಭಾವಕ್ಕೆ ಕಾವ್ಯರೂಪವನ್ನು ಹೀಗೆ ನೀಡಿದ್ದಾರೆ.

ಸುಳಿವ ಗಾಳಿ ಮೈಯ ತಾಳಿ ಉಲಿವುದೇನೋ ಮಂತ್ರ ನೇಸರೆಸೆದ ಈ ನಿಸರ್ಗ ತೆರೆ ತೆರೆದೊಲು ಯಂತ್ರ

ಕನಸಿಗೊಂದು ಕಣಸಿಗೊಂದು
ಮನಸಿಗೊಂದು ತಂತ್ರ
ಹೇಗೆ ನಾನು ಸ್ವತಂತ್ರ? **(ಅಪ್ರತಿ – ಮಾ : ನಮನ)**

✻



೪

ಕಂಡರೆ ಪಂಜು, ಹಿಡಿದರೆ ಮಂಜು

ವರಕವಿ ಬೇಂದ್ರೆಯವರು ಸೂರ್ಯೋದಯವನ್ನು ವರ್ಣಿಸಿ ಹದಿನೈದು ಕವನಗಳನ್ನು ರಚಿಸಿದ್ದಾರೆ. ಅವು ಒಂದೊಂದುತಮ್ಮದೇ ಬೆಳಗಿನಲ್ಲಿ ಪ್ರತ್ಯೇಕ ಛಂದಸ್ಸಿನಲ್ಲಿ ರೂಪುಗೊಂಡಿವೆ. 'ಮೂಡಲ ಮನೆಯಾ ಮುತ್ತಿನ ನೀರಿನ' 'ಬೆಳಗು' (೧೯೧೯) ಕವನವು ಹೊಸ ಭಾವಾಭಿವ್ಯಕ್ತಿಯ, ಹೊಸ ಛಂದಸ್ಸಿನ ಕನ್ನಡ ನವೋದಯ ಕಾವ್ಯದಬೆರಗು. ಉಷಃಕಾಲದ 'ಸುಪ್ರಭಾತ' ಕವನವು ಸಂಸ್ಕೃತಮಯವಾಗಿದ್ದರೆ, 'ಓಂ ಸ್ವಾಗತಮಕ್ಕೆ' ಶರಷಟ್ಪದಿಯಲ್ಲಿರುವ ವಿಶಿಷ್ಟ ಕವನ.

ಸೂರ್ಯಕಿರಣ ಭೂಲೋಕಕ್ಕೆ ಅವತರಿಸಿ ಬಂದು ಇಡೀ ಪ್ರಕೃತಿ ಯನ್ನುತನ್ನ ಸಪ್ತವರ್ಣಗಳಿಂದ ಮಂಗಳ ಮಯವಾಗಿಸುತ್ತದೆ. ಸಕಲ ಜೀವರಾಶಿಯ ಸೃಷ್ಟಿಗೆ ಕಾರಣವಾಗಿ, ಚೈತನ್ಯ ಹರಿಸಿ ಅರಿವನ್ನುಂಟು ಮಾಡುತ್ತದೆ. ಬೇಂದ್ರೆಯವರು ಅದನ್ನು ಓಂಕಾರದಿಂದ ಸ್ವಾಗತಿಸುತ್ತ ಏಳು ನುಡಿಗಳಲ್ಲಿ – ಬೆಳಕಿನ ಸಪ್ತಾಶ್ವದ ಚಟುಲತ್ವವನ್ನು ಶರವೇಗದಲ್ಲಿ ಬಣ್ಣಿಸಿದ್ದಾರೆ.

ಶರಷಟ್ಪದಿಯ ಈ ಕವನ ಬೆಳಕಿನ ಬಾಣದಂತೆ ಪ್ರಯೋಗವಾಗಿದೆ. ಪ್ರತಿಯೊಂದು ನುಡಿಯಲ್ಲಿ ಒಂದು ವಿಶಿಷ್ಟ ಬೆಳಕಿನ ಭಾವಗರಿಗಟ್ಟಿದೆ.

ಕವಿಯು ಬೆಳಕಿನ ರಶ್ಮಿ ಹರಿದು ಬರುವುದನ್ನು ಕಂಡು ಎರಡೆರಡು ಮಾತ್ರೆಗಳಲ್ಲಿ 'ಯಾರೇಯಾರೇ' ಎಂದು ಪ್ರಶ್ನಿಸುತ್ತಾರೆ. ಅದು ಯಾರೆಂದು ಗೋಚರವಾದ ಅಚ್ಚರಿಯನ್ನು ಶರವೇಗ ಹೆಚ್ಚಿದಂತೆ ಲಯಾನ್ವಿತನಾದ ಮಾಧುರ್ಯದ ನಾಲ್ಕು ನಾಲ್ಕು ಮಾತ್ರೆಗಳಲ್ಲಿ 'ಅಪ್ಸರೆ! ನೀರೇ' ಎಂದು ಆ ನೀಳದೇಹದ ಸುಂದರ ಅಪ್ಸರೆಯನ್ನು ಚಿತ್ರಿಸಿದ್ದಾರೆ. ಮೂರನೇಸಾಲಿನಲ್ಲಿ ಅವಳು ರೂಪು ಗೊಂಡರೀತಿಯನ್ನು ಮೂರು ಮೂರು ಮಾತ್ರಾ ವೇಗದಲ್ಲಿ 'ನೀರನೆ ಕಡೆದೇ ಕಟ್ಟಿದರೆ?' ಎಂದು ಪ್ರಶ್ನಿಸಿದ್ದಾರೆ.

ಷಟ್ಪದಿಯ ಉತ್ತರಾರ್ಧದ ನಾಲ್ಕನೆ ಸಾಲಿನಲ್ಲಿ ಆ ಬೆಳಕು ಅಪ್ಸರೆಯನ್ನು ಸಾವಧಾನದತಪದ ಭಾವದಲ್ಲಿ 'ತಪಗರ ಹೊಯ್ದು' ಎಂದು ಎರಡೆರಡು ಮಾತ್ರೆಯಲ್ಲಿ ಚಿತ್ರಿಸಿದ್ದಾರೆ. ಆ ಬೆಳಕಿನ ಜ್ಞಾನದಲ್ಲಿ ತೊಯ್ದ ಭಾವವನ್ನು ಐದನೆ ಸಾಲಿನಲ್ಲಿ ನಾಲ್ಕು ನಾಲ್ಕು ಮಾತ್ರೆಗಳ ವೇಗದಲ್ಲಿ 'ತಪತಪತೊಯ್ದು' ಎಂದು ಬಣ್ಣಿಸುತ್ತ, ಅದು ಒಟ್ಟು ಉಂಟುಮಾಡಿದ ಪ್ರಭಾವವನ್ನು ಆರನೆ ಸಾಲಿನಲ್ಲಿ ಮೂರು ಮೂರು ಮಾತ್ರಾ ವೇಗದಲ್ಲಿ 'ನೀರಿಳಿವುದು ನೀ ಮುಟ್ಟಿದರೇ' ಎಂದುಅರಿವಿನ ಜಳಕಕ್ಕೆ ಒಳಗಾಗುವುದನ್ನು ರೇಖಿಸಿದ್ದಾರೆ.

ಯಾರೇಯಾರೇ
ಅಪ್ಸರೆ! ನೀರೆ
ನೀರನೆಕಡೆದೇಕಟ್ಟಿದರೇ?
ತಪಗರ ಹೊಯ್ದು
ತಪತಪತೊಯ್ದು
ನೀರಿಳಿವುದು ನೀ ಮುಟ್ಟಿದರೇ

(ಹಾಡು–ಪಾಡು)

ಬೇಂದ್ರೆಯವರು ಎರಡನೆ ನುಡಿಯಲ್ಲಿ ಸ್ನೇಹಕಿರಣದ ಲಕ್ಷಣಗಳನ್ನು ಅನುಭವಿಸಿದ ಬಗೆಯನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ಬಣ್ಣಿಸಿದ್ದಾರೆ. ಅದು ಪ್ರಾರಂಭ ದಲ್ಲಿ ಹೆದರುವ ಸ್ವಭಾವದ ವ್ಯಕ್ತಿ – ಭೀರುವಿನಂತೆಕಂಡು, ಅದರಕಣ್ಣಲ್ಲಿ ನೀರು 'ತೆರೆತೆರೆತೆರೆದಂತೆ'–ಅಲೆ ಅಲೆಯಾಗಿತಣ್ಣಗೆ ಹರಿದಾಡುವುದನ್ನು ಹನಿ ಹನಿಯಂತೆ ಪುಟ್ಟ, ಪುಟ್ಟ ಪದಗಳಲ್ಲಿ ರೇಖಿಸಿದ್ದಾರೆ. ಅದು ಬೆಳೆದಂತೆ ಕೈಗೊಳ್ಳಿ ಯಂತೆ ಕಾಣುತ್ತದೆ. 'ಕಂಡರೆ ಪಂಜು'. ಆದರೆಅದು ದೀವಟಿಗೆಯಲ್ಲ. ಹಿಡಿದು ನೋಡಿದರೆ ಮಂಜು 'ಹಿಡಿದರೆ ಮಂಜು'.

ಒಂದೇಕಿರಣದೂರದಲ್ಲಿದ್ದಾಗಕಾಣುವ ಬಗೆ, ಅದು ಹತ್ತಿರ ಬಂದಾಗ ಸ್ಪರ್ಶಕ್ಕೊಳಗಾದ ರೀತಿ ಈ ವಿರೋಧ ಲಕ್ಷಣವನ್ನು ವಿರೋಧ ಪ್ರತಿಮೆ 'ಪಂಜು', 'ಮಂಜು'ಗಳ ಮೂಲಕ ಪ್ರಕೃತಿ ರಹಸ್ಯವನ್ನು ತಿಳಿಸಲು ಕವಿ ಪ್ರಯತ್ನಿಸಿದ್ದಾರೆ.

ಓಹ್, ಕಿರಣದ ಕಾಣುವ ಮತ್ತು ವಾಸ್ತವವಾಗಿ ಇರುವ ವಿರುದ್ಧ ಲಕ್ಷಣವನ್ನು ಈ ಬಗೆಯಲ್ಲಿ ಅಭಿವ್ಯಕ್ತಿಸುವ ಗಾರುಡಿ ಅಂಬಿಕಾತನಯರದು. ಅದರ ರುಚಿ ಹೇಗೆಂದರೆ ಊಟದಲ್ಲಿ ನಂಜಿಕೊಳ್ಳುವ ಉಪ್ಪಿನಕಾಯಿಯ ರುಚಿಯಂತೆ – 'ರುಚಿಸಲು ನಂಜೇ ಬೆರೆದಂತೆ'. ಕವಿಯು 'ಹೂ ಹೂವಿನ ಹುಡಿ' ರೂಪಕದಲ್ಲಿ ಬೆಳಕಿನ ಕಿರಣ ಕಂಪಿನೊಡನೆ ಉದುರುವುದನ್ನು ಬಣ್ಣಿಸುತ್ತ – ಅದು ಎರಚುವ ಹೂ ಹುಡಿಗೆ ಮಾತಿನ ಬೆಡಗುತಂದು, ಅದರೊಡನೆ ಜನ ಸಂವಾದಿಸುತ್ತಾರೆ ಎಂಬ ಆತ್ಮೀಯ ಭಾವದಲ್ಲಿ ಚಿತ್ರಿಸಿದ್ದಾರೆ. ಆ ಒಲ್ಮೆ, ನಲ್ಮೆ, ಜಾಣ್ಮೆ, ಪೆರ್ಮೆಯ ಅರಿವಿನ

ಕೂಸನ್ನು ಬೆಳಕಿನ ತಾಯಿ ಹೆತ್ತು ನೀಡಿದಂತೆ ಜಗತ್ತು ನಲಿಯುತ್ತದೆ ಎಂಬ ಆದರ್ಶ ಸೌಂದರ್ಯದಲ್ಲಿ ವರ್ಣಿಸಿದ್ದಾರೆ.

ಪ್ರತಿ ಜೀವಿಯು ಬೆಳಕಿನ ಹರಿವಿನಲ್ಲಿ ಮೀಯುವ ಸಂಭ್ರಮದ ಲೀಲೆ – 'ಮೈ ತೊಳೆಯುವ ಕೊಳ' ರೂಪಕದಲ್ಲಿ ಅದ್ವಿತೀಯವಾಗಿ ಪ್ರಕಟಗೊಂಡಿದೆ. ಆಗ ಮನುಷ್ಯ ನಾದವನು ಬೆಳಕಿನ ಭಾಗ್ಯದಲ್ಲಿ ಮಿಂದು ಅರಿವಿಗೆ ಒಳಗಾದಾಗ ರಾತ್ರಿ ಮಲಗಿದಂತಿದ್ದ ಪಂಚೇಂದ್ರಿಯಗಳು ಜಾಗೃತವಾಗುತ್ತವೆ. ಬೆಳಕು ಮೈವೆತ್ತಂತೆ ಅವನ ಮನ, ಇಂದ್ರಿಯಗಳ ಆಮಿಷ ಗರಿಗೆದರುತ್ತದೆ!

'ಮೈ ತೊಳೆಯುವ ಕೊಳ
ಮನ, ಇಂದ್ರಿಯಗಳ
ಆಮಿಷ ನೀ ಮೈವೆತ್ತಂತೆ'.

* * *

ಕವಿಯು ನಾಲ್ಕನೆಯ ನುಡಿಯಲ್ಲಿ ಈ ನೆಲದ ವ್ಯಕ್ತಿಯು ಕಿರಣದ ಇನ್ನೊಂದು ಬಗೆಯ ಸೆಳೆತಕ್ಕೆ ಒಳಗಾಗಿ – ಸುಖ ಲೋಲುಪತೆಯ ಸ್ವರ್ಗಕ್ಕೆ ಆಶಿಸುವ ಚಿತ್ರಣ ನೀಡಿದ್ದಾರೆ. ಕಿರಣ ಅಪ್ಸರೆಯ ಹುಬ್ಬಿನ ಬಿಂಕ, ಇಂದ್ರನ ಸಾಮ್ರಾಜ್ಯದ ಸೆಳೆತ ಅವನನ್ನು ಸೆರೆಗೊಳಿಸುತ್ತದೆ. ಅದು ಇರುವ ವಾಸ್ತವ 'ಉಳಿದುದ ಮರೆಸಿ', ಇರದೆಇರುವ ಸ್ವರ್ಗಕ್ಕೆ ಆಶಿಸಿ 'ಸಾವೇ ಸ್ವರ್ಗವು ಎನಿಸುತಿಹೆ' ಎಂಬ ಭ್ರಮೆಗೆ ಒಳಗಾಗಿಸುತ್ತದೆ.


ಕವಿಯು ಐದನೆ ಶರ ಪ್ರಯೋಗದಲ್ಲಿ ಪ್ರತಿಮೆಗಳ ಹನಿ ಹರಿಸಿದ್ದಾರೆ. ಕಿರಣದ ಪ್ರತಿ 'ಮುತ್ತಿನೊಳೆಲ್ಲು ಹವಳದ ಸೊಲ್ಲು' ಎಂದು ಶಬ್ದವು ಬೆಳಕಿನಲ್ಲಿ ಬೆಳಗುವ ಪ್ರತಿಮೆಯಲ್ಲಿ ಪ್ರತಿ ಬಿಂಬಿಸಿದ್ದಾರೆ. ಕಿರಣದ ಮೈತುಂಬ ಮೀನದ ಕಂಗಳು– ಅರ್ಥಾತ್ ಸದಾ ಕ್ರಿಯಾಶೀಲವಾಗಿರುವ ಹೊಳೆ ಹೊಳೆವ ಕಣ್ಣ ಪ್ರಕಾಶದ, ಮೈ ಮಾಟದ ಆಕರ್ಷಕ ಬೆಡಗು! ಆ ಬೆಳಕಿನ ಕದಿರಿನಕಾಂತಿಯುಕ್ತ ಮೈಸೊರಗಿನ ದೀಪ್ತಿ ಜಲವು ಕ್ಷಣಕ್ಷಣಕ್ಕೂ ಚಂಚಲವಾಗಿ ಸೆಳೆದಾಡುತ್ತದೆ. ಆಗ ಅದರಲ್ಲಿ ಮಿಂದ ವ್ಯಕ್ತಿಯ ಮನ ಅದರ ಸೊಬಗು ನೋಡುತ್ತ ನಿಂತ ಬಗೆ 'ದೀಪ ಸ್ತಂಭ'ದಂತೆ ನಿಶ್ಚಲ ಭಾವಕ್ಕೊಳಗಾಗುತ್ತದೆ!

ಹೀಗೆ ತನ್ನ ವಿವಿಧಕಾಂತ ಪ್ರಕಾಶದಲ್ಲಿ ಪ್ರಕಟಗೊಂಡ ಸೂರ್ಯನ ಕಿರಣದ ಉದ್ದೇಶ ಕೆಳಕ್ಕೆ ಬಿದ್ದು (ಅಧಃಪತನ), ಪತಿತರನ್ನೆಲ್ಲ ಉದ್ಧರಿಸುವುದಾಗಿದೆ. ಅದನ್ನು ಅರಿತವನನ್ನು ಕವಿ 'ಒಳಬಲ್ಲವನಿಗೆ ನಾ ಶರಣ' ಎಂದು ಹೇಳಿದ್ದಾರೆ. ರವಿಯನ್ನು 'ಆದರೂ ನೀನು। ಬಾನಿನ ಜೇನು' ಎಂದು ಬೆಳಕಿನ ಸವಿಯನ್ನು ಮಧುರ ಪ್ರತಿಮೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಓಹ್! ಆ ಮಿಂಚಿನ ಕೆಳದಿ ಕಿರಣ ಅಪ್ಸರೆ ನೆಲಕ್ಕೆ ಇಳಿದಾಗಿದೆ, ಇನ್ನು ಅವಳಿಗೆ ರೆಕ್ಕೆಗಳು ಏತಕ್ಕೆ ಎಂದು ಕವಿ ಏಳನೆ ನುಡಿಯಲ್ಲಿ ಪ್ರಶ್ನಿಸಿದ್ದಾರೆ. ಅವರು ಈ ಜಗದ ಪ್ರಕಾಶ ಚೈತನ್ಯ ಜೀವ ಪೋಷಕ ಉರಿಯು ಪ್ರತಿ ದಿನ ರಾತ್ರಿಯಲ್ಲಿ ಅರ್ಧ ಆರಿಹೋಗುತ್ತದೆ. 'ಉರಿಅರೆ ನಂದೇ'. ಅದನ್ನು ಮತ್ತೆ ಮತ್ತೆ ಹೊತ್ತಿಸಿ ಜೀವ ತುಂಬಲು ರವಿಯ ರಶ್ಮಿ ಬರುತ್ತದೆ. ಅದಕ್ಕೆ ಕವಿ ಸ್ವಾಗತಕೋರಿದ್ದಾರೆ.

ಉರಿಅರೆನಂದೇ
ಹೊತ್ತಿಸ ಬಂದೇ"
ಎಂಬೆಯಾ ಓಂ ಸ್ವಾಗತಮಕ್ಕೆ.

*



೫

ಬೆಳ್ಳಿ ಮೂಡಲಗಾಲ

‘ಬೆಳ್ಳಿ ಮೂಡಲಗಾಲ’ ಕವನದ ಶೀರ್ಷಿಕೆಯನ್ನು ಎರಡು ಬಗೆಯಲ್ಲಿ ಅರ್ಥೈಸಬಹುದಾಗಿದೆ. ಮೊದಲನೆಯದು ನಾಮರೂಪವಾಗಿ ಪೂರ್ವದಿಕ್ಕಿನಲ್ಲಿ ಹುಟ್ಟುವ ಬೆಳಕನ್ನು ಕುರಿತದ್ದಾಗಿದೆ. ಎರಡನೆಯದು ಸಾಧಕ, ತಪಸ್ವಿಯೋಗಿ, ಕವಿಯಲ್ಲಿ ಉಂಟಾದ ಜ್ಞಾನದ ಅನಾವರಣವನ್ನು ಸೂಚಿಸುವುದಾಗಿದೆ.

ಶೀರ್ಷಿಕೆಯ ಕೆಳಗೆ ಆವರಣದಲ್ಲಿ ಬೇಂದ್ರೆಯವರು ಭಗವದ್ಗೀತೆಯ ಪ್ರಕರಣ 2ರ ಶ್ಲೋಕವನ್ನು ನೀಡಿದ್ದಾರೆ.

ಯಾನಿಶಾ ಸರ್ವಭೂತಾನಾಂತಸ್ಯಾಂಜಾಗರ್ತಿ ಸಂಯಮೀಯ
ಸ್ಯಾಂಜಾಗ್ರತಿ ಭೂತಾನಿ ಸಾನಿಶಾ ಪಶ್ಯತೋ ಮುನೇಃ॥

ಡಿವಿಜಿಯವರು ಅದರ ಆಂತರ್ಯವನ್ನು ಹೀಗೆ ವಿವರಿಸಿದ್ದಾರೆ. ‘ಲೋಕಕ್ಕೆ ಯಾವಾಗ ರಾತ್ರಿಯೋ ಆಗ ಜ್ಞಾನಿಯು ಎಚ್ಚರಗೊಂಡಿರುತ್ತಾನೆ. (ಎಂದರೆ ಸಾಮಾನ್ಯ ಜನರು ಯಾವ ತತ್ತ್ವವನ್ನು ಕಾಣದವರಾಗಿ ಅಜ್ಞಾನದಲ್ಲಿರುತ್ತಾರೊ ಆತತ್ತ್ವದ ವಿಷಯದಲ್ಲಿ ಜಾಗರೂಕತೆಯಿಂದಿರುವನು ಜ್ಞಾನಿ) ಯಾವಾಗ ಸಾಮಾನ್ಯ ಪ್ರಾಣಿಗಳಿಗೆ ಹಗಲಾಗಿರುತ್ತದೆಯೋ ಆಗ ಜ್ಞಾನಿಗಿ ರಾತ್ರಿಯಾಗಿರುತ್ತದೆ. (ಎಂದರೆ ಯಾವ್ಯಾವ ವಿಷಯದಲ್ಲಿ ಸಾಮಾನ್ಯ ಜನಕ್ಕೆ ಅತ್ಯಂತ ಆಸಕ್ತಿಯೋ ಅವುಗಳಲ್ಲಿ ಜ್ಞಾನಿಗೆ ಕೊಂಚವೂ ಆಸಕ್ತಿಯಿರದು.)’

ಋಗ್ವೇದ ಸಂಹಿತಾ ಭಾಗ ೨೦, ೫ನೆಯ ಮಂಡಲ ಎಪ್ಪತ್ತೊಂಬತ್ತನೆಯ ಸೂಕ್ತವು ಉಷ್ಣೋದೇವತೆಯ ಸೂಕ್ಷ್ಮ ಪರಿಚಯವನ್ನು ನೀಡುತ್ತದೆ.

ಯಾಸ್ಕ ಮಹರ್ಷಿಗಳು ಉಷಃ ಕಸ್ಮಾತ್। ಉಚ್ಚತೀತಿ ಸತ್ಯಾಃ।

ಉಚ್ಛಿವಿವಾಸೇ। ವಿವಾಸಯತಿ ಹೀಯಂ ತಮಾಂಸಿ
ತಸ್ಮಾದುಚ್ಛತೀತ್ಯೇವ ಮಸ್ಯಾ ಏತಸ್ಮಿನ್ಕರ್ಮಣಿ
ಸತ್ಯಾಃಕರ್ತರಿಕಾರಕೇ ಉಷಾ ಇತ್ಯೇತದಭಿಧಾನಂ ಭವತಿ ।

ಕಾ ಪುನರಿಯುಮುಷಾ ಇತಿ ।
ರಾತ್ರೇರಪರಃ ಕಾಲಂ ಸ ಉಷಾ ಇತ್ಯುಚ್ಯತೇ ॥

ಎಂದರೆ ಹೊರದೂಡು ಎಂಬರ್ಥವುಳ್ಳ ಉಚ್ಛೀ-ವಿವಾಸೇ ಎಂಬ ಧಾತುವಿನಿಂದ ಈ ಉಷಶ್ಯಬ್ದದ ನಿಷ್ಪತ್ತಿಯಾಗಿದೆಯೆಂದು ವಿವರಿಸುತ್ತಾರೆ. ಏನನ್ನು ಹೊರದೂಡುವುದು ಎಂದರೆ ಕತ್ತಲೆಯನ್ನು ಎಂದರ್ಥವು. ಕತ್ತಲೆಯನ್ನು ಹೊರದೂಡಿ ಬೆಳಕನ್ನು ಪ್ರಸರಿಸುವುದರಿಂದ ಈ ದೇವತೆಗೆ ಉಷಾಃ ಎಂದು ಹೆಸರು. ಆ ಕಾಲವು ಯಾವುದು ಎಂದರೆ ರಾತ್ರೆಯ ಕೊನೆಯ ಭಾಗವು. ರಾತ್ರೆಯು ಮುಗಿದು ಸೂರ್ಯೋದಯವಾಗುವುದಕ್ಕೆ ಮುಂಚಿತವಾಗಿ ಕತ್ತಲೆ ಇಲ್ಲದ ಮತ್ತು ಬೆಳಕಾಗಿರುವ ಕಾಲಕ್ಕೆ ಉಷಃಕಾಲವೆಂದು ಹೆಸರು ಎಂದು ಅರ್ಥವಿವರಣೆ ಮಾಡಿರುವರು.

ಋಗ್ವೇದಾ ಸಂಹಿತಾ ಭಾಗ ೨೦, ಚತುರ್ಥಾಷ್ಟಕದಲ್ಲಿ ೪-೫-೬ನೇ ಅಧ್ಯಾಯಗಳು, ಅನುವಾದಕ: ಆಸ್ಥಾನ ವಿದ್ವಾನ್ ಎಚ್. ಪಿ. ವೆಂಕಟರಾವ್. ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೧೧, ಪು. ೧೫೧, ೧೫೨. ಯೊಂದೆಯೆ ಮಿರುಗುವಂದದಲಿ, ಕುಂತಲವನಲರಿಂದ ಅಲಂಕರಿಸಿ' (ಸಾಲು ೫೫೧-೫೩೦)

* * *

ನಲಿವ ಬೆಳ್ಳಿಯ ಬೆಳ್ಳಿಯೆ

ಬೇಂದ್ರೆಯವರು 'ನವ ಯುಗಾರಂಭ' ಕವನದಲ್ಲಿ ಉಷೆಗಿರುವ ಬೆಳ್ಳಿಯ ಸೊಬಗನ್ನು ಹೀಗೆ ಚಿತ್ರಿಸಿದ್ದಾರೆ: 'ಉಷೆಯ ಹಣೆಗೆ ಬೆಳ್ಳಿ ಶುಕ್ರ ತಿಲಕವನಿಡಲಿ'.

ಕುವೆಂಪು ಅವರು ಚಿತ್ರಾಂಗಧಾ ಖಂಡಕಾವ್ಯದಲ್ಲಿ ಸಖಿಯು ಅವಳನ್ನು ಶೃಂಗರಿಸಿದ ರೀತಿಯನ್ನು ಹೀಗೆ ವರ್ಣಿಸಿದ್ದಾರೆ: 'ಉಷೆಯ ಭಾಳದಲಿ ಬೆಳ್ಳಿ'

ಋಗ್ವೇದಾ ಸಂಹಿತಾ ಭಾಗ ೨೦, ಚತುರ್ಥಾಷ್ಟಕದಲ್ಲಿ ೪-೫-೬ನೇ ಅಧ್ಯಾಯಗಳು, ಅನುವಾದಕ: ಆಸ್ಥಾನ ವಿದ್ವಾನ್ಎಚ್. ಪಿ. ವೆಂಕಟರಾವ್. ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೧೧, ಪು. ೧೫೧, ೧೫೨.

ಯೊಂದೆಯೆಮಿರುಗುವಂದದಲಿ, ಕುಂತಲ ವನಲರಿಂದ ಅಲಂಕರಿಸಿ' (ಸಾಲು ೫೫೧-೫೩೦)

ರಾತ್ರಿ ಮುಗಿಯುವ ಕಾಲಕ್ಕೆ (ಇರುಳಿನಂಚಿಗೆ) ಅದರ ಹಿಂದೆ ಮುಂದೆ ನಲಿಯುವ ಶುಕ್ರಗ್ರಹವೇ ಬೆಳ್ಳಿ. ಅದು ಎಷ್ಟೊಂದು ಹೊಳಪಿನಿಂದ ಆಗಸವನ್ನು

ಬೆಳಗಿಸುತ್ತದೆ ಎಂಬುದನ್ನು ಬೇಂದ್ರೆಯವರು ಬೆಳ್ಳಗಿರುವ ಬೆಳ್ಳಿಯನ್ನೆ ರೂಪಕವಾಗಿಸಿ 'ನಲಿವ ಬೆಳ್ಳಿಯ ಬೆಳ್ಳಿಯೇ' ಎಂದು ವರ್ಣಿಸಿದ್ದಾರೆ.

ರಾತ್ರಿ ಕಾಲದಲ್ಲಿ ಜ್ಞಾನಿಯಾದವನು ಜಾಗೃತನಾಗಿದ್ದು ಜೀವನ ತತ್ತ್ವವನ್ನು ಅರಿಯಲು-ಬೆಳಕು ಬೆಡಗಿನ ಬಳ್ಳಿ ಹರಿದ ಕಡೆ ತನ್ನ ತಾತ್ತ್ವಿಕ ಜ್ಞಾಸೆಯನ್ನು ಹರಿಸತೊಡಗುತ್ತಾನೆ. ಅರಿವು ಅಂದವಾಗಿ ಹರಡಿ ವ್ಯಾಪಿಸುವುದನ್ನು ಕವಿ 'ಬಳ್ಳಿ' ಪದದಿಂದ ಧ್ವನಿಸಿದ್ದಾರೆ. ಅದುಕತ್ತಲಾಚೆಗೆ ಇರುವ ಬಗೆಗೆ ಆಶ್ಚರ್ಯವನ್ನು ವ್ಯಕ್ತಿಪಡಿಸುತ್ತ ಅದರೊಡನೆ ಸಲುಗೆಯಿಂದ ಸಂಭಾಷಿಸುವಂತೆ ಪ್ರಶ್ನಿಸಿದ್ದಾರೆ:

ಕತ್ತಲಾಚೆಗೆ ಇರುವ ಮಾಟವ
ಎಲ್ಲಿಕಲಿತೆಯೆ 'ಮಳ್ಳಿ'ಯೇ?

ಸಾಧಕನಿಗೆ ಉಂಟಾಗುವ ಜ್ಞಾನೋದಯವು-ಬೆಳ್ಳಿಯು ಕಂಡು ಕಾಣ ದಂತೆ ಮರೆಯಾಗುವ ರೀತಿ ಇರುತ್ತದೆ. ಅದನ್ನು ಚಿತ್ರಿಸುವಾಗ ಕವಿಯು ಲಕ್ಷ್ಯಾರ್ಥ ದಲ್ಲಿ ಆತ್ಮೀಯವಾಗಿ 'ಮಳ್ಳಿ' ಎಂದುಕರೆದಿದ್ದಾರೆ. ಅದನ್ನು 'ಕತ್ತಲಾಚೆಗೆ ಇರುವ ಮಾಟ' ಎಂದು ಬಣ್ಣಿಸುವಾಗ ಬೇಂದ್ರೆಯವರು 'ಮಾಟ' ಪದದ ನೇಯ್ಗೆ, ಶೋಭೆ, ಒನಪುಗಳ ಜೊತೆಗೆ ಅದರ ಇಂದ್ರಜಾಲದ ಲಕ್ಷಣಗಳನ್ನು ಸಹೃದಯನ ಅರಿವಿಗೆ ತರುತ್ತಾರೆ.

ಸ್ವೇಚ್ಛೆಗೇಳುವ ಗರುಡನು

ಈ ಕವನದ ಎರಡನೇ ನುಡಿಯಲ್ಲಿ ಕವಿಯು ಅಜ್ಞಾನಿ-ಜ್ಞಾನಿಗಳನ್ನು ಕುರುಡ-ಗರುಡ ಪ್ರತಿಮೆಗಳಲ್ಲಿ ಚಿತ್ರಿಸಿದ್ದಾರೆ. ಮೂಗಿನಿಂದ ಎಡತಾಕುತ್ತ, ಗಾಳಿಯನ್ನು ನೇವರಿಸಿ ಹುಡುಕುತ್ತ ಹೋಗುವ ವಿವೇಕವಿಲ್ಲದ ಅಜ್ಞಾನಿ ಸಾಮಾನ್ಯರು-ಕಣ್ಣಿದ್ದು ಕುರುಡರು. ಕವಿ ಅವರನ್ನು 'ಕಂಪಿನ ಕುರುಡರು' ಎಂದು ಬಣ್ಣಿಸಿದ್ದಾರೆ.

ಗರುಡ ಪಕ್ಷಿಗಳ ರಾಜ, ವಿಷ್ಣುವಿನ ವಾಹನ. ಅದು ಸ್ವೇಚ್ಛೆಯಿಂದ ಸ್ವಚ್ಛಂಧವಾಗಿ ಕೆಚ್ಚು ಧೈರ್ಯದಿಂದ ಗಗನದಲ್ಲಿ ಎತ್ತರದಲ್ಲಿ ವಿಹರಿಸುವ ಪಕ್ಷಿ. 'ಗರುಡದೃಷ್ಟಿ' - ಸದಾ ಜಾಗೃತವಾದ ಸೂಕ್ಷ್ಮದೃಷ್ಟಿ. 'ಗರುಡ ಪ್ರಜ್ಞೆ' ಒಂದು ಮಹಾಪ್ರತಿಮೆ.

ಪುತಿನ ಅವರು ನೆರಳು ಕವನದಲ್ಲಿ ಗರುಡ ಪ್ರಜ್ಞೆಯ ಗಾಂಧಿಯನ್ನು 'ನೆರಳುಗಾಂಧಿ' ರೂಪಕದಲ್ಲಿ ಚಿತ್ರಿಸಿದ್ದಾರೆ. 'ಅದಕೆ ಅದರಿಚ್ಛೆಹಾದಿ' ಎಂಬಲ್ಲಿ ಸಾಧಕ ತನ್ನಿಚ್ಛೆಯಂತೆ ಸಾಧನಾ ಪಥದಲ್ಲಿ ನಡೆಯುವುದನ್ನು ತಿಳಿಸಿದ್ದಾರೆ. ಅನಂತರ 'ಇದಕೊಂದೆ ನಿಟ್ಟು' ಎಂಬಲ್ಲಿ ಗರುಡನಿಗೆತನ್ನ ನಿಟ್ಟನ್ನು ಗುರಿಯನ್ನು ಸಾಧಿಸುವುದೇ ಧ್ಯೇಯವೆಂದು ಸ್ಪಷ್ಟಪಡಿಸಿದ್ದಾರೆ.

ಜ್ಞಾನದಾಹಿಯಾದ ಸಾಧಕನು ಗಾಳಿಸುಳಿಗಳನ್ನು ಸೀಳಿ ಸ್ವೇಚ್ಛೆಯಿಂದ

ಸ್ವತಂತ್ರವಾಗಿ ಮುನ್ನುಗ್ಗಿ ಗರುಡುನಂತೆ ಗುರಿತಲುಪುತ್ತಾನೆ ಎಂದು ಬೇಂದ್ರೆ ಹೀಗೆ ವರ್ಣಿಸಿದ್ದಾರೆ.

ಗಾಳಿ ಸುಳಿಗಳ ಸೀಳಿ ಬರುವನು
ಸ್ವೇಚ್ಛೆಗೇಳುವ ಗರುಡನು

ಕವಿಯು ಇದನ್ನು ಮನನವಾಗಿಸಲು ಕವನದ ಶೀರ್ಷಿಕೆಯಡಿ ಭಗವದ್ಗೀತೆಯ ಶ್ಲೋಕವನ್ನು ನೀಡಿದ್ದಾರೆ. ಸಾಮಾನ್ಯ ಜನರು ಯಾವ ತತ್ತ್ವವನ್ನು ಕಾಣದವರಾಗಿ ಕಂಪಿನ ಕುರುಡರಾಗಿದ್ದರೆ, ಜ್ಞಾನಿಯಾದವನು ಆ ತತ್ತ್ವವನ್ನು ಅರಿವ ಸಾಧನಾ ಪಥದಲ್ಲಿದ್ದು ಗರುಡನಾಗಿದ್ದಾನೆ.

ಕುರುಡರಂತಿರುವ ಸಾಮಾನ್ಯರಿಗೆ ಕಾಣುವುದು ಚಿಕ್ಕೆ. ಜ್ಞಾನಾನ್ವೇಷಿ ಮುಮುಕ್ಷುವಿಗೆ ಕಾಣುವುದು ಬೆಳ್ಳಿ. ಅವೆರಡನ್ನೂ ಒಂದೇ ಎನ್ನುವೆಯ ಎಂದು ಕವಿ ಪ್ರಶ್ನಿಸಿದ್ದಾರೆ.

ಚಿಕ್ಕೆ ಮಿಣುಕಲಿ ಬೆಳ್ಳಿ ತಿಣುಕಲಿ
ಒಚಿದೆಎಂಬೆಯಎರಡನೂ?


ಕುಣಿವವಾತ್ಮದ ಅಣುಗಳು

ಕವನದ ಪ್ರಾರಂಭದ ಎರಡು ನುಡಿಗಳಿಗೆ ಫಲ ಶ್ರುತಿಯಂತೆ ಮೂರನೆಯ ನುಡಿಯಿದೆ. ಯೋಗಿ ಋಷಿಗೆ ಬೇಕಾದದ್ದು ಆತ್ಮಜ್ಞಾನ. ಬಾಳಿನ ಗವಿಯಲ್ಲಿ ತಮವು ಆವರಿಸಿದ್ದರೂ ಅವನು ಸಾಫಲ್ಯತೆ ಪಡೆದೆ ಪಡೆಯುತ್ತಾನೆ. ಅವನಲ್ಲಿ ಆತ್ಮದ ಅಣುಗಳು ಕುಣಿಯುತ್ತವೆ ಎಂದು ಅವನಲ್ಲಿ ಉಂಟಾದ ಆತ್ಮದಾನಂದವನ್ನು ಕವಿ ಚಿತ್ರಿಸದ್ದಾರೆ. ಅವನ ಜ್ಞಾನದಾಹಿಯಾದ ಆತ್ಮದ ಜೇನ್ನೊಣ ಗಳು ಬಾಳಿನ ಹೂರಸ ವನ್ನು ಜೇನುಗೊಳಿಸಿ, ಆತ್ಮಕ್ಕೆ ಮಧುರ ಪೌಷ್ಠಿಕ ಸವಿ ಜೇನನ್ನು ಉಣಿಸುವವು. ಅವನ ನಿರಂತರ ತಪಸ್ಸಿನಿಂದ ಆತ್ಮಾನುಭೂತಿಯ ಬೆಳ್ಳಿ ಮೂಡುತ್ತದೆ.

ಕಣ್ಣಿದ್ದು ಕುರುಡರಂತೆ ವರ್ತಿಸುವ, ಅಜ್ಞಾನ ಅಹಂನ ಅಂಧಕಾರದಲ್ಲಿರುವ ಸಾಮಾನ್ಯರು ತಮ್ಮ ಹಾಳು ಗನಸಿನ ಸ್ಮಶಾನದಲ್ಲಿ ಹೊರಳಾ ಡುವರು. ಅಂತಹವರು ಬದುಕಿದ್ದೂ ನಿಷ್ಪ್ರಯೋಜಕ ಎನ್ನುವುದನ್ನು ಕವಿಯು 'ಜೀವದ ಹೆಣಗಳು' ಎಂದು ಚಿತ್ರಿಸದ್ದಾರೆ.

ಈ ಕವನ ಬೇಂದ್ರೆಯವರ ಅನುಭಾವಗೀತೆಗಳಲ್ಲಿ ವಿಶಿಷ್ಟವಾದುದಾಗಿದೆ.

*



೬

ಸರಸ್ವತೀ ಸೂಕ್ತ

'ಸರಸ್ವತೀ ಸೂಕ್ತ'ವು ವಿದ್ಯಾಧಿ ದೇವತೆ ಶಾರದೆಯನ್ನು ಕುರಿತು ಮಾಡಿದ ಸ್ತೋತ್ರವಾಗಿದೆ. ಬೇಂದ್ರೆಯವರು ಜಗತ್ತಿನ ಎಲ್ಲ ಮನುಜರ ಜೀವನದ ಸ್ಥಿತಿಗತಿಯನ್ನು ಉತ್ತಮ ಪಡಿಸುವ ವಿದ್ಯಾದಾಯಿನಿ, ಜ್ಞಾನ ಪ್ರದಾಯಿನಿ ಸರಸ್ವತಿಯನ್ನು 'ನೀರಿನಾಕೆ' ಎಂಬ ಪದದಿಂದ ಅಭಿವ್ಯಕ್ತಿಸಿದ್ದಾರೆ. 'ನೀರು' ಎಂಬ ಪದಕ್ಕೆ 'ಜೀವನ' ಎಂಬ ಅರ್ಥವಿದೆ. ಅವರು ರೂಪಿಸಿರುವ ಈ ನವ ಪದ 'ನೀರಿನಾಕೆ' ಯಲ್ಲಿ ಜೀವನ ಮತ್ತು ಜೀವ ಪೋಷಕ 'ಜಲ' ವು ಐಕ್ಯಗೊಂಡಿದೆ. ಅದು ಆ ತಾಯಿ ಕೃಪೆಯಿಟ್ಟು ಪ್ರದಾನ ಮಾಡಿದ ಜ್ಞಾನವನ್ನು, ಅದರ ಕಸುವು ಕಾಂತಿಯನ್ನು, ಅದರಿಂದ ಪ್ರಾಪ್ತವಾಗುವ ಜೀವನ ಸೊಬಗನ್ನು ದರ್ಶಿಸುತ್ತದೆ. 'ಸರಸ್ವತಿ ಸಿರ್‌ಮೂರ್ (sirmur) ಬೆಟ್ಟಗಳಲ್ಲಿ ಹುಟ್ಟುವ ನದಿ. ಇದು ಸ್ಥಾನೇಶ್ವರದ ಪಶ್ಚಿಮದಲ್ಲಿ ಹರಿದು ವಿನಶನತೀರ್ಥದಲ್ಲಿ ಅದೃಶ್ಯವಾಗುತ್ತದೆ' ಎಂದು ಪುರಣ ಭಾರತ ಕೋಶದಲ್ಲಿದೆ.

ಸಂಸ್ಕೃತೀ ಪದ 'ಹಂಸ'ದ ಕನ್ನಡ ರೂಪ 'ಅಂಚೆ'. ಅದು ಬಿಳಿಬಣ್ಣದ ನೀರಿನಲ್ಲಿ ಆಡುವ ಹಕ್ಕಿ. ಅದು ಶುದ್ಧತೆ ಮುಗ್ಧತೆ, ಮುದ್ದಿಗೆ ಸಂಕೇತ. ಜ್ಞಾನವೆಂಬುದು ಶುದ್ಧ ಸ್ಪಷ್ಟ ಅರಿವು. ಅದು ನಿರ್ಮಲವಾದ ಚಿಂತನೆ, ಅದು ಮನುಷ್ಯರನ್ನು ಪೋಷಿಸುವ ಜೀವನ ತತ್ತ್ವ. ಅದು ಜೀವಧಾತುವಾದ ಗಾಳಿಯಂತೆ ಪರಿಶುದ್ಧ. ಅದು ಬೆಳಕು. 'ಬೆಳಕಿಗಿಂತ ಬೆಳ್ಳಗಿರುವ' ತಿಳಿವಳಿಕೆಯನ್ನು ನೀಡುವ ಚೈತನ್ಯ ದೀಪ್ತಿ. ಹಾಗಾಗಿ ಸರಸ್ವತಿಯನ್ನು ಹೀಗೆ ಸ್ತುತಿಸಿದ್ದಾರೆ.

ಅಂಚೆ ಏರಿ ನೀರಿನಾಕೆ
ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳದಳು **(ಗಂಗಾವತರಣ)**

ಕವಿಯು ಅಲ್ಲಿಯ ಗಾಳಿ, ನೀರು, ಬೆಳಕಿನ ಹೊಂದಾಣಿಕೆಯನ್ನು ತಿಳಿಸುತ್ತ, ಆ ದೇವಿಯ ವೀಣೆಯನ್ನು ಪ್ರಕೃತಿಯ ಲೀಲೆಯಲ್ಲಿ ವರ್ಣಿಸುತ್ತ – ಅದು ಆವರಿಸಿರುವ ಕತ್ತಲನ್ನು ದೂರಮಾಡುವ ಬಗೆಯನ್ನು ಹೀಗೆ ನಾದಮಯವಾಗಿ ಚಿತ್ರಿಸಿದ್ದಾರೆ.

ಗಾಳಿ ನೀರನಾಡಿಸಲು
ವೀಣೆಯಂತೆ ಬಾರಿಸಿ
ತೆರೆಗಳಾಗಿ ಬೆಳಕು ಬಂತು
ಕವಿದ ತಮ ನಿವಾರಿಸಿ.

'ನೀರಿನಾಕೆ' ಯಾದ ಶಾರದೆಯ್ನನು ಕವಿಯ 'ನೀರಿನುಸಿರಿ ಮೇಲೆ ಹಾರಿ' ಎಂದು ಆ ತಾಯಿಯನ್ನು ಮುಗಿಲಿನಲ್ಲಿ ತೇಲಾಡಿಸಿದ್ದಾರೆ. ಅಲ್ಲಿ ಅವಳು ಜ್ಞಾನ ಪ್ರತೀಕವಾದ 'ಬೆಳಕು – ಹಕ್ಕಿ'ಯನ್ನು ಏರಿದ್ದಾಳೆ. ಶುಭ್ರವಾದ ಸಾರಪೂರ್ಣವಾದ ನವ ನವೀನ ಹೊಳಪಿನ 'ಬಿಳಿಯ ಮೋಡ ಬೆಳಕಿನಲ್ಲಿ ತೇಲುವಂತೆ ಬಂದಿದ್ದಾಳೆ' ಎಂದು ಕವಿ ಬಣ್ಣಿಸಿದ್ದಾರೆ. ಅದು ಅವಲ ಶ್ವೇತವಸಿನದ ಪ್ರತಿರೂಪ. ಅರಿವು ಶುದ್ಧ ವಾದುದು. ಅದು ನಿರ್ಮಲ ಮನಸ್ಸಿನಲ್ಲಿ ಮೂಡುವ ಬಗೆ – ಅರುಣಾ ತೇಲಿ ಬಂದಂತೆ!

ಹಾಗೆ ಬಂದ ಜ್ಞಾನದೇವತೆ ಈ ನೆಲದ ಜೀವಿಯಾದ ಕವಿಯನ್ನು 'ನೋಡು ಕಂದ' ಎಂದು – ಮನಸ್ಸು ತೆರೆದು ಮುಕ್ತವಾಗಿ ಪ್ರಕೃತಿಯನ್ನು ಅರಿವಿನ ನೆಲೆಯಿಂದ ಕಾಣು ಎಂದು ಆಹ್ವಾನಿಸಿದ್ದಾಳೆ. ಈ ಕವನದ ಶೀರ್ಷಿಕೆಯಲ್ಲಿ 'ಸೂಕ್ತ' ಪದವಿದ್ದರೂ, ಇದು ಕವಿ ಮತ್ತು ಸರಸ್ವತಿ ದೇವಿಯ ಆಪ್ತ ಸಂವಾದ ಲಹರಿಯಲ್ಲಿದೆ.

ಅವನು ಆ ಮಾತೆಯ ಕೆರೆ ಓಗೊಟ್ಟು ನಿಸರ್ಗ ವೈಭವದ ಶ್ರೀ ಮುಖವನ್ನು ಕಣ್ತೆರೆಂದು ಸೂಕ್ಷ್ಮವಾಗಿ ನೋಡುತ್ತಾನೆ. ಆ ದೇವಿಯ ಶಾಂತ ಬೆಲಗಿನಲ್ಲಿ ಧ್ಯಾನಿಸ ತೊಡಗುತ್ತಾನೆ.

ಬೆಳಗಿನ ಬೆಳಕು ಈ ಪೃಥ್ವಿಯಲ್ಲಿ ಶಾಂತ ವಾತಾವರಣವನ್ನುಂಟು ಮಾಡುತ್ತದೆ. ಆ ಶಾಂತತೆಯಲ್ಲಿ ಜ್ಞಾನಿಯಾದವನು ಯೋಗಿಯಂತೆ ತನ್ನ ಆತ್ಮಶೋಧಕ್ಕೆ ಒಳಗಾಗುವನು. ಆನಂದದ ಸುಖವನ್ನು ಪಡೆಯುವನು. 'ಅಶಾಂತಸ್ಯ ಕುತ ಸುಖ' – ಅಶಾಂತನಿಗೆ ಸುಖವನ್ನು ಪಡೆಯಬೇಕು. ಆ ಸುಖ ಬಹಿರಂಗ ಪ್ರದರ್ಶನವಲ್ಲ. ಅಂತರಂಗದ ಅನುಸಂಧಾನದಲ್ಲಿ ದೊರೆಕಿಸಿಕೊಳ್ಳುವ ಭಾಗ್ಯ.

ಅಹಾ ಅಹಾ ಏನು ಮುಖ!
ತುಂಬಿ ಬಂದ ಹಾಗೆ ಸುಖ.

ವಿದ್ಯಾದೇವತೆಯ 'ಜೀವಸಖ' ವೆಂದರೆ ನುಡಿ. ಜೀವಿ (ಕವಿ)ಯು ಪ್ರತಿ ಪದದ ಅರಿವಿಗೆ ಒಳಗಾಗಿ, ತಾನು ತಿಳಿದದ್ದನ್ನು ಇತರರಿಗೆ ಸಂವಹನ ರೂಪವಾಗಿ

ಸುವ ಕಲೆ, ಚಿತ್ರ, ಅಕ್ಷರ, ಅದೇ ಸರಸ್ವತಿಯ ಒಟ್ಟಾರೆ ಜೀವ ಎಂಬ ತಿಳಿವಿನಲ್ಲಿ ಕವಿಯು ಭಾಷೆರೂಪುಗೊಂಡ ಲೀಲೆಯನ್ನು ಕಾವ್ಯಕಲೆಯಲ್ಲಿ ಹೀಗೆ ರೇಖಿಸಿದ್ದಾರೆ.

ಇದುವೆ ನನ್ನ ಜೀವ ಸಖ
ಎಂದು ನುಡಿಯು ಬಂದಿತು
ಜೀವ ತಾನೆ ಎಂದಿತು.

ವ್ಯಕ್ತಿಗಳ ಪರಸ್ಪರ ಭಾವಾಭಿವ್ಯಕ್ತಿಗೆ, ವ್ಯವಹಾರ ಕೌಶಲಕ್ಕೆ ವಾಹನವಾದ ಭಾಷೆಯು ಅವರಲ್ಲಿ ಆನಂದದ ನಗೆಯನ್ನು ಮೂಡಿಸುತ್ತದೆ. ಅದು ಆ ವಿದ್ಯಾಭಾಗ್ಯ ದೇವತೆಯ ನಗೆ ಎಂಬ ಭಾವದಲ್ಲಿ ಕವಿ ನುಡಿದೇವತೆಯನ್ನು ಆರಾಧಿಸಿರುವ ರೀತಿ ಅನನ್ಯವಾಗಿದೆ. ಅದು ಬರಿ ಭಾವನೆಗಳ ಅಭಿವ್ಯಕ್ತಿಗಷ್ಟೇ ಅಲ್ಲದೆ. ಪ್ರಕೃತಿಯಲ್ಲಿ ಅಡಗಿದ ವಿವಿಧ ಶಕ್ತಿಗಳ ವೈಜ್ಞಾನಿಕ ಸಂಶೋಧನೆ, ಅವುಗಳನ್ನೂ ಉಪಯೋಗಿಸುವ ಸಾಧನಗಳ ಉತ್ಪಾದನೆಗೆ ಮೂಲ ಸಾಧನವು ಭಾಷೆಯಾಗುತ್ತದೆ. ಅದನ್ನೆಲ್ಲ ಅರಿತ ಕವಿ ಆಲೋಚನಾಪರನಾಗುತ್ತಾನೆ. 'ದಾರಿ – ದೀಪ ಇದು ನನಗೆ! ಕೊನೆಯವರೆಗು ತೋರಿತು' ಎಂಬ ತಿಳಿವಿಗೆ ಒಳಗಾಗುತ್ತಾನೆ. ಆ ಮಾತೆಯ ಜ್ಞಾನ ಪ್ರಭೆ ತನ್ನ 'ಅಣುಕಣಕೂ ಸೇರಿತು' ಎಂದು ಧನ್ಯಭಾವಕ್ಕೊಳಗಾಗುತ್ತಾನೆ.

ಶಾರದೆಯ ಇನ್ನೊಂದು ಅರ್ಥ ಸತ್ತ್ವ, ಸಾರ, ಅದು ಪ್ರಕಟಗೊಂಡು ಪ್ರಕಾಶಿಸುವುದು ಕಣ್ಣಿನಲ್ಲಿ. ಅದನ್ನು ಕಂಡ ಜಾವದಲ್ಲಿ ಕವಿಯು ತನ್ನ ಜೀವಭಾವಕ್ಕೆ ಅದರ ರಸವನ್ನು ಉಣ್ಣು, ಸವಿ, ಬೌದ್ಧಿಕ ಆರೋಗ್ಯದಲ್ಲಿ ಪುಷ್ಟಿಪಡೆ ಎಂದು ಹೀಗೆ ತಿಳಿ ಹೇಳಿದ್ದಾರೆ.

ಹೊಳೆವುದೇನು? ಏನು ಕಣ್ಣೋ!
ಮಿಡಿದರೊಡೆವ ದ್ರಾಕ್ಷಿ ಹಣ್ಣೊ
ಅದರ ರಸವನುಣ್ಣು ಉಣ್ಣು
ಎಂದೆ ಜೀವ ಭಾವಕೆ
ಅದನು ಕಂಡ ಜಾವಕೆ।

ಬೇಂದ್ರೆಯವರು ಜ್ಞಾನದ ಬೆಳಕು ಪಸರಿಸಿದ್ದನ್ನು, ಅದರ ತಿಳಿವಿನ ಸವಿಯು ತನ್ನ ಸುತ್ತ ಮುತ್ತಲು ಹೇಗೆ ಪವಿತ್ರ ಹಾಲು ಚೆಲ್ಲಿದಂತೆ ಆವರಿಸಿತು ಎಂಬುದನ್ನು ಹೀಗೆ ರೂಪಕದಲ್ಲಿ ಬಣ್ಣಿಸಿದ್ದರೆ.

ಬಯಲು ಆವು (ಹಸು) ಆಗಲು, ಆ ಬಯಲೆ ಹಾಲು ಕರೆದ ಹಾಗೆ ಅರಿವಿನ ಬೆಳಕು ವ್ಯಾಪಿಸಿತು. ಆಗ ಆ ವಾತಾವರಣದ ಗಾಳಿ ಸಂತಸದಿಂದ ಹಿಗ್ಗಿ ಮೇರೆವರಿದು ಹರಿದಾಡಿತು!

ಆಗ ನಾದದ ಅಧಿದೇವತೆ ಶಾರದೆಯು ಪ್ರಾಣ ತಂತು ವಿನಂತೆ – ವೀಣೆ ನುಡಿಸುವುದರಲ್ಲಿ ತಲ್ಲೀನಳಾಗಿ ಅದರ ಮಧುರ ಸ್ವರದ ಆಶ್ರಯದಲ್ಲಿ ಆನಂದದಿಂದಿ

ರುವಳು ಎಂದು ಕವಿ ಚಿತ್ರಿಸಿದ್ದಾರೆ. ಆ ನಾದವನ್ನು ಆಟಿಸುವವನಾಗು ಎಂದು ಸಹೃದಯನಿಗೆ ಕರೆಕೊಡಟ್ಟಿದ್ದಾರೆ.

ಅಪ್ಸರಲ್ಲಿ ಕೇಳಬಂತು
ನುಡಿಸಿದಂತೆ ಪ್ರಾಣತಂತು
ಏರಿದಂತೆ ಇಂಚರ
ಆಕೆಗಿರುವ ಆಸರ ॥


ಕವಿಯು ಹೀಗೆ ಜ್ಞಾನದೇವತೆಯನ್ನು ತನ್ನ ಚಿಂತನೆಯ ಭಾವಲಹರಿಯಲ್ಲಿ ನವನವೀನ ಪ್ರತಿಮೆಗಳಲ್ಲಿ ವರ್ಣಿಸುತ್ತ ಸ್ತುತಿಸುತ್ತಾನೆ. ಆಗ ಆ ತಾಯಿಯು ವಾಸ್ತವ ವಾಗಿರುವ ಈ ಲೋಕದ ಬದುಕಿನಲ್ಲಿ ಜೀವಿ ಅರ್ಥಪೂರ್ಣವಾಗಿ ಜೀವಿಸಬೇಕಾದ ರೀತಿಯನ್ನು ತಿಳಿ ಹೇಳುತ್ತಾಳೆ. ಅದರಲ್ಲಿ ಸಕಲ ಮಾನವರು ತಮ್ಮ ತಮ್ಮ ರುಚಿಯ ಹದವನ್ನು ತಾವೇ ಕಂಡುಹಿಡಿದುಕೊಂಡು ಅದನ್ನು ಉಣ್ಣಬೇಕು. ಅದೇ ಈ ನೆಲದ ಸಾರ್ಥಕ ಬಾಳಿನ ತತ್ತ್ವ ಎಂಬುದನ್ನು ತಿಳಿದು ನಡೆಯಲು ಹೇಳುವಳು. ಅದರ ಬಗ್ಗೆ ತನ್ನನ್ನೇನೂ ಕೇಳಬೇಕಾಗಿಲ್ಲ ಎಂದು ಸ್ಪಷ್ಟವಾಗಿ ತಿಳಿಸುವಳು.

ಏನು ಸವಿಯೊ ಅದನೆ ಕುಡಿ
ನಿನ್ನ ರುಚಿಯ ಹದವ ಹಿಡಿ
ನನ್ನನೇನು ಕೇಳುವೆ
ಆದರೂನು ಹೇಳುವೆ ॥

ಈ ಲೋಕದಲ್ಲಿ ಕತ್ತಲು ಬೆಳಕು, ಸಿಹಿ ಕಹಿ, ಕಷ್ಟ ಸುಖ, ನೀರು ಹಾಲು ಸಹಜ. ನೀರು ಇರದ ಹಾಲು ನೀರಸ. ಅದರ ಸರಿ ಹೊಂದಾಣಿಕೆಯ ಹದ ಕಂಡು ಬಾಳಿದರೆ ಬದುಕು ಸಾರ್ಥಕ. ಹಾಗಾಗಿ ಓ ನನ್ನ ಸಾರಸವಾದ ಕಂದನೆ ಇದನ್ನು ತಿಳಿದು ಬಾಳು ಎಂದು ಹೇಳಿದ್ದಾಳೆ. ಅದನ್ನು ಕೇಳಿ ತಿಳಿದ ಕವಿ (ಕಂದ) ತೃಪ್ತನಾ ದಂತೆ 'ಕಣ್ಣು ತೆರೆದು' ಅರಿವಿಗೆ ಒಳಗಾದವನಂತೆ ಆ ತಾಯಿಯನ್ನು ಸ್ತುತಿಸುತ್ತಾನೆ :

ಅಂಚೆ ಏರಿ ನೀರಿನಾಕೆ
ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳೆದಳು.

*



೭

ಉಷಾ ಸೂಕ್ತ

ಬೇಂದ್ರೆಯವರು ರಚಿಸಿರುವ 'ಉಷಾಸೂಕ್ತ' ಉಷಃ ಕಾಲದ ದೇವತೆಯನ್ನು ಕುರಿತ ಸ್ತೋತ್ರವಾಗಿದೆ. ಉಷಃ ಕಾಲದ ಅಧಿದೇವತೆ ಉಷಸ್ಸು. ರವಿಯ ಉದಯದ ಮೊದಲ ಕಾಲ ಉಷಃ ಕಾಲ. ವೇದದಲ್ಲಿಯ ಸ್ತೋತ್ರಭಾಗವನ್ನು ಸೂಕ್ತ ಎಂದು ಹೇಳುವರು.

ಕವಿಯು ಬೆಳಗಿನ ಜಾವದ ನಸುನಗೆಯ ಉಷಸ್ಸನ್ನು ನಾಟ್ಯವಾಡುತ್ತ ಬಾರೆ, ನಲಿವಿನ ಉಲ್ಲಾಸದ ಹಾಸ್ಯ ಸಂತೋಷವನ್ನು ಬೀರುತ್ತ ಬಾರೆ ಎಂದು ಪ್ರಾರ್ಥಿಸಿದ್ದಾರೆ. ಅದರ ಪಲ್ಲವಿ ನಾಟ್ಯಲಯದಲ್ಲಿ ನಾದಮಯವಾಗಿ ರಿಂಗನಗುಣಿತ ಹಾಕುತ್ತದೆ.

ಲಾಸ್ಯವಾಡ ಬಾರೆ ಉಷಾ
ಹಾಸ್ಯ ಬೀರಿ ಬಾರೆ ॥ಪಲ್ಲವಿ॥ **(ಹಾಡು ಪಾಡು)**

ಬೇಂದ್ರೆಯವರು ಮುಂಜಾನೆಯಲ್ಲಿಯ ಉಷೆಯ ಬಣ್ಣ ಬೆಡಗನ್ನು ನೋಡುತ್ತ ರಾತ್ರಿಯ ಪ್ರಾರಂಭದ ಸಂಜೆಯನ್ನು ನೆನೆದಿದ್ದಾರೆ. ಆ ಕಾಲವನ್ನು ಕೋಪ (ರುಷೆ) ದಿಂದ ಕೂಡಿದ್ದೆಂದು ಭಾವಿಸಿ 'ಬೇಡ ಈಗ ಸಂಧ್ಯಾರುಷೆ । ತೊಲಗಲಿನ್ನು ಉಳಿದ ನಿಶೆ' ಎಂದು ಕೇಳಿ ಕೊಂಡಿದ್ದಾರೆ. ಸಿಟ್ಟು ಸಿಡುಕಿನ ಸಂಧ್ಯಾಕಾಲ ಹಾಗೂ ಕತ್ತಲ ರಾತ್ರಿ ತೊಲಗಲಿ ಎಂದಿದ್ದಾರೆ.

ಉಷಾ ಕಿರಣಗಳ ದಿವ್ಯ ಪ್ರಕಾಶ ಎಂಟು ಎಡೆಯಲ್ಲಿರುವ ಎಂಟು ದಿಕ್ಕುಗಳನ್ನು ಆವರಿಸಿಕೊಂಡಿವೆ. ಎಲ್ಲ ದಿಶೆಯು ಉಷೆಯ ತೇಜದಲ್ಲಿ ತನ್ಮಯವಾದಂತೆ ಸ್ಥಗಿತಗೊಂಡಿವೆ. ಆ ಹೊಳಪಿನಲ್ಲಿ ಎಲ್ಲವೂ ಸ್ತಂಭಿತಗೊಂಡು ಕಂಭದಂತಿವೆ. ಅಂತಹ ಅಪಾರ ಶಕ್ತಿಯ ಉಷೆಯನ್ನು ಇಳೆಗೆ ಬಾ ಎಂದು ಆಹ್ವಾನಿಸಿದ್ದಾರೆ.

ಕವಿಯು ಕತ್ತಲನ್ನು ಹೊಸೆದು ತಿಕ್ಕಲು ಅದು ಬೆಳ್ಳಿ ಚುಕ್ಕೆಯನ್ನು ಹಡೆದಿರುವುದೇನೊ ಎಂದು ಆ ಸಮಯದಲ್ಲಿ ಅಗಸದಲ್ಲಿ ಶೋಭಿಸುವ ಶುಕ್ರ ಗ್ರಹವನ್ನು ಬಣ್ಣಿಸಿದ್ದಾರೆ. ಶುಕ್ರವು ಬಿಳುಪು ಎಂಬರ್ಥದ ಗ್ರಹ. ಅದನ್ನು ಅವರು 'ಉಷೆಯ ಹಣೆಗೆ ಬೆಳ್ಳಿ ಶುಕ್ರ ತಿಲಕವನಿಡಲಿ' ಎಂದು 'ನವಯುಗಾರಂಭ' ಕವನದಲ್ಲಿ ಚಿತ್ರಿಸಿದ್ದಾರೆ. ಅದನ್ನು 'ಆಹಾ! ಏನು ನಗೆಯ ನಕ್ಕೆ!' ಎಂದು ಅದರ ತೇಜಸ್ಸನ್ನು ಉಷೆಯ ನಗೆಯಾಗಿ ಕಂಡಿದ್ದಾರೆ.

ಓ ಉಷೆ, ಕತ್ತಲ ಆವರಣವನ್ನು ಹರಿದು ಹೊರಗೆ ಬಾ, ಮುಸುಕು ತೆರೆಯನ್ನು ತೆರೆದು ಕಂಗೊಳಿಸು ಎಂದು ಕೇಳಿಕೊಂಡಿದ್ದಾರೆ.

ಮುಂಜಾವದ ತಂಪು, ಹದವಾದ ಬಿಸಿಯನ್ನು ಕವಿಯು ಕಾವ್ಯದಲ್ಲಿ ಸೆರೆಹಿಡಿದಂತೆ 'ಬಿಸಿಯೆ ಸಾಕು ಏಕೆ ಬಿಸಿಲು। ತಂಪಿನಲ್ಲೆ ತಣಿಯೆ ಸುಸಿಲು' ಎಂದು ಬಣ್ಣಿಸಿದ್ದಾರೆ. ಆ ಸುಸಿಲುವಿನಲ್ಲಿ ಜಡ ಜಗವು ಉಸಿರಾಡುತ್ತ (ಉಸಿಲು) ಎದ್ದು, ತನ್ನ ಜೀವಂರತಿಕೆಗೆ ಕಾರಣವಾದ ಉಷೆಯನ್ನು ಬಾ ಎಂದು ಕರೆಯುತ್ತಿದೆ.

ಉಷೆಯೆ ಮೂಡಲ ಒಡಲ ಹಾಸುಗೆಯನ್ನು ತೊರೆದು ಬಂದು, ಮೊದಲ ಏಳು ಹೆಜ್ಜೆ ಹಾಕು. ಸಪ್ತ ವರ್ಣದ ಗೆಜ್ಜೆನಾದ ಕೇಳಲು ಈ ಲೋಕದ ಜನರ ಹಾಗೂ ಎಲ್ಲ ಜೀವ ಜಂತುಗಳ ನಿದ್ದೆ ತೊಲಗಿ ಹೋಗುತ್ತದೆ. ಆ ಕಾರಣದಿಂದ ಎದ್ದು ಬೇಗ ಬಾರೆ ಎಂದು ಕವಿ ಪ್ರಾರ್ಥಿಸಿದ್ದಾರೆ. ಅವರು ಉಷೆಯ ವರ್ಣಮಯ ಬೆಳಕಿನ ಪಾದ ಊರುವಿಕೆಯನ್ನು ನಾದಮಯ ಗೆಜ್ಜೆ ಎಂದು ಬಣ್ಣಿಸಿದ್ದಾರೆ. ಸುಸಿಲು, ಏಳು ಬಣ್ಣಗಳ ಬೆಡಗು, ನಾದ, ತಂಪು, ಗಾಳಿಗಳಲ್ಲಿ ಜಾಗೃತಗೊಂಡ ಜೀವ ರಾಶಿ ಎಲ್ಲವನ್ನು ಒಳಗೊಂಡ ಪ್ರಕೃತಿಯನ್ನು ಕವಿಯು ಅಖಂಡವಾಗಿ ಗ್ರಹಿಸಿ ಬೌದ್ಧಿಕ ಸೌಂದರ್ಯದಲ್ಲಿ ಹೀಗೆ ವರ್ಣಿಸಿದ್ದಾರೆ.

> ತೊರೆದು ಮೂಡಲೊಡಲ ಸೆಜ್ಜೆ
> ಹಾಕು ಏಳು ಮೊದಲ ಹೆಜ್ಜೆ
> ಕೇಳಿಸಲೇ ಕಾಲಗೆಜ್ಜೆ
> ನಿದ್ದೆ ತೊಲಗೆ ಬಾರೆ
> ಎದ್ದು ಬೇಗ ಬಾರೆ.

ಉಷೆಯದೊಂದು ಬೆಳಕಿನ ಕುಣಿತ, ಅದನ್ನು ಕೇಳಿ ಮಲಗಿದ್ದ ಗಾಳಿ ಎದ್ದಿತು ಎಂದು ಬೆಳಕು ಮತ್ತು ಗಾಳಿಯನ್ನು ವ್ಯಕ್ತಿಯೆಂದು ಎದ್ದಿತು ಎಂದು ಬೆಳಕು ಮತ್ತು ಗಾಳಿಯನ್ನು ಮುಂಜಾನೆ ಬೀಸುತ್ತ 'ಗಿಡ ಬಳ್ಳಿಗೆ ಏಳಿ' ಎಂದು ಎಬ್ಬಿಸುವ ಜಾಗೃತ ಕರೆ ಸಹಜ ನಿಸರ್ಗ ಕ್ರಿಯೆ. ಅದನ್ನು ಕಂಡ ಕವಿ ಈ ರೀತಿ ಸಸ್ಯ ಸಂಕುಲ, ಪ್ರಾಣಿ ಪಕ್ಷಿಗಳಿಗೆ ಜೀವ ಸಂಚಾತವಾಗುವಂತೆ ಮೂಡಿಬಂದ ಉಷಸ್ಸು ದೇವತೆಯನ್ನು ವಿಶೇಷವಾದ ಹೊಗಳಿಕೆಗೆ (ಸನ್ನುತಿ) ಪಾತ್ರಳಾದಳೇ ಬಾ ಎಂದು ಆಹ್ವಾನಿಸಿದ್ದಾರೆ.

ಕವಿ ಪ್ರಕೃತಿಯ ಬೆರಗಿನ ಲೀಲೆಯನ್ನು ಅಖಂಡವಾಗಿ ಗ್ರಹಿಸಿ ಕಾವ್ಯದಲ್ಲಿ ಕಡೆದಿಟ್ಟಿರುವ ರೀತಿ ಅನನ್ಯವಾಗಿದೆ. ಉಷಃ ಕಾಲದಲ್ಲಿ ಹೂ ಪಕಳೆ ಉತ್ಸಾಹಗೊಂಡು ಕಂಪು ಚೆಲ್ಲಾಡಿಸುವಾಗ, ಪಕ್ಷಿಗಳ ಕಂಠವು ಉಕ್ಕಿ ಬಂದ ಆಹ್ಲಾದದಲ್ಲಿ ದನಿ ತುಳುಕಿಸಿ ಹಾಡುತ್ತವೆ. ಹೀಗೆ ನಿಸರ್ಗ ಸಮಸ್ತವೂ ಜೀವಂತಿಕೆಯಿಂದ ಪುಟಿದೇಳುವ ಚೇತನ ಶ್ರೀಯಾದ ಉಷೆಯೆ – ಬೆಳಕನ್ನು ತೂರಿ, ನಿನ್ನ ಜಾಣ್ಮೆಯ ಚಮತ್ಕಾರ ಚಳಕಿ ತೋರಿ ಬಾರೆ ಎಂದು ಪ್ರಾರ್ಥಿಸಿದ್ದಾರೆ.

ಕಂಪು ಚೆಲ್ಲೆ ಪಕಳೆ ಮಿಕ್ಕಿ
ದನಿ ತುಳುಕಿತು ಕಂಠವುಕ್ಕಿ
ನಲಿಯೆ ಹೂವು ಉಲಿಯೆ ಹಕ್ಕಿ
ಬೆಳಕ ತೂರಿ ಬಾರೆ
ಚಳಕ ತೋರಿ ಬಾರೆ

ಬೇಂದ್ರೆಯವರು ಸೃಷ್ಟಿ ಸ್ಥಿತಿ ಲಯಗಳು ಉಷೆಯ ಪಾದ ಮೋದ ನಾದದಲ್ಲಿದೆಯೆಂದು ತಿಳಿಸುತ್ತ ಅವಳನ್ನು ಬಿನದ ಅರ್ಥಾತ್ ಆನಂದದ ಶಕ್ತಿ ಎಂದು ಕರೆದು ಸ್ವಾಗತಿಸಿದ್ದಾರೆ. ಅವರಿಗೆದ ಉಷಾರಶ್ಮಿ ಮುಪ್ಪು ಮುಟ್ಟಲಾರದವಳು, ಚಿರಜವ್ವನೆ, ಚಿರ ನೂತನೆ. ಹಾಗಾಗಿ ಅಂತಹ ಗುಣಲಕ್ಷಣಗಳನ್ನು ತನ್ನಲ್ಲಿ ಆಶಿಸುತ್ತ – ಅವಳನ್ನು ತಾಯಿ ಎಂದು ಕರೆದು ಹೀಗೆ ಕೇಳಿಕೊಂಡಿದ್ದಾರೆ.

ನನ್ನ ಮನವೆ ನಿನ್ನ ಮನೆ
ಅಬ್ಬೆ! ಮೂಡಿ ಬಾರೆ
ಮಬ್ಬು ದೂಡಿ ಬಾರೆ

ಉಷೆಯ ಛವಿ – ಕಾಂತಿ ಶೋಭೆಯನ್ನು ಕಂಡು ಈಗಾಗಲೆ ವೇದದ ಕವಿ ಹಾಡಿ ಕರೆದಿದ್ದಾನೆ. ಅವಳು ಛಂದ ಕುಣಿದು ಲಾಸ್ಯವಾಡಿದ ಅನಂತರ ರವಿ ಬರುತ್ತಾನೆ. ಹಾಗಾಗಿ ಬೇಂದ್ರೆಯವರು ಹೀಗೆ ಬೇಡಿಕೊಂಡಿದ್ದಾರೆ.

ಛಂದ ಕುಣಿದು ಬಾರೆ
ಮುಂದೆ ರವಿಯ ತಾರೆ

*



೮

ಉಷೆ ತಂದಾಳಿಕೊ

'ಉಷೆ ತಂದಾಳಿಕೊ' ಕವನವನ್ನು ಬೇಂದ್ರೆಯವರು ತಮ್ಮ ವಿದ್ಯಾರ್ಥಿ ಹಾಗೂ ತರುಣ ಮಿತ್ರರಾಗಿದ್ದ ಶ್ರೀ ಮಾಗಡಿ ಅವರ ವಿವಾಹ ಸಂದರ್ಭದಲ್ಲಿ ರಚಿಸಿದ್ದಾರೆ. 'ಲೀಲಾವತಿ' ಎಂಬ ಹೆಸರಿನ ವಧುವನ್ನು ಉಷೆಯೆಂದು ಕರೆದು, ಬೀದರದವರು ಬಳಸುವ ಆಡುನುಡಿಯಲ್ಲಿ 'ತಂದಾಳಿಕೊ' ಎಂದಿದ್ದಾರೆ. 'ಹತ್ತಿರದ ವಸ್ತುವಿನ ಅಥವಾ ವಿಷಯದ ಕಡೆಗೆ ಗಮನ ಸೆಳೆಯಲು ಉಪಯೋಗಿಸುವ ಮಾತು' – ಇಕ್ಕೋ. ಸಮೀಪಳಾದ ವಧುವಿನ ಆಪ್ತತೆಯನ್ನು ಆ ಪದ ಧ್ವನಿಸುತ್ತದೆ.

ಬೇಂದ್ರೆಯವರು ಆ ವಿವಾಹವು ಸೂರ್ಯೋದಯದ ಸೊಬಗಿನಂತೆ, ಮಂಗಳಮಯವಾದುದು ಎಂಬ ಭಾವದಲ್ಲಿ ವಧುವಾಗಿ 'ಉಷೆ'ಯನ್ನು, ವರನಾಗಿ 'ರವಿ'ಯನ್ನು ಪರಿಕಲ್ಪಿಸಿಕೊಂಡು ಈ ಕವನವನ್ನು ನೇಯ್ದಿದ್ದಾರೆ, ರವಿಯು ಗೋಚರಿಸುವ ಮೊದಲು ಬೆಳಕಿನ ಕಾಂತಿಯನ್ನು ಉಷೆ ಪಸರಿಸುವುದರಿಂದ – ಅವರಿಬ್ಬರು ಬಂದ ಸಂಭ್ರಮವನ್ನು ಹೀಗೆ ರೇಖಿಸಿದ್ದಾರೆ.

ಉಷೆ ತಂದಾಳಿಕೋ, ರವಿ ಬಂದಾನಿಗೋ
ಆತ ಹಿಂದೆ ಈಕಿ ಮುಂದ ಮುಽಂದ.

(ಮುಕ್ತಕಂಠ)


ವಿವಾಹ ಸಂದರ್ಭವೆಂದರೆ ವಧುವರರಲ್ಲಿ ಬೆಳಕಿನ ಪ್ರವೇಶವಾದಂತಹ ವಿಶೇಷ ಹೊಳಪು. ಅವರು ಕತ್ತಲ ಭಾವದಿಂದ ದೂರವಾಗಿ ಹೊಸ ಹುರುಪು ಉತ್ಸಾಹದಲ್ಲಿ ತಮ್ಮಲ್ಲಿದ್ದ ಮುಸುಕು ಸರಿಸಿ, ಗರಿಗೆದರಿ ಜೊತೆಯಾಗಿ – ಪಕ್ಷಿಗಳು ಹಾರಿದಂತೆ ಮುಗಿಲಿಗೇರುವ ಏರು ಜವ್ವನ ಸ್ಥಿತಿ. ಅದನ್ನು ಪ್ರಕೃತಿಯ ಹೋಲಿಕೆಯೊಂದಿಗೆ ಕವಿ ಹೀಗೆ ಚಿತ್ರಿಸಿದ್ದಾರೆ.

ಕತ್ತಲಿ ಹಿಡಿದsದ ತನ್ನ ದಾರಿss ಬೆನ್ನ ತೋರಿs
ನಸುಕು ಬಿತ್ತು ಎತ್ತೊ ಜಾರಿss ಆಗಿ ವಾರಿs.
ಹೋದ್ದಾಂಗ ಮುಸುಕು ಹಾರಿss ಮುಗಿಲ ನೇರಿs

ಅವರಿಬ್ಬರು ತಮ್ಮ ತಮ್ಮ ಒಲವನ್ನು ತೋರಿ, ವಾರಿಯ ಬಳುಕು ಬಾಗಿನ ವಾರಿನೋಟದಲ್ಲಿ ಸೆಳೆದು, ಹೊಸ ಆನಂದಾನುಭವದಲ್ಲಿ ಮುಗಿಲನ್ನು ಏರಿ ಸಂತಸದಲ್ಲಿ ಬೆಸೆದುಕೊಳ್ಳುತ್ತಾರೆ. ಅದನ್ನು ಕವಿಯು ಉಷೆ ಮತ್ತು ಸೂರ್ಯ ಒಂದಾದ ಬೆಳಕಿನ ರೂಪಕದಲ್ಲಿ 'ಬೆಳಕಿನ್ಯಾಗ ಬೆರೆತು ಆಗ್ಯಾರೊಂದ' ಎಂದು ವರ್ಣಿಸಿದ್ದಾರೆ. ಆಗ ಅವರ ಜೊತೆ ನಿಸರ್ಗ ರಮಣೀಯ ಗುಲಾಬಿಯ ಹೆಜ್ಜೆ, ಹಕ್ಕಿಯ ಗಿಲುಕು, ಬೆಳಕಿನ ಹೆಜ್ಜೆ – ಆ ನವ ದಂಪತಿಗಳೊಡನೆ ಕೂಡಿ ಅತಿಶಯ ವಾಗಿ ಹರ್ಷಪಡುವುದನ್ನು ಕವಿ 'ಜಗಕ ಸೂರಿ ಸೂರಿ ಆನಂದ!' ಎಂದು ಸಂಭ್ರಮಿ ಸಿದ್ದಾರೆ.

ಗುಲಾಬಿ ತೋರ್‍ಯಾನ ಲಜ್ಜಿ
ಹಕ್ಕಿ ನುಡಿಸ್ಯಾವ ಗೆಜ್ಜೆ
ಬೆಳಕು ಹಾಕ್ಯಾವ ಹೆಜ್ಜೆ
ಅವರು ಬರೋsದನs ಬಲು ಚೆಂsದ
ಜಗಕಿ ಸೂರಿ ಸೂರಿ ಆನಂದ!

*



೬

ನಸುಕು ಬಂತು ನಸುಕು

ಬೇಂದ್ರೆಯವರು ತ್ರಿಪದಿಯಲ್ಲಿ ರಚಿಸಿರುವ 'ನಸುಕು ಬಂತು ನಸುಕು' ಕವನವು ಮೂರು ಮಾತ್ರೆಗಳ ಉತ್ಸಾಹ ರಗಳೆಯ ಲಯದಲ್ಲಿ ಮಿಡಿ ಮಿಡಿದು ಬಂದಂತೆ ಮೂರು ನುಡಿಗಳಲ್ಲಿ ಕಂಗೊಳಿಸಿದೆ. ಇದರಲ್ಲಿಯ ಅಂತ್ಯಪ್ರಾಸ ಪದಗಳು ಮುಂಜಾನೆಯ ಮಂಜಿನಂತೆ ಗರ್ಭಿತಾರ್ಥ ವನ್ನಿಟ್ಟುಕೊಂಡು ಕಾವ್ಯಸಕ್ತರಿಗೆ – ಅರ್ಥ ವನ್ನು ಶೋಧಿಸಿ ಎಂದು ಪ್ರಶ್ನೆ ಹಾಕಿದಂತಿವೆ. ಅವರು ತದೇಕ ಚಿತ್ತರಾಗಿ ಸೂರ್ಯೊ ದಯವನ್ನು ವೀಕ್ಷಿಸುತ್ತ, ಅದು ರೂಪುಗೊಂಡದ್ದನ್ನು ಅತಿ ಸೂಕ್ಷ್ಮವಾಗಿ ಪ್ರಕೃತಿಯ ಪ್ರತಿಮೆಗಳಲ್ಲಿ ಒಂದು ಸುಂದರ ಶಿಲ್ಪದಂತೆ ನುಡಿ ಬೆಡಗಿನಲ್ಲಿ ಕಡೆದಿಟ್ಟಿದ್ದಾರೆ.

ಓಹ್, ಇದೊಂದು ಅಪರೂಪದ ಗಾಳಿಯು ತಾಕಲು ಬೆಳಗು ಚಲನಶೀಲ ಗೊಂಡು ಹೆಜ್ಜೆ ಹಾಕಿದ ಇಂದ್ರಜಾಲದಂತಹ ಚಿತ್ರಣ. ಆ ಬೆಳಗು ಹುಟ್ಟಿ ಬಂದ ರೀತಿ ಕವಿಯ ಬೌದ್ಧಿಕ ಸೌಂದರ್ಯದಲ್ಲಿ 'ಇರುಳ ಮರವು ಒಡೆದು ತಳಿತು' ಆಗಿದೆ. ರಾತ್ರಿಯ ಮರವು ಕಡುಕೆಂಪು ಸೂಸಿ ಚಿಗುರಿದ್ದರ ಫಲ ಬೆಳಗು! ಅರುಣನ ಕಿರಣದ ಸೋಂಕಿನಿಂದ ಹೂಗಳು ಅರಳಿ 'ಮಘ ಮಘಿಸುವಾ ಮುಗಿದ ಮೊಗ್ಗೀ। ಪಟಪಟನೆ ಒಡೆದು। ತಾನೇ – ಪಟಪಟನೇ ಒಡೆದು' ಸುಗಂಧವನ್ನು ಬೀರುವುವು. ಆ ಕಂಪಿನ ಹಿತ ಶುಭ ಹರಿಸಿ ನಸುಕು ಬಂತು!

ಬೆಳಗು ಗಾಳಿ ತಾಕಿ ಚಳಿತು
ಇರುಳ ಮರವು ಒಡೆದು ತಳಿತು
ಅರುಣ ಗಂಧ ಹರುಹಿ ಒಳಿತು
ನಸುಕು ಬಂತು.

ಮೊದಲ ನುಡಿಯಲ್ಲಿ ನಸುಕಿನ ಶೈಶವವನ್ನು ಕವಿ ನೀಡಿ, ಅದು ಶೀಘ್ರವಾಗಿ ಬೆಳೆದ ಬಗೆಯನ್ನು 'ಬಳ್ಳಿ' ಪ್ರತಿಮೆಯಲ್ಲಿ – ಚಿಗುರು ತುದಿ ಚಾಚಿದಲ್ಲೆಲ್ಲ ಅದು

ತಬ್ಬಿಕೊಂಡು ಹಬ್ಬುವ ಬಗೆಯನ್ನು 'ಬೆಳಕು ಬಳ್ಳಿ ಬಿಟ್ಟು ಕುಡಿ' ಎಂದು ವರ್ಣಿಸಿದ್ದಾರೆ.

'ಬೆಳಗು' ಯೌವನಸ್ಥನಾಗಿ ಉತ್ಸಾಹಗೊಂಡು ಮೆರೆದು ಶೋಭಿಸುವುದನ್ನು 'ಗುಡಿ' – ಪತಾಕೆಯ ಪ್ರತಿಮೆಯಲ್ಲಿ ಅದರ ವ್ಯಾಪ್ತಿ ಮತ್ತು ಗರಿಮೆಯನ್ನು 'ಬಯಲಲೆತ್ತಿ ಅದರ ಗುಡಿ' ಎಂದು ಧ್ವನಿಸಿದ್ದಾರೆ. ಹಾಗೆ ರವಿಯು ತನ್ನ ಸಾಮ್ರಾಜ್ಯ ವನ್ನು ವಿಸ್ತರಿಸಿ ಧ್ವಜವನ್ನ ಹಾರಿಸುವಾಗ ಅವನ ಕಿರಿದಾದ 'ಮಿಡಿತನ' ಅಡಗಿ ಹೋಗಿ ರುತ್ತದೆ.

ಬೆಳಕು ಬಳ್ಳಿ ಬಿಟ್ಟು ಕುಡಿ
ಬಯಲಲೆತ್ತಿ ಹಗಲ ಗುಡಿ
ಅಡಗಿಸಿಟ್ಟ ರವಿಯ ಮಿಡಿ
ನಸುಕು ಬಂತು.

ಉಷಃ ಕಾಲವನ್ನು 'ಸುಸಿಲು' ಎನ್ನುವರು. 'ಕವಿ ನಂದನ ಕಥೆಗಳು' ಕೃತಿಯಲ್ಲಿ ನಂಜನಗೂಡು ಶ್ರೀ ಕಂಠ ಶಾಸ್ತ್ರಿಗಳು ಸುಸಿಲನ್ನು 'ಕವಿಯುದಯ ಕಾಲ' ಎಂದು ಕರೆದಿರುವರು. ಅದು ದಿಟವೂ ಹೌದು. 'ಸಾಳ್ವ ಭಾರತ' ದಲ್ಲಿ ಸಾಳ್ವನು 'ಸವಿ ಸುಸಿಲನುಂಡು ವಿಲಾಸಿಗಳು ನಾನಾ ವಿನೋದದಿವ ಸುಖದಲಿರುತಿಹರು' ಎಂದು ಅದರ ಮನೋಹರ ಸೃಷ್ಟಿ ಸೊಬಗಿನ ಲೀಲಾ ವಿನೋದವನ್ನು ಚಿತ್ರಸಿದ್ದಾನೆ. ಕುವೆಂಪು ಅವರು 'ನೋಡು ಎಂತಿದೆ ಸುಸಿಲು! ಹಸುರ ಮೇಲೆಳ ಬಿಸಿಲು । ಮಲಗಿಹುದು ಲೀಲೆಯಲಿ ಮೈ ಮರೆತ ಮೋಹನದ ಶಿಶುವಿನಂತೆ!' (ಪಾಂಚಜನ್ಯ) ಎಂದು ಬಣ್ಣಿಸಿದ್ದಾರೆ.

ಸುಸಿಲು ಮೂಡಿಬಂದ ಆಹ್ಲಾದಮಯತೆ, ಅದರಿಂದ ಸೂಸುವ ಬೆಳಕು ; ಆ ಬೆಳಕಿನ ಅರಿವಿನಲ್ಲಿ ಉಸಿರಾಡುವ ಜೀವಿಗಳನ್ನು ಕಂಡು ಬೇಂದ್ರೆ ಬೆರಗಿಗೆ ಒಳಗಾಗಿದ್ದಾರೆ. ಅವೆಲ್ಲದರ ಜೀವಂತಿಕೆಯನ್ನು ನೋಡ ನೋಡುತ್ತ ಕಲ್ಪನಾ ಸೌಂದರ್ಯದಲ್ಲಿ 'ಬೆಳಕು ಹೂ ಬಿಟ್ಟು ಬಿಸಿಲಾಗಿದೆ' ಎಂದು ವರ್ಣಿಸಿದ್ದಾರೆ.

ಬೆಳಕು ಸೂಸುತಿರಲು ಸುಸಿಲು
ಅದನು ಮೂಸುತಿರಲು ಉಸಿಲು
ಬೆಳಕು ಹೂತು ಆತು ಬಿಸಿಲು
ನಸುಕು ಬಂತು.

ಇಕೊ ನಿಶೆಯು ನಕ್ಕಿತಿಲ್ಲಿ

ಬೇಂದ್ರೆಯವರು ರಾತ್ರಿಯ ಒಡಲಿನಿಂದ ಮೂಡಿ ಬರುವ ಸೂರ್ಯನನ್ನು ಎಷ್ಟು ಬಗೆಯಾಗಿ ವರ್ಣಿಸಿದರು ತಣಿಯದವರಾಗಿದ್ದಾರೆ. ಅವರಿಗೆ ರವಿ ಉದಯ ವೆಂದರೆ 'ನಿಶೆಯ ನಗು'. ಆ ನಗೆಯ ಆಹ್ಲಾದ ಚದುರಿ ಕಂಗೊಳಿಸುವುದನ್ನು ಹೀಗೆ ಮನೋಹರವಾಗಿ ಚಿತ್ರಿಸಿದ್ದಾರೆ.

ದಿನದ ರವಿಯ ಪ್ರಭೆ ಚುಕ್ಕೆ ಚೂರಾಗಿ ದಿಕ್ಕು ದಿಕ್ಕಿನಲ್ಲಿ
ಸಿಕ್ಕಿಕೊಂಡಿತೋ ಕತ್ತಲಲ್ಲಿ ಇಕೊ ನಿಶೆಯು ನಕ್ಕಿತಿಲ್ಲಿ.

(ಮಾತು ಮೌನ : ಸೂರ್ಯಪಾನ)

ಅವರು ಮುಂಜಾನೆಯ ನಸುಕು ಮಿಸುಕಾಡುವುದನ್ನು 'ಇರುಳಗಸಿ ಇಳಿದು ನಸುಕು ಮಿಸುಕಲಿದೆ ತುಪ್ಪ ತೇಲುವಂತೆ' ಎಂದು ವಿಶಿಷ್ಟ ಉಪಮೆಯಲ್ಲಿ ಬಣ್ಣಿಸಿದ್ದಾರೆ. ಅನಂತರ ನಸುಕು ಹರಿದಂತೆ ಕತ್ತಲಕೊಳೆ ಕಳೆದುಕೊಂಡು, ತಮವನ್ನು ಹಿಂಜಿ ರವಿ ಕಿರಣವು ನೂಲುವಂತೆ ಹೊಮ್ಮಿ ಬಂದಿತು ಎಂದು ನಸುಕಿನ ಸೊಬಗನ್ನು ನುಡಿಯಲ್ಲಿ ಸೂಕ್ಷ್ಮವಾಗಿ ನೇಯ್ದಿದ್ದಾರೆ.

'ಗಿಡ ಗಂಟೆಯ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು – ಹಕ್ಕಿಗಳಾ ಹಾಡು' ಎಂಬ 'ಬೆಳಗು'

ಕವನದಲ್ಲಿ ಬೌದ್ಧಿಕ ಸೌಂದರ್ಯದಲ್ಲಿ ರಚಿತವಾಗಿರುವ ಈ ನುಡಿಯನ್ನು ಮಾಸ್ತಿಯವರು 'ಬಾಳೆಲ್ಲ ಒಂದು ಎನ್ನುವುದು ತಿಳಿವಿಗೆ ಮಾತ್ರ ಕಂಡಾಗ ಅಲ್ಲ, ಅನುಭವದಿಂದ ಕಂಡಾಗ ಮಾತ್ರ ಈ ಮಾತು ಪ್ರಯತ್ನವಿಲ್ಲದ ಬರುತ್ತದೆ'. ಎಂದು ವಿಮರ್ಶಿಸಿದ್ದಾರೆ.

ಬೇಂದ್ರೆಯವರು ಆ ಅನುಭವದ ಆನಂದದಲ್ಲಿ ಸುಖಿಸುತ್ತ – ಉಷೆಯ ಪಾಠ ಶಾಲೆಯಲ್ಲಿ ಹೂಗಳ ಕಂಪು ಸವಿದು, ಭಾವ ದನಿಗಿಳಿಸಿಕೊಂಡ ಹಕ್ಕಿಗಳು ಬೇಲಿ ಬೇಲಿಯಲ್ಲಿ ಚಿಲಿಪಿಲಿ ಗೈಯ್ಯುತ್ತಿವೆ – ಎಂದು ಸುಗಂಧ ಹಾಗೂ ನಾದರ ಅನುಸಿಂಧಾನದಲ್ಲಿ ಬಣ್ಣಿಸಿದ್ದಾರೆ. ಆ ಮಧುರಗಾನ ಚೇತನಗಳು ಹಾಡುವ ನೆಲೆ – ಮೆತ್ತನೆಯ ಮೃದುವಾದ ಬೆಚ್ಚನೆಯ ಹಿತವಾದ ತಾಯಿ ಪಕ್ಷಿ ಕಟ್ಟಿದ ಗೂಡು. ಅದನ್ನು ಕವಿಯು 'ಕೂಸು ಹಾಸು' ಎಂದು ಅತಿ ಆರ್ದ್ರಾಭಾವದಲ್ಲಿ ಕರೆದಿದ್ದಾರೆ :

ಕೂಸು ಹಾಸಿನಲಿ ಹಕ್ಕಿ ಉಲಿಯುತಿವೆ ಬೇಲಿ ಬೇಲಿಯಲ್ಲಿ ಕುಸುಮ ಸೌಸವಕೆ ಭಾವ ದನಿಗಳಿಸಿ ಉಷೆಯ ಸಾಲೆಯಲ್ಲಿ.

ಹೊಸ ಬೆಳಕಿಗೆ ಹೊಸ ಬದಕೂ

ಬೇಂದ್ರೆಯವರಿಗೆ ಪ್ರತಿ 'ಬೆಳಗು' ಹೊಸದು. ಮನುಷ್ಯನಾದವನು ಪ್ರತಿದಿನ ಹೊಸ ಬದುಕಿಗೆ ತೆರೆದುಕೊಳ್ಳಬೇಕು. ಹಳೆಯ ತರಗನ್ನು ಹೊಸ ಬದುವಿಗೆ ಗೊಬ್ಬರವಾಗಿಸಿ ಹೊಸ ಚಿಗುರಿಗೆ ನೆಲೆಯಾಗಿಸಬೇಕು ಎಂಬ ಆಲೋಚನಾ ಲಹರಿ ಯನ್ನು ಹೀಗೆ ಕಾವ್ಯದಲ್ಲಿ ಪಲ್ಲವಿಸಿದ್ದಾರೆ.

ಹೊಸ ಬೆಳಕಿಗೆ ಹೊಸ ಬದುಕೂ, ಹೊಸ ಹೊಸದೇ
ಹೊಸ ಚಿಗುರಿಗತೆ ನೆಲೆಯಾಗಲಿ ತರಗನು ಬಿಡು ಎಸೆದು.

(ಸಮದಂಡಿಗೆ : ಉತ್ತರಾಯಣ)


ಮೈಮುರಿದೇಳುತ್ತಿದೆ ಭೂಮಿಯ ಬಣ್ಣ

ಸೂರ್ಯೋದಯವು ಭೂಮಿಗೆ ಹಲವು ಬಣ್ಣದ ಓಕುಳಿಯನ್ನೆರಚಿ ಸಕಲ ಜೀವಿಗಳಿಗೆ ಜೀವ ಸಂಚಾರದ ಹೊನಲು ಹೂಡಿ ಬೆಳಗಿಸುತ್ತದೆ. ಆಗ ಭೂಮಿ ಎಚ್ಚರಗೊಂಡಿದ್ದನ್ನು ಬೇಂದ್ರೆಯವರು ಬಣ್ಣದ ಪ್ರತಿಮೆಯಲ್ಲಿ ಹೀಗೆ ಬಣ್ಣಿಸಿದ್ದಾರೆ.

ಮೈಮುಂದೇಳುತ್ತಿದೆ ಭೂಮಿಯ ಬಣ್ಣ
ಕಾಣದೆ ಕಣ್ಣ?
ಹಸಿರಲ್ಲಡಗಿದೆ ನೆಲೆದೆದೆ ಹಸಿರು.

(ಛಂದ - ಬಂದ : ಉತ್ತರಾಯಣ)

*



೧೦

ಅಹನೆ

ಅಹನೆ ಎಂದರೆ ಆಗು. ಆಗು ಪದಕ್ಕೆ ಹುಟ್ಟು, ಸಂಭವಿಸು, ವೃದ್ಧಿ ಹೊಂದು ಎಂಬ ಅರ್ಥಗಳಿವೆ. ಬೇಂದ್ರೆಯವರು ಮೂಡಲ ದಿಕ್ಕಿನಲ್ಲಿ ಸೂರ್ಯ ಹುಟ್ಟಿ, ದಿನದ ಬೆಳಗು ಉಂಟಾಗಿ, ಕ್ಷಣಕ್ಷಣಕ್ಕೂ ವೃದ್ಧಿ ಹೊಂದುವ ಗುಣ ಲಕ್ಷಣಗಳನ್ನು 'ಅಹನೆ' ಎಂದು ಕರೆದಿದ್ದಾರೆ. ಅದು ಮುಂಜಾನೆ.

ಇಂದ್ರ ದಿಗಂತದಲ್ಲಿ ಎಲ್ಲೋ ಬೆಳಕು ಹರಿದು ಗಹಗಹಿಸಿ ಜಗತ್ತಿಗೆ ಅರಿವನ್ನು ಹರಡಿದ್ದನ್ನು ಬೇಂದ್ರೆಯವರು ಉತ್ಸಾಹದಲ್ಲಿ 'ಗಹಗಹಿಸಿತೆಲ್ಲೋ ಸೂರ ದಿಗಂತ'ದಲ್ಲಿ ಎಂದು ಅಭಿವ್ಯಕ್ತಿಸುತ್ತ ಸಂಭ್ರಮಿಸಿದ್ದಾರೆ. ಅದರ ಪ್ರಭಾವ ಈ ಭೂಲೋಕದಲ್ಲಿ ಉಂಟು ಮಾಡುವ ಬಣ್ಣ ಬೆಡಗು, ಜೀವಂತಿಕೆ ಆನಂದ ಕುತೂಹಲ ಭರಿತ ಉತ್ಸುಕತೆಗಳಿಂದ ಖಗಮೃಗ ಹಾಗೂ ಮನುಷ್ಯರ ಮನದ ಭಾವಕ್ಕೆ ದನಿ ಮೂಡುವುದು. ಅದನ್ನು ಕವಿಯು 'ಕುಲುಕಲನೆ ನಗುತ ಕಿಲಿಬಿಲಿಸಿ ಉಲಿದು ಕಲರವವು ಮೂಡಿತಿಲ್ಲ' ಎಂದು ಇಂಪಾದ ಸ್ವರ ಹೊಮ್ಮಿ ಬಂದಿದ್ದನ್ನು 'ಕ'ಕಾರದ ಒಳಪ್ರಾಸಗಳಲ್ಲಿ ಕುಲುಕಾಡಿಸಿದ್ದಾರೆ.

ಪಕ್ಷಿಗಳ ಕಲರವ, ಪಂಚಮ ಸ್ವರದಲ್ಲಿ ಕೂಗುವ ಕೋಗಿಲೆ ಮತ್ತು ಅದಕ್ಕೆ ಪ್ರತಿಸ್ಪಂದಿಯಾಗಿ ಕೊರಳೆತ್ತಿ ಕೂಗುವ ಹುಂಜದ ಜಾಗೃತಿ ಸ್ಥಿತಿಯ ಬೆಡಗನ್ನು ಕವಿ ಚಿತ್ರಿಸಿದ್ದಾರೆ. ಆದರೆ ಈ ಸೋಮಾರಿ ಮನುಷ್ಯ ಇನ್ನೂ ಎದ್ದು ಕ್ರಿಯಾಶೀಲನಾಗಿಲ್ಲ ಎಂಬ ನೋವಿನಲ್ಲಿ ಅವರು 'ಏಳು ಹಗಲಾಗಿ ಭಗ ಸುಡನೇ?' ಎಂದು ಪ್ರಶ್ನಿಸಿದ್ದಾರೆ. ಭಾಸ್ಕರನನ್ನು 'ಭಗ' ಎಂದು ಸಂಬೋಧಿಸಿ ಅದು ಉಂಟು ಮಾಡುವ ಶಾಖವನ್ನು ಧ್ವನಿಸಿದ್ದಾರೆ.

ಕೋಗಿಲದ ಮೊದಲ ಕುಕಿಲೊಂದ ಕೇಳು ಕೂಗುವದು ಕೋಳಿಯೊಡನೆ,
ಬೆಳ್ಳಿ ಕರಗಿ ಬೆಳಗಾಯ್ತು ಏಳು ಹಗಲಾಗಿ ಭಗನು ಸುಡನೆ?

(ಸೂರ್ಯಪಾನ)

ಬೇಂದ್ರೆಯವರು 'ಮಣ್ಣ ಮೈಯ ಮಗು' ರೂಪಕದಲ್ಲಿ ಮುಂಜಾನೆಯಾದಾಗ ಭೂಮಿಯು ಬೆಳಗುತ್ತದೆ; ಬೆಳಕಿನ ಸ್ಪರ್ಶಕ್ಕೆ ಹೂಗಳು ಬಿರಿದು ಕಂಪು ಸೂಸುತ್ತವೆ ಎಂದು ಸಹಜ ನಿಸರ್ಗ ಚಿತ್ರಣ ನೀಡಿದ್ದಾರೆ. ಅನಂತರ ಆ ಭೂಮಂಡಲದ ಸುಗಂಧ ವಾಯುಮಂಡಲಕ್ಕೆ ಪಸರಿಸಿದಾಗ 'ಮಗ ಮಗಿಸಿತಣ್ಣ ಮುಗಿಲು' ಎಂದು 'ಮ' ಕಾರದ ಒಳಪ್ರಾಸದಲ್ಲಿ ಬೆಳಕು ಮತ್ತು ಪರಿಮಳದ ಮಧುರ ಬಾಂಧವ್ಯವನ್ನು ನವಿರಾಗಿ ನೇಯ್ದಿದ್ದಾರೆ.

ಕವಿಯು ಸೊಕ್ಕು ಯೌವನದ ರಾತ್ರಿ ರಾಣಿಯು ಆಯಾಸದಿಂದ ಮುಸುಗುಡುತ್ತ ಮುಸುಕು ಎಳೆದುಕೊಳ್ಳಲು-ನಸುಕಿನಲ್ಲಿ ಸುರ್ಯೋದಯವಾಗಿ ಹಗಲಾಯಿತು ಎಂದು ಪ್ರಕೃತಿಯ ಲೀಲಾವಿನೋದವನ್ನು ಸವಿಸವಿದು ಬಣ್ಣಿಸಿದ್ದಾರೆ. ಮಣ್ಣ ಮೈಯ ಮಜು ಮೂಡಿದಾಗ ಮಗಮಗಿಸಿತಣ್ಣ ಮುಗಿಲು ಸೊಕ್ಕು ಜವ್ವನದ ರಾತ್ರಿ ರಾಣಿ ಮುಸುಗುಡಿಸೆ ಆಯ್ತು ಹಗಲು.

*



೧೧

'ವಿಳುಕ್' ಐತಿ : ಬೆಳಕು ಇದೆ : ಇದೇ ಬೆಳಕು

ಜಗತ್ತಿನ ಜನಪದರಲ್ಲಿ ಗೀತಾತ್ಮಕವಾಗಿ ಹಾಡಿಕೊಂಡ ಹಾಡು ಜಾನಪದವಾಗಿದೆ. ಅದು ಚಿಕ್ಕ ಮಕ್ಕಳ ಪ್ರಾಸದ ಪದ ಜೋಡಣೆಯಿಂದ ಪ್ರಾರಂಭವಾಗಿ ಪದ, ಮಾತು, ಬದುಕನ್ನು ಅರ್ಥಮಾಡಿಕೊಳ್ಳುತ್ತ, ಅರ್ಥಪೂರ್ಣ ಕಾವ್ಯವಾಗಿ ಹೊಮ್ಮಿರುವುದು ಅನುರೂಪವಾದ, ಬೀಜವು ವಟವೃಕ್ಷವಾದಂತಹ ಜೀವಂತ ವಿಕಾಸವಾಗಿದೆ. ಕನ್ನಡ ನುಡಿಯ ಮಕ್ಕಳ ಹಾಡನ್ನು 'ಶಿಶು ಪ್ರಾಸ'ಗಳು ಎಂದು ಕರೆದಿದ್ದಾರೆ. ಅಮೇರಿಕಾದಲ್ಲಿ ಈ ಶಿಶು ಪ್ರಾಸವನ್ನು 'Mother goose' ಎನ್ನುವರು. ಅಮೇರಿಕಕ್ಕೆ ಇಂಗ್ಲೇಂಡಿನ ಮೂಲಕ ಬಂದ ಈ ಪದ ಈಗ ಇಂಗ್ಲೆಂಡಿನಲ್ಲಿ ತನ್ನ ಮೂಲ ಪದವನ್ನು ಬಿಟ್ಟು Nursery Rhymes ಆಗಿದೆ.

ಈ ಹಿನ್ನೆಲೆಯಲ್ಲಿ ಜಗತ್ತಿನ ಎಲ್ಲ ಮಕ್ಕಳಂತೆ ಕನ್ನಡದ ಮಕ್ಕಳು ತಮ್ಮ ನುಡಿಯಲ್ಲಿ ಗುನುಗಿಕೊಂಡ ಕೆಲವೊಮ್ಮೆ ಅರ್ಥರಹಿತವಾಗಿ, ಕೆಲವೊಮ್ಮೆ ಅರ್ಥಪೂರ್ಣವಾಗಿ ಹಾಡಿಕೊಂಡದ್ದರಲ್ಲಿ ಶಿಶು ನಾಲಗೆ, ಶಿಶು ಕಂಠ, ಶಿಶು ಮನಸ್ಸು, ಶಿಶು ಭವ, ಶಿಶು ಚೇತನವಿದೆ.

ಬೇಂದ್ರೆಯವರ – 'ವಿಳುಕ್' ಐತಿ : ಬೆಳಕು ಇದೆ: ಇದೇ ಬೆಳಕು ಕವನ ಮಕ್ಕಳನ್ನು ಚಮತ್ಕಾರದ ಭಾಷೆಯ ಬೆಡಗಿನಲ್ಲಿ ಸೆಳೆದು ಕುತೂಹಲ ಹುಟ್ಟಿಸುವ ವಿಶೇಷ ಶೈಲಿಯಿಂದ ಕೂಡಿದೆ. ಒಂದು ಪದವನ್ನು ನಾಲಿಗೆಯಲ್ಲಿ ಲಯಬದ್ಧವಾಗಿ ಗುನುಗುನಿಸುತ್ತಿರುವಾಗ, ಅದೇ ತರಹದ ಇನ್ನೊಂದು ಪದಕ್ಕೆ ನೆಗೆದು ಅದರ ಅರ್ಥ ತಿಳಿದು ತಮಾಸೆಯಾಗಿ ಪದಗಳೊಡನೆ ಆಡುವ ಆಟದಂತಿದೆ. ಆಟದಲ್ಲಿ ಪದ ತನ್ನ ಅರ್ಥವನ್ನು ಮನನ ಮಾಡಿಸುವಷ್ಟರಲ್ಲಿ, ಅದೇ ಉಚ್ಚಾರಣೆಯ ನಾದಲಯದಲ್ಲಿರುವ ಇನ್ನೊಮದು ಪದ ಕೇಳಿ ಅದರತ್ತ ಓಡುವ ಮನದ ಆಟ ವಿಶಿಷ್ಟವಾಗಿದೆ.

ಚಂ ಚಂ ಚಮತ್ತು ಚಂ ಚಂ ಚಮತ್ತು
ಚಂಚಲ ಅನ್ನಬ್ಯಾಡಾ
ನಿಶ್ಚಲನಾಗಿ ನೋಡು
ಮಿಂಚಿನ ಗೊಂಚಲದಾಚಿ
'ವಿಳುಕ್' ಐತಿ. (ಇದು ನಭೋವಾಣಿ)

'ವಿಳುಕ್' ಎಂದರೆ ಬೆಳಕು. ಅದನ್ನು ಕಾಣುವ ಮಗುವಿನ ಕಣ್ಣು ಪಿಳುಕ್ ಪಿಳುಕ್ ಪಿಳುಕಿಸಿ ನೋಡುತ್ತದೆ. ಹಾಗೆ ನೋಡುವಾಗ 'ಪಿಳುಕ್'ನಂತಹ ಇನ್ನೊಂದು ಪದ 'ಹಿಳುಕ್' ಕೇಳಿ ಬರುತ್ತದೆ. ಅದು ಗರಿಗಳಿಂದ ಕೂಡಿದ ಭಾಗ, ಪುಂಖ. ಅದರಲ್ಲಿ ಬಗೆ ಬಗೆಯ ಬಣ್ಣ ಐತಿ ಎಂದು ಹರ್ಷಪಡುತ್ತದೆ.

'ಗರಿ' ಎಂದ ಕೂಡಲೆ ಮುಂದಿನ ನುಡಿಯಲ್ಲಿ ನವಿಲಿನ ಮೇಲೆ ಏರಿ ಕುಳಿತು ಬರುವ ಸರಸ್ವತಿ ಗೋಚರಿಸುತ್ತಾಳೆ. ಬೇಂದ್ರೆಯವರು ಸರಸ್ವತಿಯನ್ನು ಮಕ್ಕಳ ನಾಲಗೆ ಯಲ್ಲಿ ಹೊರಳಿ ಹೊಮ್ಮಿ ಬರುವಂತೆ 'ಸರಸೋತಿ' ಎಂದು ಕರೆದು ಅದರಲ್ಲಿ 'ರಸ ಐತಿ' ಎಂದು ಹೇಳಿ ಅರಿವಿನ ರಸದ ಬಗ್ಗೆ, ಅಧ್ಯಯನ ಆನಂದದ ರುಚಿಯ ಬಗ್ಗೆ ತಿಳಿಸುತ್ತಾರೆ.

ಮಕ್ಕಳಿಗೆ ವಿದ್ಯೆಯ ಪ್ರಾಮುಖ್ಯತೆ ತಿಳಿಸುವ ಧಾಟಿಯಲ್ಲಿ 'ಸೋತಿ ಅಂದ್ರ ನೀ ಗೋತಿ ಹೊಡೀತಿ' ಎಂದು ಹೇಳಿ ನಗಿಸುತ್ತಾರೆ.

'ಈ ಸಣ್ಣನ ಹಾದಿ ಸಣ್ಣೈತಿ' ಎಂದು ಶಿವನ ಸರಳ ನೇರ ಮಾರ್ಗ ತಿಳಿಸು ತ್ತಾರೆ. 'ಸಣ್ಣ'ಕ್ಕೆ ಮುಂದಿನ ಪ್ರಾಸಬದ್ಧ ಪದ 'ಕೃಷ್ಣ'ನ ಪ್ರಸ್ತಾಪ ತರುತ್ತಾರೆ. 'ಕೃಷ್ಣನ ಕಣ್ಣಿನ್ಯಾಗ ತುರು ಐತಿ' ಎಂದು ಗೋಪಾಲಕನ ಚಿತ್ರ ಕಣ್ಮುಂದೆ ಬಿಡಿಸಿಡುತ್ತಾರೆ. 'ಕೃಷ್ಣ' ಬಂದಾಗ ಅವನ ಶಿಷ್ಯ ಅರ್ಜುನ ಹಾಜರಾಗುತ್ತಾನೆ. ಅವನು ಕೃಷ್ಣನನ್ನು ಅನುಸರಿಸಿ ಪೋಷಣೆಗೆ ಒಳಗಾಗುವ ಸಾಲು – 'ಅರ್ಜುನನ ಕಣ್ಣಿನ್ಯಾಗ ಕರು ಐತಿ".

ಇದು ಹೀಗೆ ಪ್ರಶ್ನೆ ಉತ್ತರಗಳ ಆಟದ ಪ್ರಾಸ ನಾದ ಲಯಗಳ ಮಾತಿನ ಬೆಡಗಿನಲ್ಲಿ ಸಾಗುತ್ತದೆ.

ಪ್ರಶ್ನೀಮ್ಯಾಲೆ ಪ್ರಶ್ನಿ
ನಿಲುವಿನ ಮ್ಯಾಲೆ ನಿಲುವು
ನೆಲವಿನೊಳಗsಮೊಸರೂ ಬೆಣ್ಣೈತಿ

(ನೆಲವು (ಹು) : ಪಾತ್ರೆಗಳನ್ನು ಇಡುವುದಕ್ಕೆ ತೊಲೆಯಿಂದ ಇಳಿಬಿಡುವ ಹಗ್ಗದ ಜಾಳಿಗೆ)

ಕೃಷ್ಣನು ನೆಲವಿನಿಂದ ಬೆಣ್ಣೆ ಕದಿಯಲು ಸಹಾಯ ಮಾಡುವವನು 'ಪೇಂದ್ಯಾ'. ಅದನ್ನು ಕದಿಯುವ ಬಾಲ ಕಸರತ್ತಿನ ಚಿತ್ರಣ ಕವಿ ನೀಡಿ ಅರ್ಥರಹಿತವಾಗಿ ಕಂಡರೂ ಬಾಲ ಭಾವಾರ್ಥ ಪೂರಿತ ಪದ ಜಾಲ ಬೆಳಸಿ ಸಾಗುತ್ತಾರೆ. ಹೊಳಿ,

ಮಳಿ, ಮೊಳೀ, ಮೊಲೀ, ಮಲೆ ಎಂದು ಮಲೆಯ ತಲೆಯ ಮೇಲಿರುವ ಮಲ್ಲಿನಾಥನ ಗುಡಿ ತೋರಿಸುತ್ತಾರೆ.

ಮಲೆಯ ತಲೀಮ್ಯಾಲೆ
ಮಲ್ಲಿನಾಥನ ಗುಡಿ
ತಿರುಮಲೀ ತಲಿಮ್ಯಾಲೆ ಮುಡಿ ಐತಿ

'ಮುಡಿ' ಎಂದರೆ ಶ್ರೀನಿವಾಸ ಧರಿಸಿರುವ ಕಿರೀಟ. ಆ ಪದ ಬಂದಾಗ ಇಮ್ಮಡಿ ಮುಮ್ಮಡಿ ನಾಲ್ಮಡಿ ಐಮಡಿ ಏಳ್ಮಡಿ ಪದಗಳ ಮೋಡಿ ಹರಿಸುತ್ತಾರೆ. ಅಡಿ ಅಡಿ ಪದ ಕಿವಿಗೆ ಬಿದ್ದಾಗ ಅಡಿ ಅರ್ಥಾತ್ ಪಾದ ಮೇಲೆ ಮೇಲಾಗಿ ಕಂಡು ತಲೆ ಕೆಳಗಾಗಿ ಮಕ್ಕಳು ತಮಾಷೆಯಿಂದ ನಕ್ಕು ನಲಿಯುವಂತೆ 'ತಲಿ ಕೆಳಗೆ ಮ್ಯಾಲೆ ಕಾಲೈತಿ!' ಎಂದು ಹಾಸ್ಯಭಾವ ಹೊಮ್ಮಿಸುತ್ತಾರೆ!

ಇದೊಂದು ಚಮತ್ಕಾರ ಪೂರಿತ ಕವನ. ಆದುದರಿಂದ ಕವಿ ಶ್ಲೇಷಾರ್ಥದಲ್ಲಿ 'ಚಮತ್ಕಾರದಾಗ ಬೇರೈತಿ' ಎಂದು ಕುತೂಹಲ ಹುಟ್ಟಿಸಿ ಮುಕ್ತಾಯಗೊಳಿಸಿದ್ದಾರೆ. 'ಬೇರೈತಿ' ಪದದಲ್ಲಿ ಬೇರೆ ಬೇರೆ ಅರ್ಥವಿರುವುದನ್ನು ಒಂದು ಮುಖದಲ್ಲಿ, ಚಮತ್ಕಾರದ ಬೇರು ಇರುವುದನ್ನು ಇನ್ನೊಂದು ಮುಖದಲ್ಲಿ ಗೋಚರಿಸುವಂತೆ ಮಾಡಿ ಮಕ್ಕಳಲ್ಲಿ ಭಾಷಾ ಕುತೂಹಲ, ಕಾವ್ಯಾಸಕ್ತಿ ಉಂಟಾಗುವಂತೆ ಮಾಡಿದ್ದಾನೆ.

ಪ್ರತಿ ಕಿರಣಕು ರವಿಯೆ ಆದಿ

ಬೇಂದ್ರೆಯವರು ಮಕ್ಕಳ ಮನಸ್ಸನ್ನು ರೂಪಿಸುವಾಗ, ಅವರ ಆಕರ್ಷಣೆಯ ಕೇಂದ್ರವಾದ ಬೆಳಕು ನಾದ ಇವುಗಳ ಮೂಲ ನೆಲೆಯಾದ ರವಿ ಮತ್ತು ಶ್ರುತಿಯನ್ನು ಸರಳ ಮಾತಿನಲ್ಲಿ ತಿಳಿ ಹೇಳಿದ್ದಾರೆ. ಅದರ ಅರಿವಿನಲ್ಲಿ ಪ್ರತಿಯೊಬ್ಬರು ತಾವು ಆಯ್ಕೆ ಮಾಡಿಕೊಳ್ಳುವ ಜೀವನದ ಹಾದಿಗೆ ಸಜ್ಜುಗೊಳುವಂತೆ – ನವಿರಾದ ಪ್ರಾಸಗಳ ಹೊಂದಾಣಿಕೆಯ ಗೀತಭಾವದಲ್ಲಿ ನಿಜಸಂಗತಿಯನ್ನು ಹೀಗೆ ಮನನವಾಗಿಸಿದ್ದಾರೆ.

ಅವರವರಿಗೆ ಅವರ ಹಾದಿ
ಪ್ರತಿ ಕಿರಣಕು ರವಿಯೆ ಆದಿ
ಸಪ್ತಸ್ವರಕು ಶ್ರುತಿ ಸನಾದಿ
ಸಂಗತಿ ಗೀತ. **(ನವಯುಗಾರಂಭ : ಸೂರ್ಯಪಾನ)**

ಬೇಂದ್ರೆಯವರು ಉತ್ತರ ಕರ್ನಾಟಕದ ಒಗಟನ್ನು ಒಂದು ಮಕ್ಕಳ ಕವನ 'ಅವ್ವನ್ ಸೀರಿ'ಯಾಗಿ ರಚಿಸಿದ್ದಾರೆ.

ಅವ್ವನ ಸೀರಿ ಮಡಿಚಲಾರೆ
ಅಪ್ಪನ ರೊಕ್ಕ ಎಣಿಸಲಾರೆ
ಎಂಥ ಪ್ರಕಾಶ
ತುಂಬಿತಾಕಾಶಾ **(ಸಂಚಯ)**



೧೨

ದಿಕ್ಕರಳಿ ಬೆಳಗಾಗಿ

ಬೇಂದ್ರೆಯವರು 'ಸುಖ-ದುಃಖ' ಕವನದಲ್ಲಿ ನಸುಕಿನಲ್ಲಿ ಉಷಃಕಾಂತಿಯು ಉಂಟು ಮಾಡುವ ಪರಿಣಾಮವನ್ನು ಮುರು ನುಡಿಗಳಲ್ಲಿ ಕಡೆದಿಟ್ಟಿದ್ದಾರೆ. ಅದರಲ್ಲಿ ಮಕ್ಕಳಿಗೆ ಮನನ ಮಾಡುವ ರೀತಿಯಲ್ಲಿ ಚುಮು ಚುಮು ನಸುಕಿನ ಆಹ್ಲಾದದಲ್ಲಿ ಮನುಷ್ಯ ಜೀವನದ ಸುಖ-ದುಃಖಗಳನ್ನು ವಿಶ್ಲೇಷಿಸಿದ್ದಾರೆ. ಕವನದ ನಾದ ಲಯಕ್ಕೆ ಮಕ್ಕಳು ತಮ್ಮನ್ನು ತಾವು ಮರೆತು ಹಾಡುತ್ತ, ತಮ್ಮ ನಕ್ಕ ನಗೆಯಲ್ಲಿ ಸುಖಕ್ಕೆ ಅಳಿವಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಹೋಗುತ್ತಾರೆ. ಅವರು ತಾವು ಬೆಳೆಯುತ್ತ ಈ ಕವನ ತಮಗೆ ತಿಳಿ ಹೇಳಿದ ಜೀವನ ತತ್ವಕ್ಕೆ ಬೆರಗಾಗಿ ಆತ್ಮಶೋಧಕ್ಕೆ ಒಳಗಾಗುತ್ತಾರೆ! ಹಿಂತಿರುಗಿ ನೋಡಿದಾಗ ಈ ಕವನದ ಪದ ಪದಲ್ಲಿ ಅಡಗಿ ಪ್ರಕಾಶಗೊಂಡ ಸತ್ಯಕ್ಕೆ ಮನಸ್ಸು ಹ್ಞೂ ಗೊಡುತ್ತದೆ.

ಚುಮು ಚುಮು ನಸುಕಿನಲಿ
ಹೂವುಗಳರಳುವವು
ಅಂದವ ತೋರಿ ಸುಗಂಧವ ಬೀರಿ
ಸಂಜೆಗೆ ತೆರಳುವವು **(ಉಯ್ಯಾಲೆ)**

ಅರೆ, ನಾವು ಚಿಕ್ಕವರಿದ್ದಾಗ ಉಷಃಕಾಲದ ಚುಮು ಚುಮು ನಸುಕಿನಲ್ಲಿ ಹೂವುಗಳು ಅರಳಿದ್ದು ಕಂಡಿದ್ದೆವು. ಇಡೀ ದಿನ ಸೌಂದರ್ಯದಿಂದ ಕಂಗೊಳಿಸಿ. ಕಂಪನ್ನು ಬೀರಿ ಸಂಜೆಗೆ ಬಾಡಿ ಹೋದಾಗ ಅವು ತೆರಳಿದ ಅಬ್ಬರ ರಹಿತ ಶಾಂತಕ್ರಿಯೆಗೆ ಮೌನ ಸಾಕ್ಷಿಯಾಗಿದ್ದೆವು. ಆದರೆ ಒಂದೇ ಹಗಲು ಅರ್ಥಪೂರ್ಣ ವಾಗಿ ಬದುಕಿನ ಆಪುಟ್ಟ ಸುಮಧುರ ಹೂಗಳಂತೆ ನಾವು - ನಮ್ಮ ಹತ್ತಾರು ವರ್ಷದ ಜೀವಿತದಲ್ಲಿ ಇತರರಿಗೆ ನಮ್ಮ ಜೀವನದಲ್ಲಿ ಅಂದವಾಗಿ ಕಂಡೆವೆ? ಒಳಿತಿನ ಉಪಯುಕ್ತ ಸುಗಂಧವಾಗಿ ಲೋಕದಲ್ಲಿ ಹರಿದಾಡಿದೆವೆ? ಎಂಬ ಪ್ರಶ್ನೆಗೆ ಮೂಕ ಮೌನರಾಗುತ್ತೇವೆ.

ಓಹ್, ಈ ಪಂಚಭೂತಗಳಲ್ಲಿಯ ಜೀವಧಾತು 'ಗಾಳಿಯ ಗತಿಯಲ್ಲಿ ದುಃಖದ ಸುಳಿವಿಲ್ಲ'. ಹೌದು, ಅದರಂತೆಯೆ ಇರುವ ಇನ್ನೊಂದು ಸತ್ಯ 'ಚಿಕ್ಕ ಮಕ್ಕಳೂ ನಕ್ಕ ನಡಯಲೂ ಸುಖಕೂ ಅಳಿವಿಲ್ಲ.' ಆ ನಾಶವಾಗದ ಸುಖಕ್ಕೆ, ದುಃಖ ರಹಿತವಾದ ಬಾಳಿಗೆ ನಮ್ಮ ಸತ್ಯ ಸಹಜ ನಡೆಯೊಂದೆ ಸಾಕಲ್ಲವೆ ಎಂಬ ಅರಿವಿಗೆ ಒಳಗಾಗುತ್ತೇವೆ. 'ಸುಖ-ದುಃಖ' ಶೀರ್ಷಿಕೆಯ ಈ ಕವನ ಮಕ್ಕಳ ನಾಲಿಗೆಯಲ್ಲಿ ನಲಿದಾಡುತ್ತ ಮನದ ಮಾಮರದ ಹಣ್ಣಿನ ಪಕ್ವತೆಗೆ ಅಣಿಗೊಳಿಸುವ ಶ್ರೇಷ್ಠ ಗುಣ ವನ್ನು ಹೊಂದಿದೆ.

ಬೆಳಕು ತಿರುಗದs ಬರತsದ

ಮಕ್ಕಳು ಹಗಲು ಇರುಳು, ಎಚ್ಚರ - ನಿದ್ದೆ ಇವುಗಳ ಬಗ್ಗೆ ಕುತೂಹಲ ಗೊಂಡಿರುತ್ತಾರೆ. ಅವರು ದಿಕ್ಕು ದಿಕ್ಕಿಗೆ ಕಣ್ಣರಳಿಸಿ ಸೋಜಿಗಕ್ಕೊಳಗಾಗುತ್ತಾರೆ. ಅವರ ಆ ಬೆರಗಿಗೆ ನುಡಿ ಹೊಮ್ಮಿಸಿದಂತೆ ಬೇಂದ್ರೆ ತ್ರಿಪದಿ ರಚಿಸಿದಾರೆ. ಅದು ಮಕ್ಕಳ ನಾಲಗೆಯಲ್ಲಿ ನಲಿದಾಡಿ, ಆ ಮಕ್ಕಳು ಬೆಳೆ ಬೆಳೆಯುತ್ತ ತನ್ನ ಅರ್ಥದೆತ್ತರವನ್ನು ಶ್ರೀ ಶೈಲದಂತೆ ಉನ್ನತ ನೆಲೆಯಲ್ಲಿ ತಿಳಿಸುತ್ತ, ಅವರ ಮನದಲ್ಲಿ ಅರಳಿ ಆಹ್ಲಾದ ವನ್ನುಂಟು ಮಾಡುತ್ತದೆ.


ದಿಕ್ಕರಳಿ ಬೆಳಗಾಗಿ । ನೆರಳರಳಿ ಇರುಳಾಗಿ
ನಿದ್ದಿ ಎಚ್ಚರಕು ತಿರುಳಾಗಿ, ಶ್ರೀ ಶೈಲಾ
ತಿರುಮಲೆಗೂ ಪಂಜು ಬಾನರಳಿ ॥ **(ನಾಕುತಂತಿ)**

ಬೇಂದ್ರೆಯವರು ಮಕ್ಕಳಲ್ಲಿ ಕುತೂಹಲ ಉಂಟಾಗುವಂತೆ ಖಗೋಳ ವಿಜ್ಞಾನ ದಲ್ಲಿಯ ಭೂಮಿ ಮತ್ತು ಸೂರ್ಯನ ಬಾಂಧವ್ಯ ವನ್ನು ನಾದದೊಡಗೂಡಿದ ಪ್ರಾಸ ದಲ್ಲಿ ಅಭಿವ್ಯಕ್ತಿಸಿದ್ದಾರೆ.:

ಭೂಮಿ ತಿರುಗತಾ ಇರತsದ
ಬೆಳಕು ತಿರುಗದs ಬರತsದ
(ಚತುರೋಕ್ತಿ ಮತ್ತು ಇತರ ಕವನಗಳು)

ಅವರು ಭೂಮಿ ಸೂರ್ಯನ ಸುತ್ತ ತಿರುಗುವುದನ್ನು ಹಗಲು ಬೆಳಕಾಗುವ ಬಗೆಯನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಕಾವ್ಯಾಭಾಷೆಯಲ್ಲಿ ಮನನ ಮಾಡಿಸಿದ್ದಾರೆ. ಅದರ ಜೊತೆಗೆ ಎಚ್ಚರದಲ್ಲಿ ದುಡಿದು ನಿದ್ದೆಯನ್ನು ಪಡೆಯುವ ಸುಖಭಾವವನ್ನು ಮಕ್ಕಳ ಅರಿವಿಗೆ ಹೀಗೆ ತಂದಿದ್ದಾರೆ.

ಭೂಮಿತಾಯಿ ನಡೆಯಿಸಿಹಳು ಸೂರ್ಯನಾ ಪ್ರದಕ್ಷಿಣೆ
ಅವಳ ತಾಪದಲ್ಲೆ ಇಹುದು ಅವಳ ತಪದ ರಕ್ಷಣೆ.
ಅವಳ ನೆರಳ ಬೆನ್ನಟ್ಟಿ ಅವಳಿಗಿರುವಳ ತರುತಿದೆ
ಎಚ್ಚರದಾ ದುಡಿಮೆಯಲ್ಲಿ ದಣಿದು ನಿದ್ದೆ ಬರುತಿದೆ. **(ಉತ್ತರಾಯಣ)**



೧೩

ಸೂರ್ಯನ ಹೋಳಿ

ಬೇಂದ್ರೆಯವರು 'ಸೂರ್ಯನ ಹೊಳಿ' ಕವಿತೆಯಲ್ಲಿ ಗೆಳೆಯನನ್ನು ಸೂರ್ಯನ ಬೆಳಕಿನ ನದಿಯಲ್ಲಿ ಮಿಂದು ಮೈ ತೊಳೆದುಕೊಳ್ಳಲು ಆಹ್ವಾನಿಸಿದ್ದಾರೆ. ಅದರ ಹೊಳೆಯುವ ವಜ್ರ (ಹೀರಕ) ಕಾಂತಿಯಲ್ಲಿ ಮುಳುಗಿ ಹೊಸ ಪ್ರಕಾಶವನ್ನು ಹೊಂದಲು ಕರೆಕೊಟ್ಟಿದ್ದಾರೆ. ಅದು ಮನದ ಭ್ರಾಂತಿಯ ಕತ್ತಲನ್ನು ದೂರಕ್ಕೆ ಹರಿಸಿ, ಚಿರಶಾಂತಿ ನೆಲೆಸುವಂತೆ ಮಾಡುತ್ತದೆ. ಅದನ್ನು ಪಡೆದು ಸಂಭ್ರಮಿಸಲು ಬಾ, ಸುಮ್ಮನೆ ಏಕೆ ನಿಂತಿರುವೆ, ಈ ಬೆಳಕಿನ ಜ್ಞಾನದ ಹೊಳೆಯಲ್ಲಿ ಮುಳುಗೇಳು ಎಂದು ಆಮಂತ್ರಣ ನೀಡಿದ್ದಾರೆ.

ಬೆಳಕಿನ ಚಿಂತನಾ ಲಹರಿಯನ್ನು ತ್ರಿಪದಿಗಳಲ್ಲಿ ಹಿಡಿದಿಟ್ಟಿದ್ದಾರೆ. ಮೊದಲಿನದು ಪಲ್ಲವಿಯಾಗಿ ಮಿಕ್ಕವು ಅದರ ವಿವಿಧ ಲಕ್ಷಣವನ್ನು ಚಿತ್ರಿಸಿವೆ.

ರುಚಿ ನೋಡು ನೀಲದೀ ನೀರು

ಅರುಣದ ಅರ್ಥ ಕೆಂಪು ಬಣ್ಣ, ಕಿರಣ. ಸೂರ್ಯನ ಸಾರಥಿ ಅರುಣ. ಅವನಿಗೆ ಕಾಲುಗಳಿಲ್ಲ. ಅವನು ಸೂರ್ಯನ ಭಕ್ತ. ಶರಣನಾಗಿ ಸೂರ್ಯನ ತೇರನ್ನು ಪ್ರತಿ ದಿನ ಹೊಡೆಯುತ್ತಾನೆ. ಅವನು ಹೆದರುವ ಸ್ವಭಾವದವನಲ್ಲ, ಧೈರ್ಯವಂತ. ಅವನು ಆಗಸದಿಂದ ಭೂಮಿಗೆ ರಥ ನಡೆಸುವ ಹಾದಿ ತುಂಬಾ ಸುಗಮವಾದುದು. ಅಲ್ಲಿ ಏರು ತಗ್ಗು ಯಾವುದೂ ಇಲ್ಲ.

ಅರುಣ ಹೊಡೆಯುವ ಸೂರ್ಯನ ರಥದ ಪ್ರಕಾಶ ಬರಿ ಕಣ್ಣಿಗೆ ಕಾಣಿಸುವುದಷ್ಟೆ ಅಲ್ಲ, ಅದು ಹರಿದು ಬರುವ ಹಾದಿಯ ನೀಲ ಗಗನದ ನೀರು ರುಚಿಯಿಂದ ಕೂಡಿದೆ ಎಂದು ಬೇಂದ್ರೆ ಹೇಳಿದ್ದಾರೆ! ರಸನೇಂದ್ರಿಯ ಜಿಹ್ವೆಯಿಂದ ಅದನ್ನು ಸವಿದು ನೋಡಿ ಎಂದು ಆಹ್ವಾನಿಸಿದ್ದಾರೆ – 'ರುಚಿ ನೋಡು ನೀಲದೀ ನೀರು'.

ಹೊಳೆಹೊಳೆವ ರಶ್ಮಿಯ ಆಗಸದ ನೀಲ ನೀರನ್ನು ಸವಿದು ರುಚಿ ನೋಡಿ ಎಂದು ಜಗದ ಜನರಿಗೆ ಆಮಂತ್ರಣ ನೀಡಿದ ಪ್ರಥಮ ಕವಿ ಬೇಂದ್ರೆ.

ಚಿಗತ್ತದ ನಸುಕಿನಾ ಚಿಗುರು

ಬೇಂದ್ರೆಯವರು ನಸುಕನ್ನು ಸುಕ್ಷ್ಮಾತಿಸೂಕ್ಷ್ಮವಾಗಿ ಅವಲೋಕಿಸುತ್ತ ಅದು ಮೂಡಿ ಬಂದಿರುವ ರೀತಿಯನ್ನು 'ಚಿಗತsದ ನಸುಕಿನಾ ಚಿಗುರು' ಎಂಬ ರೂಪಕದಲ್ಲಿ ವರ್ಣಿಸಿರುವುದು ನವನವೀನವಾಗಿದೆ. ಮುಂಜಾನೆ ಬಣ್ಣನೆಯ ವಿಶ್ವಸಾಹಿತ್ಯಕ್ಕೆ ಗರಿ ಮೂಡಿಸಿದ ಕಲ್ಪನಾ ಸೌಂದರ್ಯ ಇದಾಗಿದೆ.

ನಸುಕು ಚಿಗುರಿದಾಗಿನ ನಿಸರ್ಗ ಉಲ್ಲಾಸದಲ್ಲಿ ಗಿಡಮರಗಳ ಹೂವುಗಳು ಅರಳುತ್ತವೆ. ಅವು ಹಗುರಾಗಿ ಹೊತ್ತು ಗಂಧ ಅತಿಶಯವಾಗಿ ವ್ಯಾಪಿಸಿ ಇಡೀ ವಾತಾವರಣಕ್ಕೆ ಪರಿಮಳವನ್ನು ಪಸರಿಸಿ ಬಿಡುತ್ತವೆ. ಗಾಳಿಯಲ್ಲಿ ಪಾದ ಊರಿ ಕಿರಣ ಬರುತ್ತದೆ. ರವಿ ರಶ್ಮಿ ಗಾಳಿಯಲ್ಲಿ ಹೆಜ್ಜೆ ಹಾಕುತ್ತ ಸರಿದು ಬರುವುದನ್ನು ಕವಿ 'ಕೇಳಿಸ್ತಾವ ಯಾರವೀ ಗೆಜ್ಜಿ' ಎಂದು ಸಹೃದಯನನ್ನು ಕೇಳಿದ್ದಾರೆ. ಬೆಳಕಿನ ಕಿರಣವನ್ನು ವ್ಯಕ್ತಿಯಾಗಿ ಪರಿಭಾವಿಸಿ ಚಿತ್ರಿಸಿದ್ದಾರೆ.

ಕಂಪಿನ ಗಾಳಿಯೊಂದಿಗೆ ಬಂದ ಕಿರಣ ಈ ಲೋಕದ ಮನುಷ್ಯರ, ಪ್ರಾಣಿಪಕ್ಷಿಗಳ ನಿದ್ದೆಯನ್ನು ಜಜ್ಜಿ ಎಚ್ಚರಗೊಳಿಸಿ ಕುಣಿಯುತ್ತದೆ! ಇಡೀ ಪ್ರಕೃತಿಯ ಉಷಃಕಾಲದ ಒಂದು ಮನೋಹರ ಜೀವನ ಜಾಲದ ಜಾಗೃತ ಬಣ್ಣನೆ ಬೇಂದರೆಯವರ ಕಾವ್ಯದಲ್ಲಿ ಮೈವೆತ್ತು ಕುಣಿಸಿದೆ. ಇದು ನಿಸರ್ಗವನ್ನು ಅಖಂಡವಾಗಿ ಅನುಭವಿಸಿದ ಕವಿಯ ಬೌದ್ಧಿಕ ಸೌಂದರ್ಯ ಸೌಂದರ್ಯ ಕಾವ್ಯ.

ಚಿಗತsದ ನಸುಕಿನಾ ಚಿಗುರು,
ಘಮಘಮ ಅಗುರು
ಗಂಧದ ತಿಗುರು
ಅರಳ್ಯsದ ಹೊತ್ತ ಹೂ ಹಗುರು
ಕೇಳಿಸ್ತಾವ ಯಾರವೀ ಗೆಜ್ಜೆ
ಗಾಳಿಯೊಳು ಹೆಜ್ಜೆ, ನಿದ್ದಿಯs ಜಜ್ಜಿ
ಕುಣಿತಾವ ಎಚ್ಚರಾ ಉಜ್ಜಿ **(ಹಾಡು-ಪಾಡು)**

ರಾತ್ರಿಯ ಮಬ್ಬನ್ನು ಕೆದರಿ ಅರುಣನ ಏಳು ಕುದುರೆಗಳು ಓಡುತ್ತಿವೆ. ಆ ಓಟದ ಮಿಂಚು ರಶ್ಮಿಯಲ್ಲಿ ಏಳು ಬಣ್ಣಗಳು VIBGYOR – ನೇರಿಳೆ, ಇಂಡಿಗೊ, ನೀಲಿ, ಹಸುರು, ಹಳದಿ, ಕಿತ್ತಳೆ, ಕೆಂಪು ಮೂಡಿ ಕಣ್ಣಿಗೆ ಬೆಳಕು ತುಂಬಿವೆ. ಅದು ಬಯಲೆಲ್ಲ ಹರಡಿ ಎಲ್ಲವನ್ನೂ ಬೆಳಗಿಸಿ ಬೆಳಗುವುದನ್ನು ಕಣ್ಣು ಅಚ್ಚರಿಯಿಂದ ನೋಡುತ್ತಿದೆ.

ಆ ಸುಸಿಲು ಬೆಳೆಯುತ್ತ ಬಿಸಿಲು ಚುಮು ಚುಮು ಎಂದು ಚಿಮ್ಮಿ ಮೈಗೆ ತಗುಲಿದಾಗ ಜುಮ್ ಜುಮ್ ಭಾವ ಭೇರಿ ಹೊಡೆದಂತೆ ಕ್ರಿಯಾಶೀಲತೆಗೆ ಅಣಿಗೊಳಿಸುತ್ತದೆ. ಓಹ್ ಗೆಳೆಯ, ಇಂತಹ ಸೂರ್ಯನ ಹೊಳೆಯಲ್ಲಿ ಮುಳುಗುವುದು ಬಿಟ್ಟು, ಯಾಕೆ ಸುಮ್ಮನೆ ಚಿಂತೆ ಮಾಡುವೆ? ಯಾಕೆ ಸುಮ್ಮನೆ ನಿಲ್ಲುವೆ? ಬಾ, ಬಾರೊ ಎಂದು ಕವಿ ಸೂರ್ಯೋದಯದ ಆನಂದದಲ್ಲಿ ಮುಳುಗಿ ಅದರಂತೆ ಚೈತನ್ಯ ಪೂರ್ಣ ಕಾರ್ಯಶೀಲವಾಗುವ ಜೀವನ ತತ್ವವನ್ನು ಕಾವ್ಯದ ಮುಖೇನ ಜನರಿಗೆ ಮನಗಾಣಿಸಿದ್ದಾರೆ.

ಚಿಗುರು – ಬೆಳಕು

ಬೇಂದ್ರೆಯವರಿಗೆ ಉಷಃಕಾಲದಲ್ಲಿ ಹರಿವ ಸೂರ್ಯ ಪ್ರಕಾಶ 'ಚಿಗುರು – ಬೆಳಕು' ಅದು ಪ್ರವೇಶಿಸಿದ ತಕ್ಷಣ ಹೊರಗಿನ ಲೋಕದ ಕತ್ತಲನ್ನು ಓಡಿಸುವುದಷ್ಟೆ ಅಲ್ಲ, ಮನುಷ್ಯರ ಮನದ ಮೂಲೆ ಮೂಲೆಯಲ್ಲಿ ಮಲೆತು ಕುಳಿತ ಕತ್ತಲೆಯನ್ನು ನಿವಾರಣೆ ಮಾಡುತ್ತದೆ. ಯಾವಾಗ ವ್ಯಕ್ತಿಗಳ ಮನಸ್ಸು ಶುದ್ಧವಾಗುವುದೊ ಆಗ ಅವರ ಮನೆ ಉಳಿಯುತ್ತದೆ, ಮಡದಿ ಮಕ್ಕಳು ಕ್ಷೇಮದಿಂದಿರುತ್ತಾರೆ ಎಂಬ ಚಿಂತನೆಯನ್ನು ಕವಿ ಹೀಗೆ ಪ್ರಕಟಪಡಿಸಿದ್ದಾರೆ.


ಮನದ ಮೂಲೆ ಮೂಲೆಯಲಿ ಮಲೆತ ತಮ
ಶಮನಗೊಳಿಸಲೆಂದು
ಬಳಿಗೆ ಬಂತೊ ಈ ಚಿಗುರು – ಬೆಳಕು
ಮನೆ ಮನೆಯನುಳಿಸಲೆಂದು **(ಉತ್ತರಾಯಣ)**

ಸಾಕ್ಷಿ ಮತ್ತು ಚಕ್ರ

ಬೇಂದ್ರೆಯವರ 'ಚೈತ್ಯಾಲಯ' ಕವನ ಸಂಕಲನವು ಯೋಗಿ ಅರವಿಂದರ ಇಂಗ್ಲಿಷ್ ಕವನಗಳ ಅನುವಾದಗಳಿಂದ ಕೂಡಿದೆ. 'ಕೃತಿಯು ರಸವತ್ತಾಗಿ ಬೇಕಾದರೆ ಭಾಷಾಂತರಕ್ಕಿಮತ ಭಾವಾನುವಾದವೆ ಲೇಸು' ಎಂಬ ಅವರ ನುಡಿಯಂತೆ ಇಲ್ಲಿರುವವು ಭಾವಾನುವಾದಗಳಾಗಿವೆ. 'ಋಜ ತಿಣಟಿಟ ಚಿಟಿಜ ಣುಜ ತಿಜಜಟ' ಕವನವನ್ನು 'ಸಾಕ್ಷಿ ಮತ್ತು ಚಕ್ರ' ಎಂದು ಭಾವಾನುವಾದ ಮಾಡಿದ್ದಾರೆ. ಸೂರ್ಯವನ್ನು ಬಿಡುಗಣ್ಣನೆಂದು ಕರೆದು, ಅವನು ಮಾನವರ ಕರ್ಮ ಕ್ರಿಯೆಯನ್ನು ನೋಡುವ ರೀತಿಯನ್ನು ಹೀಗೆ ಅಭಿವ್ಯಕ್ತಿಸಿದ್ದಾರೆ.

ಯಾರಣ್ಣ ನೀ ಬಿಡುಗಣ್ಣನೇ । ಎದೆಗೆಳೆಯ । ಕುಳಿತಿಹೆ ತಣ್ಣನೇ
ಮಾನವನ ಕರ್ಮವ ಬಿಮ್ಮನೇ । ಸುಖದುಃಖ ನೋಡುವೆ ಸುಮ್ಮನೇ.

*



೧೪

ಇಂದ್ರಜಾಲ

ಬೇಂದ್ರೆಯವರು ಬೆಳಗಿನ ವೈಭವ ಗೋಚರವನ್ನು 'ಇಂದ್ರಜಾಲ' (ಹೃದಯ ಸಮುದ್ರ) ಎಂದು ಕರೆದು ಕವನ ರಚಿಸಿದ್ದಾರೆ. ಅವರು ಕಣ್ಣು ಮಿಟುಕಿಸಿದ ಏಕಾಗ್ರ ಚಿತ್ತದಿಂದ ಸೂರ್ಯೋದಯವನ್ನು ನೋಡುತ್ತ ಅದರ ವವಿಧ ರೂಪ ವಿನ್ಯಾಸ, ಬಣ್ಣ ಲಾಲಿತ್ಯ, ಛಾಯಾ ಸಂಜ್ಞಾ ಸಮೇತವಾದ ಲಯಪೂರಿತ ನಾಟ್ಯ ವಲಾಸವನ್ನು ಅನನ್ಯವಾಗಿ ಬಣ್ಣಿಸಿದ್ದಾರೆ. ರವಿಯ ತೇಜದಾಟವನ್ನು ದೃಷ್ಟಿಸುತ್ತ, ಅದು ಬಣ್ಣ ಬಣ್ಣದ ಆಕೃತಿಗಳಲ್ಲಿ ಕುಣಿದು ಉಂಟುಮಾಡುವ ಮಾಟಕ್ಕೆ ಬೆರಗಾಗಿದ್ದಾರೆ. ಅವರಿಗೆ ಭಾಸ್ಕರ ಕೇಂದ್ರಿತವಾಗಿ ಹೊಮ್ಮಿಬಂದ ಏಳು ಬಣ್ಣಗಳು ಉರುಳಿ ಉರುಳಿ ಗುಂಡಾದ ವಸ್ತು ಗೋಲಾಕಾರವಾದ 'ಉರುಳಿ'ಯಾದಂತೆ ತಿರುಗುವುದು ಮೋಡಿ ಮಾಡಿದೆ. ಅವರು 'ಇಂದ್ರಚಾಪ'ವನ್ನೆ ತಂತಿ ಮಾಡಿ ಹೆಣೆದಂತೆ ಆ ಬಣ್ಣದ ಕಿರಣಗಳು ಮತ್ತೆ ಮತ್ತೆ ಮೂಡಿಬರುವುದನ್ನು ಕಂಡು ಆಶ್ಚರ್ಯಕ್ಕೊಳಗಾಗಿದ್ದಾರೆ.

ಬೆಳಗಿನ ಹೊತ್ತು ಮಂಜು ಆವರಿಸಿ ಹೋಗೆಯೊಡನೆ ಮೋಡದ ರಾಶಿಯಲ್ಲಿ ಒಂದು ನಿರ್ಲಿಪ್ತ ಗಂಧರ್ವಲೋಕವನ್ನು ಸೃಷ್ಟಿಸಿರುತ್ತದೆ. ಮನಸ್ಸಿನ ಹಗೆಯವನ್ನು ಹೊಕ್ಕ ಹಾಗೆ ಅದರ ಮಬ್ಬುಗೊಡ್ಡು ಹರಡಿಕೊಂಡಿದೆ ಎಂದು ಕವಿ ಉಪಮಾನದಲ್ಲಿ ವರ್ಣಿಸಿದ್ದಾರೆ. 'ಬಗೆಯ ಹಗೆಯವನೆ ಹೊಕ್ಕ ಹಾಗೆ ಹರಹುವುದು ಮಬ್ಬುಗೊಡ್ಡು'.

'ಬಗೆಯ ಹಗೆಯ' ಎಂಬ ಪ್ರತಿಮೆಯಲ್ಲಿ ಮನದ ಒಳಗೆ ಒಟ್ಟಿಲುಗೊಂಡ ಚಿಂತನೆಯನ್ನು ಪ್ರತಿಬಿಂಬಿಸಿದ್ದಾರೆ. 'ಅದರ ಹೊಂಚಿನಲಿ ಮಿಂಚು ಒಂದು ಚಂಚಲಿಸಿ ಅಡಗಲುಂಟು' ಎಂದು ಚಿತ್ರಿಸುತ್ತಾ ಆಲೋಚನೆಯ ಹೊಳಪನ್ನು ಪ್ರಕಟಪಡಿಸಿದ್ದಾರೆ. ಹೀಗೆ ಹೊರಗಿನ ಪ್ರಕೃತಿಯ ಹಾಗೂ ತನ್ನ ಒಳಗಿನ ಭಾವದಾಲೋಚನೆಗಳ ಬೆಳಕು ಕತ್ತಲು ಸಂಬಂಧ ಕಂಡು ಅಚ್ಚರಿಗೊಂಡಿದ್ದಾರೆ. ಓಹ್, ಇದೊಂದು ಬಂಜೆಯಲ್ಲಿ

ಉಂಟಾಗುವ ಬೆಸಲನಂಟು ಎಂದು ಸೃಷ್ಟಿಕ್ರಿಯೆಯನ್ನು ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸಿದ್ದಾರೆ.

ಬೇಂದ್ರೆಯವರಿಗೆ ಮರದೆಲೆಯ ಬಿರುಕಿನಲ್ಲಿ ತೂರಿ ಬಂದು ಹರಡಿರುವ ಬೆಳಕು ರಂಗೋಲೆಯಾಗಿ ಕಂಡಿದೆ. ಅದನ್ನು ನೋಡುತ್ತ ನೋಡುತ್ತ ರಂಗವಲ್ಲಿಯೊಳಗೆ ಇಟ್ಟ ಅಕ್ಕಿ ಅರ್ಥಾತ್ ಕಣ್ಣು ತೆರೆದು ಕುಣಿಯುವ ಹಾಗೆ ಗೋಚರಿಸಿದೆ. ಬೀಸುವ ಗಾಳಿಗೆ ಅವು ತಮ್ಮ ಹೊಳಪಿನಲ್ಲಿ ಅತ್ತ ಸರಿದು, ಇತ್ತ ಹರಿದು, ಕೆಳಕ್ಕೂ ಮೇಲಕ್ಕೂ ತೊನೆ ದಾಡುವುದನ್ನು ಕಂಡಿದ್ದಾರೆ. ಅವರು ಅದು ಕಾಯಿಸಿದ ಚಿನ್ನದ ತಗಡಿನಲ್ಲಿ ಬರೆದ ಯಂತ್ರದಂತಿದ್ದು, ಅದು ತನ್ನದೇ ಭಾಷೆಯನ್ನು ಹೊಂದಿದೆ ಹೇಳಿದ್ದಾರೆ. ಅದರಲ್ಲಿ ರೇಚಿತವಾದ ಲಿಪಿ ಯಾವುದೆಂದು ಗೊತ್ತಿಲ್ಲ, ಅದು ಯಾವ ತಂತ್ರವನ್ನು ಹೊತ್ತು ಏಕೆ ಬಂದಿತೊ ತಿಳಿಯದಾಗಿದೆ ಎಂದು ಬೆಳಕಿನ 'ಇಂದ್ರಜಾಲ' ಭಾಷೆಯ ಗೂಢವನ್ನು ಉಪಮೆಗಳಲ್ಲಿ ರೇಖಿಸಿದ್ದಾರೆ.

ಬಣ್ಣಗಳ ನಗುವಂಥ ಬಿಳಿ ಬೆಳಕು

ಮುಂಜಾನೆಯ ಬೆಳಕು ಬೆಳೆ ಬೆಳೆಯುತ್ತ ಆಗಸದಲ್ಲಿ ಉಂಟಾದ ಬೆಳಕಿನ ಶೈಲವನ್ನು 'ಬಿಳಿಯ ಮೋಡಗಳು ಒಟ್ಟು ತಿಹವು ಹಿಮಶೈಲ ಕಟ್ಟಿದಂತೆ' ಎಂದು ಕವಿ ವರ್ಣಿಸಿದ್ದಾರೆ. ಆ ಬಿಳಿಯ ಮೋಡದ ಅಂಚಿನಲ್ಲಿ ನವನೀಲ ಹುಟ್ಟಿದಂತೆ ಕರಿಯ ಮೋಡ ಮಿರಿಮಿರಿ ಮಿಂಚುತಿಹವು ಎಂದು ಅದರ ಅಮೋಘ ವೈಭವ ಚಿತ್ರಿಸಿದ್ದಾರೆ. ಆಗ್ಗೆ ಎಲ್ಲ ಏಳು ಬಣ್ಣಗಳನ್ನು ನುಂಗಿದಂಥ ಬಿಳಿ ಬೆಳಕು ಉಂಟಾದಾಗ ಕವಿಗೆ ತಾನು ನೆನಸಿದಂಥ ರೂಪ ಸೃಷ್ಟಿಗೊಂಡು ತೋರುತ್ತದೆ. ರೂಪಗೋಚರವಾದಂತೆ ಅದನ್ನು ಹೀಗೆ ಬಣ್ಣಿಸಿದ್ದಾರೆ. ಅದೊ ಕರ್ಣದಲ್ಲಿ, ಒಳವರ್ಣದಲ್ಲಿ ಸ್ವರವರ್ಣದಲ್ಲಿ ಅರಳಿ ರಸರಾಗದಲ್ಲಿ ಅನುರಾಗವಲ್ಲಿ ಹೊಸ ಒಲವು ಲಹರಿ ಮರಳಿ 'ಸ್ವರವರ್ಣ' ಎಂಬ ಪದ ಸೃಷ್ಟಿಸಿ, ಸ್ವರ್ಣವೆಂದರೆ ಏಳು ಎಂಬ ಸಂಖ್ಯೆಯ ಸಂಕೇತ ಎಂಬ ಅಲ್ಲಿಯ ಸಪ್ತವರ್ಣಗಳನ್ನು ಕುರಿತು ಒಂದು ಅರ್ಥ ಹೊಮ್ಮಿಸಿದ್ದಾರೆ. ಅದು ಅವ್ಯಕ್ತ ಮಧುರ ವಿಶುದ್ಧವಾಗಿರುವ ಗೀತಿಯಲ್ಲಿಯ ಸ್ವರಯೋಗ ಹೊಂದಿರುವುದನ್ನು ಶ್ರವಣ ಪ್ರತಿಭೆಯ ನಾದಾನುಲೋಲರಾದ ಬೇಂದ್ರೆ ಗ್ರಹಿಸಿ ಆ ಅರ್ಥಭಾವವನ್ನು ಅಲ್ಲಿ ಮೂಡಿಸಿದ್ದಾರೆ. 'ಒಳು' ವೆಂದರೆ 'ಒಳಿತು'. ರವಿಯ ಒಳಿತಾದ ವರ್ಣದಲ್ಲಿ ಸ್ವರವರ್ಣ ಅರಳಿದೆ!

'ಗಿಡಗಂಟೆಯ ಕೊರಳೊಳಗಿಂದ ಹಕ್ಕಿಗಳ ಹಾಡು' ಹೊರ ಹೊಮ್ಮುತ್ತದೆ. ಕಿವಿಗೆ ಹಿತವಾದ ಅದು ಬೆಳಕಿನಿಂದ ಒಳ ಭಾವ ಭಾಷೆಯಾಗಿ ಅರಳುತ್ತದೆ. ಅದರ ಫಲವಾಗಿ ಲೋಕದ ಮನುಜರ ರಸರಾಗದಲ್ಲಿ ಅನುರಾಗ ಉಂಟಾಗಿ ಹೊಸ ಪ್ರೀತಿ ಲಹರಿ ಮರಳುತ್ತದೆ. ಆಗ ಉಂಟಾಗುವ ಮಾತಿನ ಭಾವಾಭಿ ವ್ಯಕ್ತಿಯ ಅತಿಶಿಯವಾದ ಸ್ವರ್ಗಾನಂದದಲ್ಲಿ ಬಗೆಬಗೆಯ ನಗೆಯು ಹೊಮ್ಮಿ ಲೋಕದ ಜನರು

ಹರ್ಷಗೊಳ್ಳುತ್ತಾರೆ. ಆಗ ಉಂಟಾಗುವ ಗಂಧರ್ವಲೋಕದಲ್ಲಿ ಅವರು ಆನಂದದ ಗಿಣಿಗಿಣಿಲು ಗಂಟಾಧ್ವನಿ ಹೊಮ್ಮಿಸಿ ಮಧುರ ರಸವನ್ನು ಈಂಟುತ್ತಾರೆ.

ಹೀಗೆ ಪ್ರಕೃತಿಯ 'ಬೆಳಗು' ನೀಡುವ ಅರಿವಿನಲ್ಲಿ ಮಾನವ ಜೀವಿಯ ಲಕ್ಷಲಕ್ಷ ವರ್ಷದ ನಿಸರ್ಗಾನುಭಾವದಲ್ಲಿ ಅವನ ಮೂಕ ಮೌನ ತೂಕ ಮೀರಿ ಧನಿಯು ಸಣ್ಣದಾಗಿ ಹುಟ್ಟಿದೆ ಎಂದು ಬೇಂದ್ರೆ 'ಕಣ್ಣ ಕಾಣಿಕೆ' ಕವನದಲ್ಲಿ ತಿಳಿಸಿದ್ದಾರೆ. ಅದು 'ಸ್ವರವರ್ಣ ಅರಳಿ' ಬಂದ ಆನಂದ. ಆಗ ಅವನು ಪ್ರಕೃತಿಯ-ಮಣ್ಣಿನ ಕಣಕಣದಲ್ಲಿ ಇಂದ್ರ ಜಾಲದಂತೆ ಹಸಿರು ಹೊಮ್ಮುವುದನ್ನು-ಕಣ್ಣರಳಿಸಿ ನೋಡಿ ಮುದಗೊಳ್ಳುತ್ತಾನೆ. ಅವನ ಮನದ ಭಾವ ವಿಕಸನಗೊಂಡಾಗ ಅದು ಹಾಡು ಕಟ್ಟಿದೆ ಎಂದು ಬೇಂದ್ರೆಯವರು ಅವನ 'ಅಂತರಂಗದ ಮೃದಂಗ' ಮಿಡಿದ ಮಾತು ಹೊರ ಬಂದದ್ದನ್ನು ಕಾವ್ಯವಾಗಿ ಹೀಗೆ ಕಡೆದಿಟ್ಟಿದ್ದಾರೆ.


> ಕತ್ತಲಲ್ಲೆ ಬೆಳಕು ಮಿಂಚಿ ಪಡೆದಿತೇಳು ಬಣ್ಣ
> ಮೂಕ ಮೌನ ತೂಕ ಮೀರಿ ದನಿಯು ಹುಟ್ಟಿಸಣ್ಣ
> ಕಣ್ಣಮಣ್ಣ ಕೂಡಲಿಲ್ಲ ಹಾಡು ಕಟ್ಟಿತಣ್ಣ॥
>
> **(ಗಂಗಾವತರಣ)**

ಉತ್ಪ್ರೇಕ್ಷೆಯಂತೆ ಕ್ಷಣಕೊಂದರಂತೆ ತೋರುವುದು

ಬೇಂದ್ರೆಯವರು ಬೆಳಗಿನ 'ಇಂದ್ರಜಾಲ'ವನ್ನು ಗಮನವಿಟ್ಟು ನೋಡುತ್ತ ಅದನ್ನು ಉತ್ಪೇಕ್ಷಾಲಂಕಾರದಲ್ಲಿ ಅಸಾಧಾರಣವಾಗಿ ಬಣ್ಣಿಸಿ ಕಾವ್ಯರಸಿಕರನ್ನು ಮೋಡಿ ಮಾಡಿದ್ದಾರೆ. ಅವರು ತಮ್ಮ ಕಲ್ಪನೆಯ ಚೆಲುವಿನ ಆಕಾರ ಮೂರ್ತಿಗೊಂಡ ರೂಪ ಕಾಣವಿರುವುದಕ್ಕೆ ಏನು ಕೊರತೆಯೊ, ಏನೂ ಲೋಪವಾಗಿದೆಯೊ ಎಂದು ಆಶ್ಚರ್ಯಕ್ಕೊಳಗಾಗಿದ್ದಾರೆ.

ಸೂರ್ಯೋದಯವನ್ನು ಪರಿಶೀಲಿಸುತ್ತಿದ್ದಂತೆ ಗಮನಕೇಂದ್ರಕ್ಕೆ ತಕ್ಕಂತೆ ಕ್ಷಣಕ್ಷಣಕ್ಕೂ ಅದು ವಿವಿಧ ರೀತಿಯಲ್ಲಿ ಗೋಚರಿಸುವುದು. ತೇಜವೊಡೆದು ಅದರ ಭಾಗಗಳು ಬೇರೆಯವರ ಪೋಷಣೆಗೆ ಒಳಗಾದ (ಪರಪುಷ್ಟ) ಗ್ರಹಮಾಲೆಯಾದ ಹಾಗೆ-ಪ್ರತ್ಯೇಕ ಪ್ರತ್ಯೇಕವಾಗಿ ತನ್ನದೆ ಹೊಳಪಿನಿಂದ ಶೋಭಿಸುವುದು. ಹೀಗೆ 'ಬೆಳಗು' ಕಲ್ಪನೆಯಲ್ಲಿ ಉತ್-ಮೇಲಕ್ಕೆ ಹೋದ ಹಾಗೆಲ್ಲ ಅದನ್ನು ಈಕ್ಷಾ-ನೋಡುವುದೇ, ಅದರ ಅರಿವಿನ ಆನಂದದಲ್ಲಿ ಒಂದಾಗುವುದೇ ಮನುಜನ ಸಾರ್ಥಕ್ಯ ಎಂದು ಕವಿ ವರ್ಣಿಸಿದ್ದಾರೆ. ಅವರು ರೂಪಕದಲ್ಲಿ ವರ್ಣಿಸಿರುವುದು ಕಣ್ಣಿಗೆ ಕಾಣುವುದಿಲ್ಲ. ಮನೋಲೋಕದ ಉನ್ನತ ಸ್ತರದಲ್ಲಿ ಅದನ್ನು ಅನುಭವಿಸಿ ಕಾವ್ಯನಂದಕ್ಕೆ ಒಳಗಾಗಬೇಕು.

*



೧೫

ಬೆಳಗು ಜಾವ

ಬೇಂದ್ರೆಯವರು 'ಬೆಳಗು ಜಾವ' ಕವನದಲ್ಲಿ ತಮ್ಮ ಚೈತನ್ಯದಲ್ಲಿ ಉಂಟಾದ ಜಾಗೃತ ಸ್ಥಿತಿಯನ್ನು ಮೊದಲ ನುಡಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರು 'ಮರನಲ್ಲ ನಾನು' ಅರ್ಥಾತ್ ವೃಕ್ಷದ ರೀತಿಯ ನೀರಸ ಚಲಸ ಶೀಲವಲ್ಲದ ಬಾಳಿನವನಲ್ಲ, 'ನಾನು ಅಮರ' – ಸಾವಿಲ್ಲದ ಶಾಶ್ವತ ನೆಲೆಯ ವ್ಯಕ್ತಿ ಎಂದು ಸ್ಪಷ್ಟಪಡಿಸಿದ್ದಾರೆ.

ಅವರು ತನ್ನ ತಾಯಿ ಅಂಬವ್ವನನ್ನು ಧ್ಯಾನಿಸಿ ಬರೆದ ಕವನ 'ಅಂಬಿಕಾತನಯ ದತ್ತ'. ಅದರಲ್ಲಿ ಒಂದು ನುಡಿ ಹೀಗೆದೆ.

> 'ಸಾವಿರದ ಮನೆಗಳಲ್ಲಿ ನನಗೆ ಮಾಡಿದೆ
> ತಾಯಿ ಆಟ ಹೂಡಿದೆ' **(ಗಂಗಾವತರಣ)**

ಅವರು 'ಸಾವಿರದ ಮನೆ' ಯನ್ನು ಶ್ಲೇಷಾರ್ಥದಲ್ಲಿ ಪ್ರಯೋಗಿಸಿದ್ದಾರೆ. ಸಾವಿರಾರು ಕನ್ನಡಿಗರ ಮನೆಯಲ್ಲಿ ನನ್ನನ್ನು ನೆನೆಯುವಂತೆ ಮಾಡಿದೆ ಎಂಬುದು ಒಂದು ಅರ್ಥವಾದರೆ, ಸಾವಿರದ ವಾಗ್ದೇವಿಯ ಭಂಡಾದಲ್ಲಿ ನನಗೆ ನೆಲೆಯನ್ನು ಉಂಟು ಮಾಡಿದೆ ಎಂಬುದು ಇನ್ನೊಂದು ಅರ್ಥ. ಅಂತಹ ಸಾವುರಹಿತ ಅಮರ ಅವರಾಗಿದ್ದಾರೆ.

ಬೇಂದ್ರೆಯವರು ಮೊದಲ ನುಡಿಯ ಎರಡನೆ ಸಾಲಿನಲ್ಲಿ ಹೂವಿನ ಕಂಪನ್ನು ಸವಿದು ಸುಖಿಸುವ, ಅದರಲ್ಲಿ ಬೀಜೋತ್ಪತ್ತಿಗೆ ಕಾರಣವಾಗುವ ನಲ್ಲನಾಗಿ ಭ್ರಮರನಾಗಿದ್ದೇನೆ. ಈ ನೆಲದ ಸೌಂದರ್ಯ ಗಂಧ ಸುಗಂಧ ಬಣ್ಣ ಬೆಡಗು ಆನಂದವನ್ನು ನಾದಲಯದಲ್ಲಿ ಸವಿಯುವ ಕಾವ್ಯ ಭ್ರಮರ ತಾನು ಎಂದು ಘೋಷಿಸಿಕೊಂಡುದ್ದಾರೆ.

ಮರನಲ್ಲ ನಾನು – ನಾನು ಅಮರ.
ಸುಮ – ನಲ್ಲನಾಗಿ, ಆದೆ ಭ್ರಮರ. **(ಉತ್ತರಾಯಣ)**

ಕವಿಯು ತನ್ನ ನಡೆ ನುಡಿ, ಆಚಾರ ವಿಚಾರ, ಮಾತುಕತೆ ವ್ಯವಹಾರದಲ್ಲಿ ಮುಚ್ಚು ಮರೆಯಿಲ್ಲದ ಮುಕ್ತ ಭಾವದವನು – 'ತಾನು ತೆರೆವು' ಎಂದು ತಿಳಿಸಿದ್ದಾರೆ. ಒಳಗಿನ ಅಜೀರ್ಣ, ಅನಾರೋಗ್ಯ ಕಾರಣವಾದ ದ್ವೇಷ ಅಸೂಯೆ, ಆಸೆಯ ತುಮುಲ ಮೊದಲಾದ ಅರಿಷಡ್ವರ್ಗಗಳಿಂದ ಬಿಡುಗಡೆ ಗೊಂಡಿರುವುದೆ – ತನ್ನ ಆತ್ಮದ ಒಳನಂಟು ಎಂದು ತಿಳಿಸಿದ್ದಾರೆ. ನಿನ್ನ ಹೊಲಸಿನಿಂದ ನೀನು ಬಿಡುಗಡೆಗೊಳ್ಳು ಎಂಬುದನ್ನು 'ಬಿಚ್ಚು ಮಲಗಂಟು' ಧ್ವಾನಿಸುತ್ತದೆ.

'ಬಿಚ್ಚು ಮಲಗಂಟು, ಅದುವೆ ಒಳನಂಟು'.

ಬೇಂದ್ರೆಯವರು 'ಕೂಡಿ ಓದಿ ಕೂಡಾಡಿ ಕೂಡಿ ಅರಿಯೋಣ ಕೂಡಿ ಕೂಡಿ' ಎಂಬ ನುಡಿಯನ್ನು ನಡೆಯಾಗಿಸಿದ 'ಗೆಳೆಯರ ಗುಂಪು' ವಿನ ಸ್ನೇಹಜೀವಿ, ಅದು ಎಣ್ಣೆ ಜಿಗಟುವಿನಂತಹದಲ್ಲ. ಪ್ರೀತಿಯಿಂದೊಡಗೂಡಿದ ಜ್ಞಾನ ಜ್ಯೋತಿ ಬೆಳಗುವ ತೈಲ – ನೇಹದ ಮೈತ್ರಿ. ಅದು ದೀಪ ಬೆಳಗುವ ನೇಹದ ಕಂಪಿನ 'ಸ್ನೇಹದೊಗಟು' ಎಂದು ಚಿಂತನಶೀಲರಾಗಿ ಬಾಳಿದವರು.

ಕವಿಯು 'ಎರಡನೆಯ ನುಡಿಯಲ್ಲಿ ಬೆಳಗು ಜಾವದಲ್ಲಿ ಸುರಿಯುವ ತುಂತುರು ಹನಿ – ತುಷಾರವೇ ತನ್ನ ಹೃದಯ ಹಾರ ಎಂದು ಸಂಭ್ರಮಿಸಿದ್ದಾರೆ. ಆ ಶಾಂತ ವಾತಾವರಣದಲ್ಲಿ ತನ್ನಲ್ಲಿ ಮೂಡಿ ಬಂದ 'ಜಿನುಗು ಕಿವಿ ಮಾತು । ಜೀವ ರುಜುವಾತು' ವಾಗಿ ತನ್ನ ಸ್ವಚ್ಛ ಬಾಳಿನ ಸಾಕ್ಷ್ಯವೆಂಬತೆ ಸಮಾಧಾನಗೊಂಡಿದ್ದಾರೆ.

ಒಳಮನದ ಏನೋ ಒಂದು ಮಧುರ ಕ್ಷಣ ತನ್ನನ್ನು ಎಚ್ಚರಿಸಿ, ಅದರ ಮೆಲಕಿನಲ್ಲಿ ಜೀವನ ಸಾರ್ಥಕ್ಯದ ರೋಮಾಂಚನ ಉಂಟಾಗಿ ಭಾಷ್ಯನಂದ ಜಿನುಗಿದೆ. ಅದು ತನ್ನ ಬಾಳಿನ ಕ್ಷಿತಿಜದಲ್ಲಿ ಆದ ಬೆಳಕು. ಅದೇ ಸಮಯದಲ್ಲಿ ದಿಗಂತ ರೇಖೆಯಲ್ಲಿ ನೇಸರ ಬೆಳಕು ಮೂಡಿ ಬಂದಿದೆ ಎಂದು ಕವಿ ತನ್ನ ಒಳಗಿನ ಹಾಗೂ ಹೊರ ನಿಸರ್ಗದ ಬೆಳಕನ್ನು ಕಂಡು ಹರ್ಷೋನ್ಮಾದದಿಂದ ಪ್ರಶ್ನಿಸಿದ್ದಾರೆ –

'ಆ ಕ್ಷಿತಿಜದುದಯವೇ ಬೆಳಗು ಜಾವ
ಅದನರಿಯದವ ಯಾವ?'

ತನ್ನ ಒಳ ಹೊರಗಿನ ಬೆಳಕನ್ನು ಸಂಭ್ರಮಿಸಿದ ಕವಿ ಪತ್ನಿಗೆ – ತಾನು ಶ್ರೀ ಗಂಧದ ಕಾಡಿನ ಮಲಯ ಪರ್ವತದಿಂದ ಬೀಸುವ ಸುಗಂಧ ಪೂರಿತ ತಂಗಾಳಿಯೆಂದು ಹೇಳಿಕೊಂಡಿದ್ದಾರೆ. ಆ ಪರಿಮಳದ ಆನಂದವನ್ನು ಎಚ್ಚರದಿಂದ ಸವಿದು ಸುಖಿಸು ಎಂದು ಆಹ್ವಾನಿಸಿದ್ದಾರೆ.

ಓಹೋ ನನ್ನಾಕೆ
ಜೋಕೆ, ಜೋಕೆ !

ನಾನು ನಿಸ್ನಾತ
ನಾ ಮುಲವಾತ.

ಬೆಳಕು – ಹಾರ್‍ಯಾವ ಮೂಡಲದಾಗ

ಬೇಂದ್ರೆಯವರು 'ನಾವು ಬರತೇವಿನ್ನ' ಕವನದಲ್ಲಿ ಧಾರವಾಡದ ತಾಯಿ ದುರ್ಗಾದೇವಿಯನ್ನು ಲಾವಣಿ ಧಾಟಿಯಲ್ಲಿ ನೆನೆದು ಕೀರ್ತಿಸಿದ್ದಾರೆ. ಅವರು ಅಲ್ಲಿ ಬೆಳಕನ್ನು ಹಕ್ಕಿಯ ರೂಪಕದಲ್ಲಿ ಚಿತ್ರಿಸಿ ಬಾನಿನಲ್ಲಿ ಕತ್ತಲೆಯ ತಲೆ ಕುಕ್ಕಿ ಮೂಡಲ ದಿಕ್ಕಿನ್ಲಲಿ ಹಾರುತ್ತ ಬಂದಿತು ಎಂದು ವರ್ಣಿಸಿರುವುದು ಅನನ್ಯವಾಗಿದೆ. ಆಗ ನಿಸರ್ಗದಲ್ಲಿ ಉಂಟಾದ ಸಹಜ ಬದಲಾವಣೆಯನ್ನು 'ಕಣ್ಣ ಮುಚ್ಚಿಕೊಳತಾವ ಚಿಕ್ಕಿ' ಎಂದು ಬೆಳಕಿನೊಂದಿಗೆ ಈ ಲೋಕದಲ್ಲಿ ಉಂಟಾಗುವ ಜೀವ ಚೆತನ್ಯದ ಲೀಲೆಯನ್ನು 'ಚಿವುಗುಡತಾವ ಹಕ್ಕಿ' ಎಂದು ಧ್ವನಿಸಿದ್ದಾರೆ.

*



೧೬

'ಏಳಣ್ಣ' ಮತ್ತು 'ಬೆಳಗು ಜಾವ'

'ಮುಕ್ತಕಂಠ' ಕವನ ಸಂಕಲನದಲ್ಲಿ ಉಮರ್ ಬಯ್ಯಾಂನ ಉಕ್ತಿಗಳ ಪ್ರೇರಣೆಯಿಂದ ರಚಿಸಿದ 'ಏಳಣ್ಣ', 'ಬೆಳಗು ಜಾವ' ಎಂಬ ಶೀರ್ಷಿಕೆಯ ಎರಡು ಕವನಗಳಿವೆ. ಅವುಗಳನ್ನು ಅಧ್ಯಯನ ಮಾಡಿದಾಗ 'ಏಳಣ್ಣ' ವನ್ನು ಮೊದಲು ಬರೆದು, ಅನಂತರ 'ಬೆಳಗು ಜಾವ'ವನ್ನು ರಚಿಸಿರಬಹುದು ಎಂಬ ಅಭಿಪ್ರಾಯ ಉಂಟಾಗುತ್ತದೆ. ಕವಿಯು 'ಏಳಣ್ಣ' ವನ್ನು ತನ್ನ ಸಮವಯಸ್ಕಾರನ್ನು ಉದ್ದೇಶಿಸಿ ಬರೆದಿದ್ದಾರೆ, 'ಬೆಳಗು ಜಾವ' ವನ್ನು ಏಳು ಚಿನ್ನ ಎಂದು ಕರೆದು ಮುದ್ದು ಲಲ್ಲೆಯಿಂದ ಮಕ್ಕಳನ್ನು ಗುರಿಯಾಗಿಸಿಕೊಂಡು ಬರೆದಂತಿದೆ.

'ಏಳಣ್ಣ' ದಲ್ಲಿ 'ಮೂಡಲದ ಬೇಡ ಬಂಗಾರ ಬಲೆಯ ಬೀಸಿರಲು/ಗುಡಿಯ ಗೋಪುರವು ಹೊಂಬಣ್ಣವಾಯ್ತು' ಎಂಬುದು ವಾಚ್ಯವಾಗಿದೆ. ಅದೇ ಕಲ್ಪನೆಯು 'ಬೆಳಗು ಜಾವ'ದಲ್ಲಿ ಜೇನ್ನೊಣದ ಝೇಂಕಾರದೊಡನೆ ಲಹರಿ ಲಹರಿಯಾಗಿ ಹೊಮ್ಮಿ – ಬೆಳಕು ಬೇಟೆಗಾರ ಮನ್ಮಥನಾಗಿ ಬೆಡಗಿನ ಬಲೆ ಬೀಸಿಬಂದ ಆಕರ್ಷಣೆ ಕುತೂಹಲವನ್ನು ಉಂಟುಮಾಡಿ ಮಕ್ಕಳನ್ನು ಸೆಳೆದಾಡುತ್ತದೆ. ತನ್ನ ನಾದಲಯ ಛಂದೋಲಹರಿಯಿಂದ ನಾಲಗೆಯಲ್ಲಿ ನಲಿದಾಡಿ ಮನಸ್ಸಿಗೆ ಮುದ ನೀಡುತ್ತದೆ. ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟಮಾರ ಗುಡಿಗೋಪುರಕ್ಕು ಬಲೆ ಬೀಸಿ ಬಂದ ಅಗೊ ಬೆಳಕು – ಬೇಟೆಗಾರ.

'ಏಳಣ್ಣ'ದಲ್ಲಿ 'ಏಳಿರೈ ಮಕ್ಕಳಿರ, ತುಂಬಿ ಕುಡಿಯಿರಿ ಮಧುವ । ಬದುಕು ಬಂದಾಗುವದರೊಳಗೆ' ಎಂದು ಹೇಳುವುದು ಮಾತಾಗಿ ಕರೆದಂತಿದೆ. ಆದರೆ ಅದೇ ಕರೆ 'ಬೆಳಗು ಜಾವ'ದಲ್ಲಿ ಮೃದು ಮನೋಧರ್ಮದಿಂದೊಡಗೂಡಿ, ನವಿರು ನುಡಿ ಪೋಣಿಸಿಕೊಂಡು ಆತ್ಮೀಯವಾಗಿ ಹೀಗೆ ಎಚ್ಚರಿಸುತ್ತದೆ :

ಕವಿಯು ತುಂಬಿ ಪದವನ್ನು ಶ್ಲೇಷಾರ್ಥದಲ್ಲಿ ಪ್ರಯೋಗಿಸಿ ಈ ದುಂಬಿಯಂತಹ ಬಾಳು ಎಂದು ಹೇಳುತ್ತಲೆ, 'ತುಂಬಿದ ಕೊಡ ತುಳುಕದು' ಎಂಬ ನಾಣ್ಣುಡಿಯಂತೆ ತುಂಬು ಬಾಳುತ್ತ ಈ ನೆಲದ ಬದುಕನ್ನು ಸವಿಯಿರಿ ಎಂಬ ಅರ್ಥವನ್ನು ಧ್ವನಿಸುತ್ತದೆ. ಹೀಗೆ 'ಬೆಳಗು ಜಾವ' ದಲ್ಲಿ ಕಾವ್ಯ ರಚನಾ ಕುಶಲ ಕರ್ಮದಲ್ಲಿ ಕಾವ್ಯರಚನಾ ಕುಶಲ ಕರ್ಮದ ಪರಿಣತಿ ತುಂಬಿ ಪ್ರಕಾಶಿಸುತ್ತದೆ.

'ಏಳಣ್ಣ'ದಲ್ಲಿ 'ಕಾಲ ಕಳೆಯಲು ಸಲ್ಲ' ಮರು ಚಣವು ಹೋದೇವು । ಇತ್ತ ಬರಲಿಕ್ಕಿಲ್ಲಿ ಮತ್ತೆ ಮರಳಿ' ಎಂಬ ಉಪದೇಶಾತ್ಮಕ ನುಡಿಯಿದೆ. ಆದರೆ ಅದೇ ಚಿಂತನೆ 'ಬೆಳಗು ಜಾವ' ದಲ್ಲಿ ಕವಿಯ ಚತುರ ಕಾವ್ಯ ಕಟ್ಟುವ ಕಲೆಯಲ್ಲಿ ಕಾವುಗೊಂಡು ಸಹೃದಯನ ಮನಸ್ಸನ್ನು ಸೆಳೆದದು ಆಡಿದಿ ಈ ಬದುಕಿನ ಕ್ಷಣಿಕತೆಯನ್ನು ಮನನ ಮಾಡಿಸಿರುವ ಗಾರುಡಿಗತನವಿದೆ.

ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ ಹೋದವರು ತಿರುಗಿ ಬಂದಾರೆ? ಅವರು ಬರಲಿಕ್ಕು ಇಲ್ಲ ಮರಳಿ

ಬೇಂದ್ರೆಯವರು 'ಓಮರನ ಉಕ್ತಿಗಳ ಪ್ರೇರಣೆಯಿಂದ ರಚಿಸಿದ' ಈ ಕವನಗಳಲ್ಲಿ ತಮ್ಮ ಜೀವನಾನು ಭವದ ದರ್ಶನವನ್ನು ನೀಡಿದ್ದಾರೆ, 'ಏಳಣ್ಣ' ಕವನದಲ್ಲಿ 'ರಸವೆ ಬಾಳು, ಉಳಿದೆಲ್ಲ ಹಾಳು; ಆ ಸಾಕ್ಷ್ಯ ಬೇರೆ ಬೇಕೆ? ಸುಖದ ಸಾರವನು ತಿಳಿಯದವಗೆ ಬದುಕಿದ್ದ ನೆಂಬುದೇಕೆ?' ಎಂದು ವಾಚ್ಯವಾಗಿ ಪ್ರಶ್ನಿಸಿದ್ದಾರೆ. ಆದರೆ 'ಬೆಳಗು ಜಾವ'ದಲ್ಲಿ ಮನುಷ್ಯನ ಜೀವನದಲ್ಲಿ ಸುಗ್ಗಿ – ಹರೆತನ ಒಮ್ಮೆ ಮಾತ್ರ ಬರುತ್ತದೆ. ಅದನ್ನು ಸವಿದು ಬಾಳು ಎಂಬ ವಾಸ್ತನ ಸತ್ಯವನ್ನು ಪ್ರಕೃತಿಯ ವರ್ಣನೆಯಲ್ಲಿ ಮತ್ತು ಮುಪ್ಪಾಗುವ ದೇಹ ಹಾಗೂ ಮನದ ಚಿಂತನೆಯ ಯೌವನವನ್ನು ಕಾವ್ಯ ಲೀಲೆಯಲ್ಲಿ ಕಂಡರಿಸಿದ್ದಾರೆ. ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ? ಮುಳುಗಿರಲಿ ಮುಪು ಚಿಂತನದಿ ತಾನು ಹರೆಯಕ್ಕೆ ಬೇರೆ ಹೊತ್ತೆ?

ಈ ಮಧುರ ಸುರ್ಯೋದಯ ಕಾವ್ಯ ವಿಶ್ಲೇಷಣಾ ಸಂದರ್ಭದಲ್ಲಿ ಅವರ 'ಜೀವನ ಕಲ್ಯಾಣ' ಕೋಲು ಹಾಡಿನ ಈ ಸಾಲುಗಳನ್ನು ಮನನ ಮಾಡುವುದು ಒಳಿತು. ಜೊತೆಗೆ ಅವರ ಪ್ರಖ್ಯಾತ ಚಿಂತನೆ 'ರಸವೆ ಜನನ । ವಿರಸ ಮರಣ । ಸಮ ರಸವೇ ಜೀವನ' ಎಂಬುದನ್ನು ಧ್ಯಾನಿಸುವುದು ಅರ್ಥಪೂರ್ಣ.

ಜೀವನ ಒಂದು ನಾಽಟಕಽ
ಹೂವು ಹಣ್ಣಿನ ಕೂಟಕಽ

* * *

ಬೇವಂಬೋದಾ ಅಧರದ ಮ್ಯಾಲೆ
ನೋವಂಬೋದು ಉದರದ ಒಳಗೆ

ಜೀವಂಬೋದು ಮಕ್ಕಳ ನೋಟ
ಮಾಯಾದೇವಿ ಮಾಟಕs ॥
ಹರೆಯೆಂಬೋದು ತೆರಿಹಾಂಗ
ಬಂತ ಅನ್ನತ ಹೊರಟಿತು ಬ್ಯಾಗ
ಬಾ ಸಿಂಗಾರದ ಬ್ಯಾಟಕs
ಮುಗಿಯsದ ಆಟಕs ॥ **(ಸೂರ್ಯಪಾನ)**


ಹಾರದಲ್ಲಿ ವ್ಯಾಪಾರವಿಲ್ಲ ಅರಿ ಜೀವಬಂಧು

ಬೆಳಗಾದ ಆನಂದದಲ್ಲಿ ಉಮರ್ ಖಯ್ಯಾಂ ತುಟಿ ಸವಿಯುವ ಪಾನಕೇಳಿ, ಪ್ರಿಯೆಯ ಮುದ್ದು, ಮಧುರ ಹಾಡಿನಲ್ಲಿ ಮೈ ಮರೆಯುವ ರಸಿಕನಾಗಿದ್ದಾನೆ. 'ಏಳಣ್ಣಿ'ದಲ್ಲಿ ಬೇಂದ್ರೆಯವರು ಉಮರ್ ಕಂಡ 'ಜೀವಬಂಧು' ವಿನ ಗುಣ ಲಕ್ಷಣವನ್ನು ಅದರ ಆಂತರ್ಯ ಮಿಡಿದಂತೆ ಹೀಗೆ ಚಿತ್ರಿಸಿದ್ದಾರೆ – 'ಹಾರದಲ್ಲಿ ವ್ಯಾಪಾರವಿಲ್ಲ ಅರಿ ಜೀವಬಂಧು. ಈ ಹಾರ ಅರ್ಥಾತ್ ಅಪೇಕ್ಷೆಯಲ್ಲಿ ವ್ಯಾಪಾರವಿಲ್ಲ. ಅದು ಪರಸ್ಪರ ಹೊಂದಾಣಿಕೆಯಲ್ಲಿ ಪಡೆದ ಆನಂದಾನುಭವ. ಅದು ಜೀವದಾನಂದದ ಒಬ್ಬರಿಗೊಬ್ಬರ ಕೊಡು ಕೊಳ್ಳುವಿಕೆ. ಲಾಭ ನಷ್ಟದಿಂದ ಕೂಡಿ ದ್ವೇಷ ಅಸೂಯೆಗೆ ಕಾರಣವಾಗಿ ಬಾಂಧವ್ಯದ ಬಿರುಕಿಗ ಕಾರಣವಾಗುವುದು ವ್ಯಾಪಾರದ ವ್ಯವಹಾರ. ಆದರೆ ಆತ್ಮೀಯ ಬಯಕೆಯಾದ 'ಹಾರ'ದಲ್ಲಿ ವ್ಯಾಪಾರವಿಲ್ಲ ವೆಂದು 'ರ' ಕಾರದ ಒಳಪ್ರಾಸದಲ್ಲಿ 'ಅರಿ' – ತಿಳಿ ಎಂದು ಬೇಂದ್ರೆ ಸಹೃದಯರಿಗೆ ಮನನವಾಗುವಂತೆ ತಿಳಿಸಿದ್ದಾರೆ.

ಒಲವು, ಸ್ನೇಹ, ಪ್ರೇಮ ಒಂದು ಆಪ್ತ ಸುಖ ಆನಂದ. ಅದನ್ನು ಬೇಂದ್ರೆಯವರು ಕೊಡುವದೇನು, ಕೊಳ್ಳುವದೇನು ಅವು ಒಂದರೊಳಗೆ ಒಂದು ಎಂಬ ಐಕ್ಯದಲ್ಲಿ ಒಂದಾದ ಶ್ರೇಷ್ಠ ಮಾನವ ನಡೆಯನ್ನು ತಿಳಿಸಿದ್ದಾರೆ. ಆ ಚಿಂತನೆಯಲ್ಲಿ ಹರಳುಗೊಂಡು ಅವರ ಮೌಲಿಕ ನುಡಿ ಹೀಗಿದೆ.

ಕೊಡುವುದೇನು? ಕೊಂಬುದೇನು?
ಒಲವು, ಸ್ನೇಹ, ಪ್ರೇಮ,
ಹೊರಗೆ ಬರಿದು, ಒಳಗೆ ಬಲಿದು
ಇದ್ದವರಿಗೆ ನೇಮ.' **(ಗಂಗಾವತರಣ)**

*



೧೭

ಓ ಕವಿಯೇ!

ಬೇಂದ್ರೆಯವರು ಕವಿಗಳನ್ನುದ್ದೇಶಿಸಿ 'ಓ ಕವಿಯೇ!' ಎಂಬ ಕವನ ರಚಿಸಿದ್ದಾರೆ. ಅದರಲ್ಲಿ ಕವಿಯ ಉದ್ದೇಶ ಸತ್ಯದ ಉದ್ದಾರ ಎಂದು ತಿಳಿಸಿದ್ದಾರೆ. ಆ ಸಾಧನೆಗಾಗಿ ಕವಿಯು ಉದ್ದೇಶ ರಹಿತವಾಗಿ ತನ್ನ ಮನಸ್ಸನ್ನು ತಣ್ಣಗಾಗಿಸಿಕೊಂಡು ಸಮಚಿತ್ತದಿಂದರಬೇಕು. ಆ ಬಗೆಯ ಸಾಮರ್ಥ್ಯವನ್ನು ಅವನು ಆಜೀಸಬೇಕು. ಈ ನೆಲದ ಬದುಕಿನಲ್ಲಿ ಅರ್ಥಪೂರ್ಣವಾಗಿ ಬಾಳಬೇಕು. ಸಾತ್ತ್ವಭರಿತನಾಗಬೇಕು. ಜ್ಞಾನ ಪ್ರಕಾಶದ ಬೆಳಕಿಗೆ ಕಣ್ಣನ್ನು ತೆರೆದು ತನ್ನೊಳಗಿನ ಬೆಳಕನ್ನು ಕಂಡುಕೊಳ್ಳಬೇಕು ಎಂದು ಸ್ಪಷ್ಟ ಪಡಿಸಿದ್ದಾರೆ.

> ಓ ಕವಿಯೇ, ಸತ್ಯದ ಉದ್ಧಾರಕ್ಕೆ ನೀನಾರೆ ತಣ್ಣ?
> ಬದುಕು, ಬಾಳು, ಸತ್ತ್ವತಾಳು, ಬೆಳಕಿಗೆ ತೆರೆ ಕಣ್ಣ. **(ಮರ್ಯಾದೆ)**

ಗೆಳೆತನಾ ಅಂದ್ರ ಏಕ ಜೀವಾ ಹೀಂಗs

> ಅಗ್ನಿ – ಸೋಮ,
> ಕೂಡ್ಯ ಅಂತಾವ ಆದಿತ್ಯಸಾಮ
> ಜೀವನಾ ಪಾವನಾ ಆಗಬೇಕಾದ್ರ
> ನಾವsನs ಆಗಬೇಕು ಪಾವಕಾ **(ಅಗ್ನಿ – ಸೋಮ : ಪರಾಕಿ)**

ಬೇಂದ್ರೆಯವರ ಕಾವ್ಯವನ್ನು ತಿಳಿಯಬೇಕಾದರೆ ಅವರು ಬಳಸಿರುವ ಪದಗಳ ಆಂತರ್ಯಮಿಡಿದು ಮನನ ಮಾಡಬೇಕಾಗುತ್ತದೆ. 'ಅಗ್ನಿ – ಸೋಮ. ಕೂಡ್ಯ ಅಂತಾವ ಆದಿತ್ಯಸಾಮ' ನುಡಿಯಲ್ಲಿ ಸೂರ್ಯನ ಬೆಂಕಿಯ ಝಳವನ್ನು ಸೂಚಿಸುತ್ತ ಅನಂತರ 'ಸೋಮ' ಪದ ಪ್ರಯೋಗಿಸಿದ್ದಾನೆ. ಅದಕ್ಕೆ ನಮಗೆ ತಕ್ಷಣ ಮನಸ್ಸಿಗೆ

ಬರುವ ಅರ್ಥ ಚಂದ್ರ ಮತ್ತು ಅಮೃತ. ಸೂರ್ಯನ ಬೆಳಕಿನಲ್ಲಿ ಬೆಳಗುವವನು ಚಂದ್ರ. ಅಗ್ನಿಯಾದ ರವಿ ಮತ್ತು ಚಂದ್ರರಲ್ಲಿರುವ ಸಾಮರಸ ಸಾಂಗತ್ಯವೇ 'ಆದಿತ್ಯಸಾಮ'.

ಕವಿ 'ಆದಿತ್ಯ ಸಾಮ' ಎಂಬ ಪ್ರತಿಮೆಯಲ್ಲಿ ಇಡೀ ಪ್ರಕೃತಿಯನ್ನು ಪ್ರತಿದಿನ ಚಂದ್ರನ ಗೆಳೆತನದಲ್ಲಿ ಶಾಂತಗೊಳಿಸುವ ಲಕ್ಷಣವನ್ನು ಹಿಡಿಟ್ಟಿದ್ದಾರೆ. ಅದು ಶಾಖ ಮತ್ತು ಶೈತ್ಯ ಒಂದಾಗಿ ಈ ಲೋಕವನ್ನು ಪೋಷಿಸುವ ಪ್ರಕೃತಿ ತತ್ತ್ವ. ಅವರಿಬ್ಬರ ಆತ್ಮೀಯ ಸ್ನೇಹವನ್ನು ರೂಪಕದಲ್ಲಿ ಹೀಗೆ ವರ್ಣಿಸಿದ್ದಾರಡೆ : 'ಗೆಳೆತನಾ ಅಂದ್ರೆ ಏಕಜೀವಾ ಹೀಂಗs'

ವಿರುದ್ಧ ಲಕ್ಷಣಗಳನ್ನು ಸಮನ್ವಯಿಸಿಕೊಂಡು ಇಡೀ ಲೋಕವನ್ನು ಸಮಾಧಾನ ಪಡಿಸುವವನು ಸೂರ್ಯನಾಗಿದ್ದಾನೆ. ಸೂರ್ಯಚಂದ್ರರ ಗೆಳೆತನವನ್ನು ಕಂಡಾಗ – ಸುಖ ದುಃಖ, ಕಷ್ಟ ಸುಖ, ಹುಟ್ಟು ಸಾವು, ಲಾಭ ನಷ್ಟಗಳನ್ನು ಸರಿದೂಗಿಸಿಕೊಂಡು ಮಾನವನು ಶಾಂತವಾಗಿ ಇತರ ಸಹಜೀವಿಗಳೊಂದಿಗೆ ತನ್ನ ಜೀವನವನ್ನು ಪಾವನಗೊಳಿಸಿಕೊಳ್ಳುವುದು ಹೇಗೆ ಎಂದು ಚಿಂತಿಸಬೇಕಾಗುತ್ತದೆ. ಅದಕ್ಕೆ ಬೇಂದ್ರೆ ನೀಡುವ ಸರಳ ಉತ್ತರ – 'ನಾವೇನೆ ಆಗಬೇಕು ಪಾವಕ'.

ಪಾವಕವೆಂದರೆ ಬೆಂಕಿ. ಅದು ಸದಾ ಪ್ರಕಾಶಮಾನ. ಅದರ ಗುಣ ಲಕ್ಷಣ ಶುದ್ಧಗೊಳಿಸಿಇ ಪಾವನವಾಗಿಸುವುದು. ಪಾವಕದ ಇನ್ನೊಂದು ಅರ್ಥ ಸದಾಚಾರ. ಪತಿವ್ರತೆಯೂ ಸದಾಚಾರ ಸಂಪನ್ನೆಯೂ ಆದ ಸೀತಾ ದೇವಿ ಅಗ್ನಿ ಪರೀಕ್ಷೆಯಿಂದ ಶುದ್ಧಳೆಂದು ತೀರ್ಮಾನಿಸಲ್ಪಟ್ಟವಳು. ಕವಿ ಮುದ್ದಣ ಶ್ರೀ ರಾಮನನ್ನು 'ಹಾ! ರಾಘವಾ! ಪಾವಕ ಪಾವನೆಯಂ ತೊರೆಯಲ್ಕೆಂತು ಮನಂದಂದೆಯ್?' (ರಾಮಾಶ್ವ ೨೫–೧೭) ಎಂದು ಪ್ರಶ್ನಿಸಿದ್ದಾನೆ. ಅಂತಹ ಪಾವಕ ಪಾವನರಾಗಬೇಕು ಎಂಬ ಹಿರಿದಾದ ಮಾನವ ಜೀವನ ತತ್ತ್ವವನ್ನು ಬೇಂದ್ರೆಯವರು ಜಗದ ಜನರಿಗೆ ನೀಡಿರುವುದೇ ಅವರ ಅಧ್ಯಾತ್ಮಾನುಭವ.

* * *



ಕನ್ನಡ ಸಾಹಿತ್ಯ ಪರಿಷತ್ತಿನ ಬಹಳ ಮುಖ್ಯವಾದ ಕಾರ್ಯಗಳಲ್ಲಿ ಪುಸ್ತಕ ಪ್ರಕಟಣೆ ಬಹಳ ಪ್ರಮುಖವಾಗಿದೆ. ಸಮಾಜದ ಎಲ್ಲಾ ವರ್ಗವನ್ನು ತಲುಪುವ ಮಹತ್ವದ ಉದ್ದೇಶದಿಂದ ಬಹುಮುಖಿಯಾದ ನೆಲೆಯಲ್ಲಿ ಪರಿಷತ್ತು ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳಲ್ಲಿ ಬಹಳ ಮುಖ್ಯವಾದದ್ದು ಪ್ರಾಚೀನ ಸಾಹಿತ್ಯದ ಪರಿಶೋಧಿತ ವಿದ್ವಾಂಸರಿಂದ ಮನ್ನಣೆ ಪಡೆದ ಕೃತಿಗಳನ್ನು ಗದ್ಯಾನುವಾದದ ಜೊತೆಗೆ ಪ್ರಕಟಿಸುವುದು. ಈ ಕೃತಿಗಳು ವಿದ್ವಾಂಸರಿಂದ ಹಿಡಿದು ಅಭ್ಯಾಸಿಗಳವರೆಗೆ ಎಲ್ಲರಿಗೂ ಉಪಯುಕ್ತವಾಗುವಂತಿವೆ. ಈ ಮಾಲಿಕೆಯಲ್ಲಿ ಇಂತಹ ಕೃತಿಗಳೂ ಇವೆ. ಪರಿಷತ್ತು ತನ್ನ ಆರಂಭಿಕ ದಿನಗಳಲ್ಲಿಯೇ ಪಠ್ಯಪುಸ್ತಕಗಳನ್ನು ಪ್ರಕಟಿಸಿತ್ತು. ಈ ಮಾದರಿಯಲ್ಲಿ ಪಠ್ಯಕ್ಕೆ ಪೂರಕವಾದ ಪುಸ್ತಕಗಳೂ ಇಲ್ಲಿವೆ. ಇವತ್ತು ಜ್ಞಾನ ಬಹಳ ವಿಸ್ತಾರವನ್ನು ಪಡೆಯುತ್ತಿದೆ. ಹಲವು ಕ್ಷೇತ್ರಗಳಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುತ್ತಿವೆ. ಈ ಕುರಿತು ಕನ್ನಡದಲ್ಲಿ ತಲಸ್ಪರ್ಶಿ ಪುಸ್ತಕಗಳಿಲ್ಲ. ಈ ಹಿನ್ನೆಲೆಯಲ್ಲಿ ಆಯಾ ಕ್ಷೇತ್ರದ ಪರಿಣಿತರಿಂದ ಅಧಿಕೃತ ಎನ್ನಿಸಬಲ್ಲ ಕೃತಿಗಳನ್ನೂ ರೂಪಿಸಿ ಈ ಮಾಲಿಕೆಯಲ್ಲಿ ಸೇರಿಸಲಾಗಿದೆ. ಮಂಡ್ಯದಲ್ಲಿ ಆಯೋಜಿತವಾಗಿರುವ ೮೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೮೭ ಪುಸ್ತಕಗಳು ಪ್ರಕಟವಾಗುತ್ತಿವೆ. ಇಲ್ಲಿ ಸಂಖ್ಯೆಗೆ ಮಾತ್ರವಲ್ಲದೆ ಗುಣಮಟ್ಟಕ್ಕೂ ಕೂಡ ಮಹತ್ವವನ್ನು ನೀಡುತ್ತಿದ್ದು ಪ್ರಾದೇಶಿಕ, ಸಾಮಾಜಿಕ, ಪ್ರತಿಭಾ ನ್ಯಾಯಗಳನ್ನೂ ಗಮನದಲ್ಲಿರಿಸಿಕೊಳ್ಳಲಾಗಿದೆ. ವಸ್ತು ವೈವಿಧ್ಯಕ್ಕೂ ಗಮನ ನೀಡಿದ್ದು ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಬೆಳವಣಿಗೆಗಳವರೆಗೂ ಪುಸ್ತಕಗಳು ಈ ಮಾಲಿಕೆಯಲ್ಲಿದೆ. ಇದು ಕನ್ನಡ ಸಾಹಿತ್ಯ ಪರಿಷತ್ತು ಮೌಲಿಕತೆ ಮತ್ತು ಸಮತೋಲನಕ್ಕೆ ನೀಡುವ ಮಹತ್ವಕ್ಕೂ ಸಾಕ್ಷಿಯಾಗಿದೆ.

ನಾಡೋಜ ಡಾ. ಮಹೇಶ ಜೋಶಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ: ೧೯೧೫

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮
ದೂರವಾಣಿ : ೦೮೦-೨೬೬೧೨೯೯೧, ೨೬೬೨೩೫೮೪, ೨೨೪೨೩೮೬೭, ೨೬೬೭೨೯೯೨
ಜಾಲತಾಣ : http://www.kasapa.in ಮಿಂಚಂಚೆ : kannadaparishattu@gmail.com
ಯೂಟ್ಯೂಬ್ : http://www.youtube.com/c/KannadaParishattu
ಟ್ವಿಟರ್ : kannadaparishad ಫೇಸ್‌ಬುಕ್ : ಕ.ಸಾ.ಪ. ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತು ISBN:978-93-48230-03-4
9789348230034